ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಜುಲೈ-೨೦೧೧ ಸಂಚಿಕೆ-೧೨



ಸಾಬರಮತಿಯಿಂದ ಜಂತರ್‌ಮಂತರ್; ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನ; ಮುಂದೆಲ್ಲಿಗೆ ?

ಜನಪದ ವಿಚಾರದಲ್ಲಿ

ಜುಲೈ - ೨೦೧೧

ಎಂಟು ದಶಕಗಳ ಹಿಂದೆ ಸಾಬರಮತಿಯಲ್ಲಿ ಸತ್ಯಾಗ್ರಹ ಪ್ರಾರಂಭವಾಯಿತು. ಅಂದಿನ ಸತ್ಯಾಗ್ರಹದಲ್ಲಿದ್ದ ಪಾವಿತ್ರ್ಯ, ದೇಶಾಭಿಮಾನ ೨೦೧೧ರ ರಾಮಲೀಲಾ ಮೈದಾನದಲ್ಲಿ ನಡೆದ ಸತ್ಯಾಗ್ರಹದಲ್ಲಿ ಅವು ಕಳೆದು ಹೋದವು. ಪ್ರಚಲಿತ ಸತ್ಯಾಗ್ರಹವನ್ನು ಗಾಂಧೀಯವರ ಸತ್ಯಾಗ್ರಹ ದೃಷ್ಟಿಕೋನದಿಂದ ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

ಯಾವ ಅಮೇರಿಕಾ, ಜಗತ್ತಿನಲ್ಲಿ ಸರ್ವಾಧಿಕಾರಿಗಳನ್ನು ಸೈನ್ಯ ಬಲದಿಂದ ಹತ್ತಿಕ್ಕಲು ಪ್ರಯತ್ನಿಸುತ್ತಿದೆಯೋ ಅದೇ ಅಮೇರಿಕಾದ ಜೀನ್ ಶಾರ್ಪ್ ಗಾಂಧೀಯವರ ಅಹಿಂಸಾ ಹೋರಾಟದ ವಕ್ತಾರನಾಗಿ ಸರ್ವಾಧಿಕಾರ ಬುಡಮೇಲಾಗಿಸುತ್ತಿರುವ ಉದಾಹರಣೆ ಈ ಲೇಖನದಲ್ಲಿದೆ.

ಶ್ರೀಕೃಷ್ಣನ ನಿರ್ಯಾಣವಾದ ದಿನವೇ ಕಲಿಯುಗ ಪ್ರಾರಂಭವಾಯಿತೆಂಬ ಗ್ರಹಿಕೆಯಿದೆ. ಭಾಗವತ ಕೃಷ್ಣನ ಕಥೆ. ಈ ಲೇಖನದಲ್ಲಿ ಕಲಿಯುಗ ಪ್ರಾರಂಭವಾಗುವುದಕ್ಕೆ ಕಾರಣವಾದ ಕೆಲಸಂಗತಿಗಳನ್ನು ಭಾಗವತ ದೃಷ್ಟಿಯಿಂದ ತಿಳಿಸಲಾಗಿದೆ.

ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಇಂಗ್ಲೆಂಡ್‌ನ ಯುವತಿ ಸ್ಲೇಡ್ ಭಾರತಕ್ಕೆ ಬಂದಾಗ ಗಾಂಧೀಜಿಯವರು ಅವಳಿಗೆ ಮೀರಾಬೆಹನ್ ಎಂದು ನಾಮಕರಣ ಮಾಡಿದರು. ಆ ಯುವತಿಯ ಭಾರತದಲ್ಲಿಯ ಸೇವಾಕಾರ್ಯ ಈ ಲೇಖನದಲ್ಲಿ ನಮೂದಿತವಾಗಿದೆ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ - ೨೦೧೧
ಸಂಪುಟ - ೧೧
ಸಂಚಿಕೆ - ೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಇನ್ನೆಷ್ಟು ದಿನ ಹೀಗೆ?

ಇನ್ನೆಷ್ಟು ದಿನ ಹೀಗೆ?
ಗಾಣಕ್ಕೆ ಕಟ್ಟಿದ ಎತ್ತಿನಂತೆ
ಸುಮ್ಮನಿರುವುದು
ಗೆದ್ದಲು ಕಟ್ಟಿದ ಹುತ್ತದೊಳಗೆ
ಹಾವೊಂದು
ಬೆಚ್ಚಗೆ ನಿದ್ರಿಸುವುದು

ಕಾಗೆ ಇಟ್ಟ ಮೊಟ್ಟೆಗಳ ನಡುವೆ
ಕೋಗಿಲೆಯೊಂದು
ತಣ್ಣಗೆ ಮರಿಯಾಗುವಂತೆ

ರೊಟ್ಟಿ ಕದ್ದು ಓಡಿಹೋದ ನಾಯಿಯನ್ನು
ತೋಳವೊಂದು
ಸದ್ದಿಲ್ಲದೆ ನುಂಗಿಬಿಡುವುದು

ಇನ್ನೆಷ್ಟು ದಿನ
ಮಿಸುಕಾಡದ ದೇವರುಗಳ ಮುಂದೆ
ಹರಕೆ ಹೊರುವುದು
ಹೊಲಸು ಹಾದಿಗಳ ಮೇಲೆ
ಚಿಂದಿಯುಟ್ಟು ಉರುಳುವುದು
ತಲೆ ಬೋಳಿಸಿಕೊಳ್ಳುವುದು
ಸತ್ತಮೇಲೂ ಸಾಯುವುದು?
ಕಪ್ಪು ದೇಹಗಳ
ಕೆಂಪಗಾಗಿಸುವ ಕುಲುಮೆಯೊಳಗೆ
ಬಿದ್ದು ಬೇಯಬೇಕು / ಪಡೆಯಬೇಕು
ಹಾರೆ ಗುದ್ದಲಿಗಳ ರೂಪ
ಹರಿತ ಕೊಡಲಿಯ ಚೂಪ

ನಾವೂ ಆಡೋಣ ಒಮ್ಮೆ
ಕಾಲ್ಚೆಂಡಿನಾ / ಹಸನು ಮಾಡಿದ
ಮೈದಾನದೊಳಗೆ

- ದಿಹಬಾಗಾಮಿ

ವಿಚಾರ ದೀಪ್ತಿ

ಮನುಷ್ಯನ ಜೀವನದ ಅರ್ಥದ ಬಗ್ಗೆ ಸಾವಿರಾರು ಇಸಂಗಳು, ತತ್ವಗಳು ಇವೆ. ಆದರೂ ನನಗೆ ನನ್ನ ಈ ಯಃಕಶ್ಚಿತ್ ಜೀವನದ ಅರ್ಥ ಮತ್ತು ಉದ್ದೇಶಗಳನ್ನು ಅದನ್ನು ಸ್ವತಃ ಹಾದು ಹೋಗುವುದರ ಮೂಲಕವೇ ತಿಳಿಯಬೇಕು ಎನ್ನುವುದು ಅರಿವಿಗೆ ಬಂದಿದೆ. ನಮಗಿಂತ ಹಿಂದೆ ಬದುಕಿದ ಹಿರಿಯರು ಹಾಕಿಕೊಟ್ಟ ಸುಖಜೀವನದ ಸೂತ್ರಗಳನ್ನು ಚಾಚೂತಪ್ಪದೇ ಪಾಲಿಸಿದರೂ ನನಗೆ ಸುಖವೆಂಬುದು ಸಿಕ್ಕಿಲ್ಲ. ಇದು ನನ್ನನ್ನು ಬರೆಯಲು ಪ್ರೇರೇಪಿಸುತ್ತದೆ.

ಅನ್ನ, ಬಟ್ಟೆ, ಸೂರುಗಳ ಸಮಸ್ಯೆಗಳು ನನಗಿಲ್ಲದಿದ್ದರೂ ನನ್ನ ಜೀವನದಲ್ಲಿ ಅಶಾಂತಿ ತುಂಬಿದೆ. ನನ್ನೊಳಗೆ ನೋಡಿಕೊಂಡರೆ ಲೋಭ, ಮೋಹ, ಕ್ರೋಧ, ಕಾಮ, ಅಹಂಕಾರಗಳು ನನ್ನ ಹೃದಯವನ್ನು ಚುರುಚೂರಾಗಿಸಿವೆ. ಹೊರಗಡೆ ಬದುಕನ್ನು ನೋಡಿದರೂ ಇವೇ ವಿಜೃಂಭಿಸುತ್ತಿವೆ. ನಮ್ಮ ಜಾಣಪೂರ್ವಿಕರು ಇವುಗಳನ್ನು ನಿರ್ವಹಿಸಲು ನಾನಾ ಉಪಾಯಗಳನ್ನು ಹಾಕಿಕೊಟ್ಟಿದ್ದಾರೆ. ಇದನ್ನು ಅಕ್ಷರಶಃ ಪಾಲಿಸಿಯೂ ನಾನು ಮಣ್ಣುಮುಕ್ಕುತ್ತೇನೆ. ಇದು ನನ್ನನ್ನು ಬರೆಯಲು ಪ್ರೇರೇಪಿಸುತ್ತದೆ.

ನಮ್ಮ ವ್ಯವಸ್ಥೆಯು, ನಮಗೆ ಒಂಟಿತನ ಬಾಧಿಸದಿರಲೆಂದು, ನಮ್ಮ ಸಂಬಂಧಗಳನ್ನು ರಕ್ಷಿಸಲು ಹಲವು ಸಂರಚನೆಗಳನ್ನು ಒದಗಿಸಿಕೊಟ್ಟಿದೆ-ಅಪ್ಪ, ಅಮ್ಮ, ಸೋದರ, ಸೋದರಿಯರು, ಗಂಡ, ಹೆಂಡತಿ ಇತ್ಯಾದಿ. ಮತ್ತು ಇವರೆಲ್ಲರಿಗೂ ಅವರವರ ಮುಖಗಳಿಗೆ ಭದ್ರವಾಗಿ ಅಂಟಿಕೊಳ್ಳಬಲ್ಲಂಥ ಮುಖವಾಡಗಳನ್ನೂ ಒದಗಿಸಿದೆ. ಆದರೆ ಸದಾ ಬದಲಾಗುತ್ತಿರುವ, ಅಸ್ಪಷ್ಟ ಸಂಬಂಧಗಳ ಕಟು ವಾಸ್ತವವು ಈ ಮುಖವಾಡಗಳನ್ನು ಭೇದಿಸಿ ಅಂತರಂಗವನ್ನು ಕತ್ತರಿಸುತ್ತದೆ. ಇದು ನನ್ನನ್ನು ಬರೆಯಲು ಪ್ರೇರೇಪಿಸುತ್ತದೆ.

ಪ್ರತಿ ಬದುಕೂ ಪ್ರತಿ ವಿವರಗಳಲ್ಲೂ ಅನನ್ಯ. ಆದ್ದರಿಂದ ಅದನ್ನು ಸಿದ್ಧಜಾಡಿಗಳಲ್ಲಿ ತುರುಕುವುದು ಅನ್ಯಾಯವೇ ಸರಿ. ಅದೂ ಎಂಥ ಜಾಡಿಗಳು, ಸಿದ್ಧ ಮೌಲ್ಯಗಳ ಸರಿ ತಪ್ಪುಗಳ ಜಾಡಿಗಳು. ಹಿಂಸೆಯ ಆರಂಭ ಇಲ್ಲಿಂದಲೇ. ಇದು ನನ್ನನ್ನು ಬರೆಯಲು ಪ್ರೇರೇಪಿಸುತ್ತದೆ.

ಉಪದೇಶ ಮಾಡಲು ನಾನು ಖಂಡಿತವಾಗಿಯೂ ಬರೆಯುವವಳಲ್ಲ ಅಥವಾ ಭವಿಷ್ಯವನ್ನು ಊಹಿಸಲು ಯಾವುದೋ ಇಸಂ ಅನ್ನು ಪ್ರತಿಪಾದಿಸಲು ಅಥವಾ ಯಾವೊಂದರ ಮೇಲೆಯೂ ನನ್ನ ನಿರ್ಣಯವನ್ನು ಹೇರಲು ಬರೆಯುವುದಿಲ್ಲ. ನಾನೇ ಎಷ್ಟು ದುರ್ಬಲಳಾಗಿದ್ದೇನೆಂದರೆ ನನಗೆ ಉಪದೇಶ ಕೊಡುವ ಯಾವ ನೈತಿಕ ಅಧಿಕಾರವೂ ಇಲ್ಲ. ಪ್ರತಿಕ್ಷಣದ ಅನೂಹ್ಯ ಸಾಧ್ಯತೆಗಳ ಬಗ್ಗೆ ಇರುವ ಎಚ್ಚರದಿಂದಾಗಿ ನನಗೆ ಯಾವುದರ ಬಗ್ಗೆಯೂ ನಿರ್ಣಾಯಕವಾಗಿ ಹೇಳುವುದು ಸಾಧ್ಯವೇ ಇಲ್ಲ. ಜಗತ್ತನ್ನು ನೋಡುತ್ತ ಅದರೊಳಗಿನ ಒಳ್ಳೆಯತನಗಳನ್ನೂ, ಕೊಳಕುಗಳನ್ನೂ, ಕ್ರೌರ್ಯಗಳನ್ನೂ ಬರೆಯುವ ಗಳಿಗೆಗಳಲ್ಲಿ ನನ್ನೊಳಗೆ ಬಿಟ್ಟುಕೊಳ್ಳುತ್ತ, ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇನೆ.

– *ಮೇಘನಾ ಪೇಠೆ*

ಸಾಬರಮತಿಯಿಂದ ಜಂತರ್‌ಮಂತರ್; ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನ; ಮುಂದೆಲ್ಲಿಗೆ ?

- ಸುರೇಂದ್ರ ಕೌಲಗಿ

ರಾಜಕೀಯದಲ್ಲೂ ಕೂಡ ಭಗವಂತನ ರಾಜ್ಯ ಸ್ಥಾಪಿತವಾಗಬೇಕಾಗಿದೆ. ಸತ್ಯವನ್ನು ಬಲಿಕೊಟ್ಟು ಸ್ವಾತಂತ್ರ್ಯ ಪಡೆಯುವುದಕ್ಕಿಂತ ಭಾರತ ವಿನಾಶಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ.

- ಮೋ.ಕ.ಗಾಂಧೀ

ಎರಡು ಸಾವಿರದ ಹನ್ನೊಂದು ಭಾರತ ತನ್ನ ಅಸ್ಮಿತೆಯನ್ನು ಕಂಡುಕೊಳ್ಳಲು ಹೋರಾಟ ನಡೆಸಿದ ಐತಿಹಾಸಿಕ ವರ್ಷ.

ಸ್ವಾತಂತ್ರ್ಯ ಬಂದಾಗಿನಿಂದ ಇಂದಿನವರೆಗೂ ಭ್ರಷ್ಟಾಚಾರದಿಂದ ಜಡ್ಡುಗಟ್ಟಿದ ಸಮಾಜವನ್ನು ತೊಳೆದು ಅದು ಲಕಲಕಿಸುವಂತೆ ಮಾಡಲು ಧೀರ ಪ್ರಯತ್ನವನ್ನು ಮಾಡಿದ ಐತಿಹಾಸಿಕ ವರ್ಷ; ಸಂವಿಧಾನಬದ್ಧವಾದ ಪ್ರಜಾತಂತ್ರ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ದೇಶ ಒಕ್ಕೊರಲಿನಿಂದ ಕೂಗಿದ ಮತ್ತು ಒಗ್ಗಟ್ಟಿನಿಂದ ಇಚ್ಛಾಶಕ್ತಿಯನ್ನು ದಾಖಲುಗೊಳಿಸಿದ ವರ್ಷ; ನ್ಯಾಯಾಧೀಶರು, ಮಂತ್ರಿಗಳು, ಅಧಿಕಾರಿಗಳು, ಜನತಾ ಪ್ರತಿನಿಧಿಗಳು ದೇವರ ಸಮಾನ. ಅವರನ್ನು ಮುಟ್ಟಬಾರದೆಂಬ ಅಜ್ಞಾನವನ್ನು ಕಿತ್ತೆಸೆದು ಯಾರು ಯಾವುದೇ ಕಾರಣಕ್ಕಾಗಿ ಎಷ್ಟೇ ದೊಡ್ಡವರಾಗಿರಲಿ ಅವರು ರಾಷ್ಟ್ರದ ಕಾನೂನಿಗಿಂತ ದೊಡ್ಡವರಲ್ಲ ಎಂಬ ಜ್ಞಾನವನ್ನು ಬೆಳೆಸಿಕೊಂಡ ವರ್ಷ. ನೂರು ವರ್ಷಗಳಿಗೊಮ್ಮೆ ಇತಿಹಾಸದ ಚಕ್ರ ಪೂರ್ಣವಾಗಿ ತಿರುಗುತ್ತದೆ ಎಂಬ ಮಾತಿಗೆ ಸಾಕ್ಷಿಯಾದ ವರ್ಷ; ಜಗತ್ತಿನ ಇತರ ಪ್ರಜಾಪ್ರಭುತ್ವ ದೇಶಗಳಿಗೆ ಮಾದರಿಯಾಗಬೇಕೆಂಬ ಮಹತ್ವಾಕಾಂಕ್ಷೆಯ ಈಡೇರಿಕೆಗಾಗಿ ಸತ್ಯಾಗ್ರಹವೆಂಬ ನಾಗರಿಕ ಸಾಧನವನ್ನು ಪುನರುಜ್ಜೀವಿತಗೊಳಿಸಿದ ವರ್ಷ.

ಕೈಗೊಳ್ಳಲಾಗಿರುವ ಸತ್ಯಾಗ್ರಹ ಗಾಂಧೀ ರೂಪಿಸಿದ ಸತ್ಯಾಗ್ರಹ ನೀತಿಗನುಗುಣವಾಗಿದೆಯೇ ಮತ್ತು ಅದರಲ್ಲಿ ತೊಡಗಿಕೊಂಡಿರುವ ಸತ್ಯಾಗ್ರಹಿಗಳು ಗಾಂಧೀ ರೂಪಿಸಿದ್ದ ಸತ್ಯಾಗ್ರಹಿಗಳ ಗುಣಲಕ್ಷಣಗಳಿಗನುರೂಪವಾಗಿದ್ದಾರೆಯೇ ಮತ್ತು ಸತ್ಯಾಗ್ರಹವು ಉದ್ದೇಶಿತ ಗುರಿಯನ್ನು ಈಡೇರಿಸಿಕೊಳ್ಳುವಷ್ಟು ಆತ್ಮಶಕ್ತಿಯುಳ್ಳದ್ದಾಗಿದೆಯೇ ಮತ್ತು ಅದರ ಬೆಂಬಲಿಗರಿಗೆ ಸತ್ಯಾಗ್ರಹ ಹಾಗೂ ಸತ್ಯಾಗ್ರಹಿ ಕುರಿತಾದ ವಿಚಾರಗಳು ಸ್ಪಷ್ಟವಾಗಿ ತಿಳಿದಿದೆಯೇ ಎಂಬೀ ಮುಂತಾದ ಪ್ರಶ್ನೆಗಳೂ ಉದ್ಭವಿಸುತ್ತವೆ.

ಈಗ ನಡೆಯುತ್ತಿರುವ ಸತ್ಯಾಗ್ರಹ 'ಭ್ರಷ್ಟಾಚಾರ'ದ ವಿರುದ್ಧ. ಆದರೆ

ಇದುವರೆಗೆ ಭ್ರಷ್ಟಾಚಾರದ ನಿಖರ ವ್ಯಾಖ್ಯೆ ಸಮಾಜದ ಮುಂದೆ ಯಾರಿಂದಲೂ ಮಂಡಿಸಲಾಗಿಲ್ಲ. ಯಾರು ಬೇಕಾದರೂ ತಮ್ಮ-ತಮ್ಮ ಅನುಭವದ ನೆಲೆಗಟ್ಟಿನಲ್ಲಿ ಅದರ ವ್ಯಾಖ್ಯೆಯನ್ನು ಮಾಡಬಹುದಾಗಿದೆ. ಇಂಥ ಅಸ್ಪಷ್ಟ ಮತ್ತು ಅನುಕೂಲಕ್ಕೆ ತಕ್ಕಂತೆ ಹಿಗ್ಗಿಸಬಹುದಾದ ಅಥವಾ ಮಿತಗೊಳಿಸಬಹುದಾದ ವಿಷಯದ ವಿರುದ್ಧ ಸತ್ಯಾಗ್ರಹ ಹೂಡುವುದೆಂದರೆ ಕರಿಬೆಕ್ಕೊಂದನ್ನು ಕುರುಡನೊಬ್ಬ ಕತ್ತಲೆಯಲ್ಲಿ ಹಿಡಿಯ ಹೋದಂತೆಯೇ ಸರಿ. ಆದ್ದರಿಂದಲೇ ಲೋಕಪಾಲ ಮಸೂದೆಯನ್ನು ತಯಾರಿಸಲು ಹತ್ತು ಜನ ಮೇಧಾವಿಗಳು ಹತ್ತುದಿನ ತಿಣುಕುತ್ತ ಎಂಟು ಬಾರಿ ಸಭೆ ನಡೆಸಿ ವಿಫಲರಾದರಲ್ಲದೆ ಕೊನೆಗೆ ಆ ವಿಫಲತೆಗೆ 'ನಾವಲ್ಲ-ಅವರು ಕಾರಣ' ಎಂದು ಪರಸ್ಪರ ದೋಷಾರೋಪಣೆಗೆ ಅವಕಾಶಕೊಟ್ಟು ಸಂವಾದದ ಸ್ಥಳದಿಂದ ಹೊರಬರಬೇಕಾಯಿತು. ಜನತೆ ಈ ಹತ್ತು ಮೇಧಾವಿಗಳ ಮೇದಾಶಕ್ತಿ ಮತ್ತು ಕ್ರಿಯಾಶಕ್ತಿಗಳ ಮೇಲೆ ಎಷ್ಟೊಂದು ವಿಶ್ವಾಸವಿಟ್ಟಿತ್ತೆಂದರೆ ಸ್ವತಃ ಭ್ರಷ್ಟಾಚಾರ ನಿರ್ಮೂಲನ ತನ್ನ ಸ್ತರದಲ್ಲಿ ಹೇಗೆ ಸಾಧ್ಯ, ಮತ್ತು ಅದಕ್ಕಾಗಿ ಕೈಗೊಳ್ಳಬಹುದಾದ ಕ್ರಿಯಾನ್ವಯವೇನು ಎಂದು ಆಲೋಚಿಸುವುದನ್ನೇ ಬಿಟ್ಟಿತು! ಭ್ರಷ್ಟಾಚಾರ ನಿರ್ಮೂಲನದ ಗುತ್ತಿಗೆಯನ್ನು ಆ ಮೇಧಾವಿಗಳಿಗೆ ಒಪ್ಪಿಸಿ ೨೨೦ ಕೋಟಿ ಜನ ಕುಂಭಕರ್ಣ ನಿದ್ದೆಗೆ ಹೋಯಿತು. ಸತ್ಯಾಗ್ರಹದ ಅರ್ಥ ಬೇರೆಯವರ ವಿಚಾರಶಕ್ತಿಯನ್ನು ಕುಂಠಿತಗೊಳಿಸುವುದೆಂದಲ್ಲ; ಬದಲಿಗೆ ಯಾವ ವಿಷಯವಾಗಿ ಸತ್ಯಾಗ್ರಹ ನಡೆಯುತ್ತಿದೆಯೋ ಆ ವಿಷಯದ ಬಗ್ಗೆ ಪ್ರತಿಯೊಬ್ಬರೂ ಚಿಂತನೆ ಮಾಡುವಂತೆ ಮತ್ತು ತನ್ನನ್ನು ಮುಂದಿನ ಹೋರಾಟಕ್ಕೆ ಸಮರ್ಥ ಸತ್ಯಾಗ್ರಹಿಯನ್ನಾಗಿ ಸಿದ್ಧಮಾಡಿಕೊಳ್ಳುವಂತೆ ಪ್ರೇರೇಪಿಸುತ್ತದೆ.

ಏಪ್ರಿಲ್ ೧೧ರಂದು ಜಂತರ್‌ಮಂತರ್‌ನಲ್ಲಿ ನಡೆದ ಗಾಂಧೀಪ್ರಣೀತ ಮೊಟ್ಟಮೊದಲ ಸತ್ಯಾಗ್ರಹದಿಂದ ದೇಶದಲ್ಲೆಲ್ಲ ಆ ಉಪವಾಸದ ಸಮರ್ಥನೆಗಾಗಿ ಧರಣಿ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮಗಳಲ್ಲಿ ಸಮಾಜದ ವಿವಿಧ ಬಗೆಯ ಮತ್ತು ವಿವಿಧ ಕ್ಷೇತ್ರದ ಜನರು ಭಾಗವಹಿಸಿದರು. ಭ್ರಷ್ಟಾಚಾರದ ವಿರುದ್ಧ ದೇಶ ಸಂಘಟಿತವಾಗಿ ಕೂಗನ್ನು ಹಾಕಿತು ಮತ್ತು ಸಾಂಕೇತಿಕವಾಗಿ ತನ್ನ ಬೆಂಬಲವನ್ನು ಸೂಚಿಸಿತು. ಆದರೆ ಭ್ರಷ್ಟಾಚಾರ ಬೆಳೆಯಲು ಇರುವ ಕಾರಣಗಳ ಬಗ್ಗೆ ಗಂಭೀರವಾದ ಆತ್ಮವಿಮರ್ಶೆ ನಡೆಯಲಿಲ್ಲ; ಆತ್ಮಾವಲೋಕನ ನಡೆಯಲಿಲ್ಲ. ಲೋಕಪಾಲ್ ವ್ಯವಸ್ಥೆಯೊಂದು ಜಾರಿಗೆ ಬರಬೇಕು. ಅದು ಬಂದರೆ ಭ್ರಷ್ಟಾಚಾರ ಹೊರಟು ಹೋಗುತ್ತದೆ ಎಂಬ ಭ್ರಮೆಯಲ್ಲಿ ಜನರು ಉಳಿದರು. ದೇಶದ ಜನರ ಮನಸ್ಸಿನಲ್ಲಿಯೇ ಆಳವಾಗಿ ಬೇರೂರಿರುವ ಭ್ರಷ್ಟಾಚಾರದ ಬಗೆಗಿನ ಪರೋಕ್ಷ ಸಮ್ಮತಿಯನ್ನು ತೊಲಗಿಸಿ ಮನಸ್ಸನ್ನು ಶುದ್ಧಗೊಳಿಸುವ ಪ್ರಯತ್ನ ನಡೆಯಲಿಲ್ಲ.

ಭ್ರಷ್ಟಾಚಾರ ನಿರ್ಮೂಲನ ಮತ್ತು ಕಪ್ಪುಹಣದ ನಿರ್ಮೂಲನ ಮೂಲತಃ ಒಂದೇ ವಿಷಯವಾದರೂ ಇವೆರಡೂ ಬೇರೆ-ಬೇರೆ ವಿಷಯಗಳೆಂದು ಪರಿಭಾವಿಸಿ ಒಂದೊಂದು ವಿಷಯಕ್ಕೆ ಒಬ್ಬೊಬ್ಬ ನಾಯಕನ ನೇತೃತ್ವದಲ್ಲಿ ಒಂದೊಂದು ಪ್ರತ್ಯೇಕ-ಪ್ರತ್ಯೇಕ 'ಸತ್ಯಾಗ್ರಹ'ಗಳು ನಡೆದವು. ಈ ರೀತಿ ನಡೆದದ್ದು ಮೂಲ ಸತ್ಯಾಗ್ರಹದ ಶಕ್ತಿಗೆ ಧಕ್ಕೆಯನ್ನುಂಟುಮಾಡಿತು. ಜಂತರ್‌ಮಂತರ್‌ನಲ್ಲಿಯ ಸತ್ಯಾಗ್ರಹ ಬೆಂಬಲಿಗರೇ ಬೇರೆ, ರಾಮಲೀಲಾ ಮೈದಾನದಲ್ಲಿಯ ಸತ್ಯಾಗ್ರಹದ ಬೆಂಬಲಿಗರೇ ಬೇರೆ ಎಂದು

ಸಾರ್ವತ್ರಿಕವಾಗಿ ಅಭಿಪ್ರಾಯ ಮೂಡಿತು. ಇಬ್ಭಾಗವಾಗುವಿಕೆಯ ಇಂಥ ಪರಿಸ್ಥಿತಿ ಗಾಂಧೀಯವರ ನೇತೃತ್ವದಲ್ಲಿ ನಡೆದ ಯಾವುದೇ ಸತ್ಯಾಗ್ರಹಕ್ಕೆ ಬಂದಿರಲಿಲ್ಲ. ಅಲ್ಲಿ ಒಂದೇ ಗುರಿ, ಒಬ್ಬನೇ ನಾಯಕನಿದ್ದ. ಆದ್ದರಿಂದ ಗಾಂಧೀಜಿಯವರ ಎಲ್ಲ ಸತ್ಯಾಗ್ರಹಗಳು ಯಶಸ್ಸಿನಲ್ಲಿ ಮುಕ್ತಾಯಗೊಂಡವಲ್ಲದೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಹಾಗೂ ಅದನ್ನು ವಿರೋಧಿಸಿದ್ದವರನ್ನೆಲ್ಲ ಹೆಚ್ಚು ಪರಿಶುದ್ಧರನ್ನಾಗಿ ಹೊರಹೊಮ್ಮಿಸಿತು. ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನಕ್ಕೆ ನಡೆದ ಸತ್ಯಾಗ್ರಹದ ಯಾತ್ರೆ ಮೂಲ ಸತ್ಯಾಗ್ರಹದ ಉದ್ದೇಶ್ಯ ವಿಫಲವಾಗುವುದಕ್ಕೆ ಕಾರಣವಾಯಿತಲ್ಲದೆ 'ಸತ್ಯಾಗ್ರಹ ಮತ್ತು ಸತ್ಯಾಗ್ರಹಿ' ಎಂಬ ಪದಗಳು ತಮ್ಮ ಪಾವಿತ್ರ್ಯತೆಯನ್ನೂ, ಮೌಲ್ಯವನ್ನೂ ಕಳೆದುಕೊಂಡವು. ಅಲ್ಲದೆ ಮುಖ್ಯವಾಗಿ ಜಂತರ್‌ಮಂತರ್‌ನಲ್ಲಿಯ ಮೂಲ ಸತ್ಯಾಗ್ರಹ ಉದ್ದೇಶ್ಯದ ಮೇಲೆ ತಣ್ಣೀರೆರಚಲು ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟಂತಾಯಿತು.

ಭ್ರಷ್ಟಾಚಾರ ವಿರೋಧಿ ಸತ್ಯಾಗ್ರಹದ ಮುಂದೆ ಇರುವ ಮುಖ್ಯ ಸಮಸ್ಯೆಗಳು :-

೧) ಭ್ರಷ್ಟಾಚಾರ ನಿರ್ಮೂಲನಾ ಕಾರ್ಯದಲ್ಲಿ ಸರ್ಕಾರ ವಿಫಲವಾಗಿದೆ. ಸ್ವಾತಂತ್ರ್ಯ ಬಂದ ದಿನದಿಂದಲೂ ಅಂದರೆ ಕಾಂಗ್ರೆಸ್ ಪಕ್ಷದ ಮೂಲಕ ಭಾರತೀಯರೇ ದೇಶದ ಆಡಳಿತ ಸೂತ್ರ ಹಿಡಿದಾಗಿನಿಂದಲೂ ಆಡಳಿತದಲ್ಲೂ, ರಾಜಕೀಯ ಪಕ್ಷಗಳಲ್ಲೂ ಜನತೆಯಲ್ಲೂ ಭ್ರಷ್ಟಾಚಾರ ಬೆಳೆಯುತ್ತ ಬಂದಿದೆ. ಅಸಹನೀಯವಾಗುವಷ್ಟು ಮತ್ತು ದೇಶದ ಸಂವಿಧಾನಾತ್ಮಕ ಪ್ರಜಾತಂತ್ರ ವ್ಯವಸ್ಥೆಯನ್ನು ಬುಡಮೇಲು ಮಾಡುವಷ್ಟು ಅದು ಬೆಳೆದಿದೆ;

೨) ಜನತೆ ದುರ್ಬಲವಾಗಿದೆ; ಅಧಿಕಾರಿಗಳು ಮತ್ತು ಮುಖಂಡರು ಅತಿಶಯ ಶಕ್ತಿಯುಳ್ಳವರಾಗಿದ್ದಾರೆ;

೩) ಮುಖಂಡರು ಮತ್ತು ಅಧಿಕಾರಿಗಳು ಜನತೆಯ ಸೇವಕರಾಗುವ ಬದಲು ಅವರೇ ಯಜಮಾನರಾಗಿದ್ದಾರೆ, ಈಗ ಈ ಚಿತ್ರಣವನ್ನು ಬದಲಾಯಿಸಬೇಕಿದೆ;

೪) ಸರ್ಕಾರ ಮತ್ತು ಪಕ್ಷಗಳ ಶಕ್ತಿಗಿಂತ ಜನತಾಶಕ್ತಿ ಬಹು ದೊಡ್ಡದು ಮತ್ತು ಬಲಯುತವಾದುದೆಂದು ಸಿದ್ಧಪಡಿಸಬೇಕಿದೆ;

೫) ಬ್ರಿಟಿಷರ ಆಡಳಿತದ ವಿರುದ್ಧ ಯಾವ ಪ್ರಕಾರ ಅಹಿಂಸಾತ್ಮಕ ಹೋರಾಟ ನಡೆಯಿತೋ ಅದೇ ಮಾದರಿಯಲ್ಲಿ ಎರಡನೇ ಸ್ವಾತಂತ್ರ್ಯ ಚಳುವಳಿ ನಡೆಯಬೇಕೆಂಬ ಇಚ್ಛೆ ಇದೆ;

೬) ಜಂತರ್‌ಮಂತರ್ ಮತ್ತು ರಾಮಲೀಲಾ ಮೈದಾನದಲ್ಲಿ ನಡೆದ ಸತ್ಯಾಗ್ರಹಗಳ ಬದಲಾಗಿ ದೇಶದಾದ್ಯಂತ ಅಹಿಂಸಾತ್ಮಕ ಅಸಹಕಾರ ಚಳುವಳಿ ನಡೆಸಿದ್ದರೆ ಭ್ರಷ್ಟಾಚಾರ ನಿರ್ಮೂಲನ ಆಂದೋಲನಕ್ಕೆ ಬಲವಾದ ಜನಶಕ್ತಿ ದೊರೆಯಲು ಸಾಧ್ಯವಾಗುತ್ತಿತ್ತು. ಇಡೀ ದೇಶದಲ್ಲಿಯೇ ಅತ್ಯದ್ಭುತವಾದ ಜನಜಾಗೃತಿ ಉಂಟಾಗುತ್ತಿತ್ತು; ಜನತಾಶಿಕ್ಷಣವೂ ಆಗುತ್ತಿತ್ತು.

೭) ಲೋಕಪಾಲ್ ಮತ್ತು ಲೋಕಾಯುಕ್ತ ಎಂಬ ಪೂರ್ಣ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಿದರೆ ಭ್ರಷ್ಟಾಚಾರ ತೊಲಗುವುದು ಎಂಬ ವಿಚಾರ ಭ್ರಷ್ಟಾಚಾರ ನಿರ್ಮೂಲನಾ ಚಳುವಳಿ ಸಮಿತಿಯ ನಾಗರಿಕ ಸದಸ್ಯರಿಗಿದೆ;

೮) ಸರ್ಕಾರವು ಸಹ ಒತ್ತಡಕ್ಕೆ ಮಣಿದು ಬಲಯುತವಾದ ಲೋಕಪಾಲ್

ಮಸೂದೆಯನ್ನು ಲೋಕಸಭೆಯ ಮಳೆಗಾಲದ ಅಧಿವೇಶನದಲ್ಲಿ ಕಡ್ಡಾಯವಾಗಿ ಮಂಡಿಸುವುದಾಗಿ ಘೋಷಿಸುತ್ತಿದೆ;

೯) ನಾಗರಿಕ ಸಮಿತಿಯ ಸದಸ್ಯರಿಗೆ ಈ ವಿಷಯದಲ್ಲಿ ಸರ್ಕಾರದ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ;

೧೦) ಸತ್ಯಾಗ್ರಹ ಪರಸ್ಪರರ ಅಪನಂಬಿಕೆಯ ಘಟ್ಟ ತಲುಪಿದೆ.

೧೧) ಅಪನಂಬಿಕೆಯ ಘಟ್ಟ ತಲುಪಿದಾಗ ಸತ್ಯಾಗ್ರಹ ಶಾಸ್ತ್ರದ ಪ್ರಕಾರ ಪರಸ್ಪರರ ಮನವೊಲಿಸುವ ಮತ್ತು ತಮ್ಮ ಹೋರಾಟದ ಅಂತಿಮ ವಿಜಯದ ಕಡೆಗೆ ಒಂದು ಹೆಜ್ಜೆ ಸಾಕು ಎಂಬ ನಿಲುವನ್ನು ತಾಳಿ ಮೊದಲಿನ ಪರಿಸ್ಥಿತಿಗಿಂತ ಉತ್ತಮ ಪರಿಸ್ಥಿತಿಗೆ ಹೋದ ಬಗ್ಗೆ ಸಧ್ಯಕ್ಕೆ ತೃಪ್ತಿ ಪಡುವುದು;

೧೨) ಯಾವ ಸಮಸ್ಯೆಯ ಸೃಷ್ಟಿಗೆ ಜನತೆಯೇ ಮೂಲತಃ ಕಾರಣವಾಗಿದೆಯೋ ಆ ಜನತೆಯ ಚರ್ಯೆಯನ್ನು ಸುಧಾರಿಸುವ ಕೆಲಸವನ್ನು ಎರಡೂ ಪಕ್ಷದವರು ಮಾಡುವುದು;

೧೩) ಸಮಸ್ಯೆಯ ಪರಿಹಾರಕ್ಕಾಗಿ ಒಂದು ಸೂತ್ರ ಸಿದ್ಧವಾಗಿರುವಾಗ ಸ್ವಪ್ರತಿಷ್ಠೆಯ ಕಾರಣಗಳಿಂದಾಗಿ ಅದನ್ನು ಎರಡೂ ಪಕ್ಷದವರು ಎಳೆಯುತ್ತಾ ಹೋದರೆ ಆ ಸೂತ್ರವು ಕಿತ್ತು ಹೋಗುವುದು. ನಂತರ ಪುನಃ ಅ ಸೂತ್ರವನ್ನು ಮೊದಲಿನ ಸ್ಥಿತಿಗೆ ತರುವುದು ಕಷ್ಟವಾಗುವುದು;

೧೪) ಸತ್ಯಾಗ್ರಹದಲ್ಲಿ ಸತ್ಯಶೋಧನೆಯ ಮಾರ್ಗವನ್ನು ಕಂಡುಕೊಳ್ಳುವ ಪ್ರಯತ್ನವಿರುತ್ತದೆ. ಇಂದಿನ ಸತ್ಯಾಗ್ರಹಿಗಳು ಸತ್ಯಶೋಧಕರಲ್ಲ; ಅವರ ಪ್ರಯತ್ನದ ಉದ್ದೇಶ್ಯ ಸೀಮಿತ. ಇಲ್ಲಿ ಪರಸ್ಪರ ಆರೋಪ-ಪ್ರತ್ಯಾರೋಪಗಳು ಮತ್ತು ಕೋಪ-ತಾಪಗಳಿವೆ. ಇದು ಸತ್ಯಾಗ್ರಹಶಾಸ್ತ್ರಕ್ಕೆ ವಿರೋಧವಾದುದು. ಇದಕ್ಕೊಂದು ಗಾಂಧೀಕಾಲದ ಉದಾಹರಣೆ ಇಲ್ಲಿದೆ:-

'ದಿಲ್‌ಕುಶ್'
ಪಂಚಗಣಿ
೧೭ ಜುಲೈ ೧೯೪೪

ಪ್ರಿಯ ಪ್ರಧಾನಮಂತ್ರಿಯವರೇ, (ಚರ್ಚಿಲ್‌ರವರೇ)

ನೀವು ನನ್ನನ್ನು ಅರೆಬೆತ್ತಲೆ ಫಕೀರ ಎಂದು ವರ್ಣಿಸಿದ್ದೀರಿ ಎಂಬುದಾಗಿಯೂ ಹಾಗೂ ನನ್ನನ್ನು ತುಳಿಯ ಬಯಸಿದ್ದೀರೆಂಬುದಾಗಿಯೂ ವರದಿಯಾಗಿದೆ. ನಾನು ಬಹಳ ಕಾಲದಿಂದ ಫಕೀರನಾಗಲು ಅದರಲ್ಲೂ ಅರೆಬೆತ್ತಲೆ ಫಕೀರನಾಗಲು ಪ್ರಯತ್ನಿಸುತ್ತಿದ್ದೇನೆ. ಅದು ಬಹಳ ಕಷ್ಟದಾಯಕ. ಆದ್ದರಿಂದ ನಿಮ್ಮ ಆ ವ್ಯಕ್ತವ್ಯ ಉದ್ದೇಶ್ಯಪೂರ್ವಕವಲ್ಲದ ಅಭಿನಂದನೆಯೆಂದೇ ನಾನು ಭಾವಿಸುತ್ತೇನೆ. ಫಕೀರನಾಗಿಯೇ ನಿಮ್ಮನ್ನು ಸಂಧಿಸುತ್ತೇನೆ ಮತ್ತು ನನ್ನನ್ನು ನಿಮ್ಮ ಜನತೆಗಾಗಿ ಹಾಗು ಅವರ ಮೂಲಕ ಸಮಸ್ತ ಜಗತ್ತಿನ ಜನತೆಗಾಗಿ ಉಪಯೋಗಿಸಿಕೊಳ್ಳಿ ಎಂದು ಕೋರುತ್ತೇನೆ.

ನಿಮ್ಮ ವಿಶ್ವಾಸಪೂರ್ವಕ ಸ್ನೇಹಿತ
ಎಂ.ಕೆ. ಗಾಂಧೀ

೧೪) ಈಗಿನ ಸಂಧಾನ ಸಮಿತಿ ಅನ್ನಿ ಅಥವಾ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ ಅನ್ನಿ ಅದಕ್ಕೆ ಯಾವುದೇ ಪ್ರಸ್ತುತ ಕಾಯ್ದೆಯಡಿ ಮಾನ್ಯತೆಯಿಲ್ಲ; ಅದೊಂದು ಏಕಾಏಕಿ ಸೃಷ್ಟಿಯಾದ ಸಮಿತಿ; ಸಮಿತಿ ರಚನೆಯ ಪೂರ್ವದಲ್ಲಿಯಾಲೀ, ಸತ್ಯಾಗ್ರಹ ಪ್ರಾರಂಭಿಸುವ ಮೊದಲಾಗಲೀ ಜನತೆಯ ನೈತಿಕ ಬೆಂಬಲವನ್ನೂ, ಮನೋಸ್ಥೈರ್ಯವನ್ನೂ ಸಿದ್ಧಪಡಿಸಿರಲಿಲ್ಲ; ಆದ್ದರಿಂದ ಆಗಸ್ಟ್ ೧೬ರ ನಂತರದ ಆಮರಣ ಉಪವಾಸದ ಕಾರಣದಿಂದ ಉಂಟಾಗಬಹುದಾದ ಸಾಮಾಜಿಕ ಮತ್ತು ರಾಜಕೀಯ ಅರಾಜಕತೆಯನ್ನು ಸಮಸ್ತ ಜನತೆಯ ವಿಶ್ವಾಸವನ್ನು ಪಡೆದು ನಿರ್ವಹಿಸುವ ವ್ಯಕ್ತಿ ಅಥವಾ ವ್ಯವಸ್ಥೆ ಯಾವುದು?

೧೭) "ಹಿಮಾಲಯದಂಥ ತಪ್ಪುಮಾಡಿದೆ" ಎಂದು ಒಪ್ಪಿಕೊಳ್ಳುವ ಶ್ರೇಷ್ಠ ಸತ್ಯಾಗ್ರಹಿ ಮಾರ್ಗದರ್ಶಕರಾರು?

೧೮) ಸತ್ಯಾಗ್ರಹಿ ಸಮರಕ್ಕೆ ಹೇಗೆ ಸಿದ್ಧನೋ ಹಾಗೆಯೇ ಶಾಂತಿಗೂ ಸಿದ್ಧನಿರಬೇಕು.

೧೯) ಸತ್ಯಾಗ್ರಹವನ್ನು ಯಾವ ಉದ್ದೇಶ್ಯಕ್ಕಾಗಿ ಪ್ರಾರಂಭಿಸಲಾಗುವುದೋ ಆ ಉದ್ದೇಶ್ಯ ನೆರವೇರುವವರೆಗೆ ಸತ್ಯಾಗ್ರಹಶಾಸ್ತ್ರಕ್ಕನುಗುಣವಾಗಿ ನಡೆಯುತ್ತ ಹೋಗಬೇಕು. ಬೇರೊಂದು ವಿಷಯ ಎಷ್ಟೇ ಆಕರ್ಶಕವಾಗಿ ಕಂಡರೂ ಅದರಿಂದ ದೂರವಿರಬೇಕು. ಇದು ಸತ್ಯಾಗ್ರಹಿಯ ಮೂಲಗುಣ. ಆದರೆ ಈಗ ಭ್ರಷ್ಟಾಚಾರ ನಿರ್ಮೂಲನ ಆಂದೋಲನಕ್ಕೆ 'ಪ್ರಜಾಪ್ರಭುತ್ವ ಉಳಿಸಿ' ಎಂಬ ಆಂದೋಲನವನ್ನು ಜೋಡಿಸಲಾಗಿದೆ. ಒಟ್ಟಿಗೆ ಎರಡೂ ಆಂದೋಲನಗಳು ನಡೆಯುವುದಾಗಿ ಘೋಷಿಸಲಾಗಿದೆ. ಏಕಕಾಲಕ್ಕೆ ಎರಡು ಕುದುರೆ ಸವಾರಿಮಾಡುವುದು ಸವಾರನಿಗೆ ಗಂಡಾಂತರಕಾರಿ. ಆ ಭಯ ಈಗ ಉಂಟಾಗಿದೆ. ಗಾಂಧೀಜಿಯವರು ತಮ್ಮ ಸಾಬರಮತಿ ಆಶ್ರಮದಿಂದ ಉಪ್ಪಿನ ಸತ್ಯಾಗ್ರಹ ಪ್ರಾರಂಭಿಸಿದರು. ಅದು ಭಾರತೀಯರ ಸರ್ವತೋಮುಖ ಏಳಿಗೆಗೆ ಸಹಾಯವಾಯಿತಲ್ಲದೆ ಆ ಸತ್ಯಾಗ್ರಹದ ಉದ್ದೇಶ್ಯವೂ ತಾತ್ಕಾಲಿಕವಾಗಿಯಾದರೂ ನೆರವೇರಿತು. ಈಗ ನಮ್ಮ ಸ್ವತಂತ್ರ ದೇಶದ ಸರ್ಕಾರವೇ ಉಪ್ಪಿನ ಮೇಲೆ ಪುನಃ ತೆರಿಗೆ ಹಾಕಿದೆ, ದುಬಾರಿಯಾಗಿ ಮಾರುವಂತೆ ಮಾಡಿದೆ. ಆದರೆ ಜನತೆ ಆ ಬಗ್ಗೆ ಮಲಗಿದೆ.

ಎಂಟು ದಶಕಗಳ ಅವಧಿಯಲ್ಲಿ ಸಾಬರಮತಿಯಿಂದ ಜಂತರ್‌ಮಂತರ್ ಸ್ಥಳಕ್ಕೆ ಸತ್ಯಾಗ್ರಹದ ಯಾತ್ರೆ ಬರುವ ಹೊತ್ತಿಗೆ ಭಾರತೀಯರು ಬಹುಮಟ್ಟಿಗೆ ತಮ್ಮ ನೈತಿಕತೆಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಮುಂದೆ ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನಕ್ಕೆ ಸತ್ಯಾಗ್ರಹದ ಯಾತ್ರೆ ಬರುವ ಅತ್ಯಂತ ಅಲ್ಪ ಸಮಯದಲ್ಲೇ ಜನತೆ ಇನ್ನೂ ಹೆಚ್ಚು ನೈತಿಕತೆಯನ್ನು ಕಳೆದುಕೊಂಡಿತ್ತು.

ಇನ್ನು ಪ್ರಶ್ನೆಯಿರುವುದು ರಾಮಲೀಲಾ ಮೈದಾನದಿಂದ ಮುಂದೆಲ್ಲಿಗೆ ಎಂಬುದು. ಇನ್ನೂ ಮುಂದೆ ನಡೆದರೆ ಪೂರ್ವಕ್ಕೆ ಅರಬ್ಬೀ ಸಮುದ್ರವಿದೆ, ಪಶ್ಚಿಮಕ್ಕೆ ಹಿಂದೂ ಮಹಾಸಾಗರವಿದೆ. ದಕ್ಷಿಣಕ್ಕೆ ಮೂರು ಮಹಾಸಾಗರಗಳ ಸಂಗಮವಿದೆ. ಆದ್ದರಿಂದ ಈಗ ನಡೆಯುತ್ತಿರುವ ಕ್ರಮದಲ್ಲಿ ಸತ್ಯಾಗ್ರಹ ಯಾತ್ರೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಮುಂದುವರೆದಲ್ಲಿ ಅದು ಸಮುದ್ರ ಪಾಲಾಗುವ ಭೀತಿ ಇದೆ. ಇದನ್ನು

ತಪ್ಪಿಸುವುದು ಅತ್ಯಗತ್ಯ. ಭ್ರಷ್ಟಾಚಾರದ ಮೂಲ ಸ್ರೋತ ಜನತೆ. ಆದ್ದರಿಂದ ಅದರ ಪರಿಹಾರವೂ ಜನತೆಯಿಂದಲೇ ಆಗಬೇಕಿದೆ. ಬ್ರಷ್ಟಾಚಾರ ನಿರ್ಮೂಲನ ಕಾರ್ಯ ರಾಜಕೀಯ ಕಾರ್ಯವಲ್ಲ. ಅದೊಂದು ಜನತೆಯ ನೈತಿಕತೆಯ ಪುನರುತ್ಥಾನದ ಕಾರ್ಯ; ಅದೊಂದು ಜನತೆಯಿಂದ ಜನತೆಗೋಸ್ಕರ ನಡೆಯಬೇಕಾದ ಹಿಮಾಲಯ ಸದೃಶ ರಚನಾತ್ಮಕ ಕಾರ್ಯ. ಹೇಗೆ ಹಿಮಾಲಯ ಜಗತ್ತಿನ ಪರ್ವತಗಳೆಲ್ಲೆಲ್ಲ ಶ್ರೇಷ್ಠವಾಗಿ ಹೆಮ್ಮೆಯಿಂದ ನಿಂತಿದೆಯೋ ಅದೇ ರೀತಿ ಭಾರತ ತನ್ನ ಆತ್ಮಶಕ್ತಿಯಿಂದ ಮತ್ತು ಸತ್ಯ-ಅಹಿಂಸಾ ಮಾರ್ಗದಿಂದ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಿಕೊಂಡು ಜಗತ್ತಿನ ದೇಶಗಳ ಸಮೂಹದಲ್ಲಿ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲಲಿ.

* * *

ಸನ್ಮಾನ್ಯರಿಂದ...

ಇಲ್ಲಿಯವರೆಗೆ 'ಜನಪದ ವಿಚಾರ' ಪತ್ರಿಕೆಯನ್ನು ಪ್ರೀತಿಯಿಂದ ಓದುತ್ತಿದ್ದೇನೆ. ನಿಮ್ಮ ಪತ್ರಿಕೆಗೆ ಶುಭಾಶಯಗಳು.

– ಜಿ. ವೆಂಕಟಸುಬ್ಬಯ್ಯ, ಬೆಂಗಳೂರು

* * *

ನಾಗರಿಕರಾದವರು ಸಕಾಲಕ್ಕೆ ಅಷ್ಟಿಷ್ಟು ಹಣ ಒದಗಿಸಿದರೆ ತಾನೆ ಸೇವಾ ಸಂಸ್ಥೆಗಳು ನಡೆಯುವುದು.

– ಡಾ॥ ಜ್ಯೋತ್ಸ್ನಾ ಕಾಮತ್, ಬೆಂಗಳೂರು

* * *

ನಿಮ್ಮ ಇಡೀ ಕುಟುಂಬವೇ ಈ ಸೇವಾಕಾರ್ಯದಲ್ಲಿ ನಿರತರಾಗಿರುವುದು ಬಹಳ ವಿಶಿಷ್ಟವಾದ, ಆನಂದಕರವಾದ ವಿಷಯ. ಹೆಚ್ಚಿನ ಸಂತೋಷದ ವಿಷಯವೆಂದರೆ ನಮ್ಮ ಮಗ ಸುಂದರರಾಜು ನಿಮ್ಮ ಸಂಸ್ಥೆಗೆ ಕೈಲಾಗುವಷ್ಟು ಸಹಾಯ ಹಸ್ತ ನೀಡಿರುವುದು. ಅದು ನನ್ನ ಮನಸ್ಸಿಗೆ ಹಾಗೂ ಪರಲೋಕದಲ್ಲಿರುವ ಅವನ ತಂದೆಗೂ ಅತ್ಯಂತ ತೃಪ್ತಿ ಸಮಾಧಾನ ತಂದಿದೆ ಎಂದರೆ ಅತಿಶಯೋಕ್ತಿಯಂತೂ ಅಲ್ಲ.

– ಕಮಲಮ್ಮ ಗುರು, ಬೆಂಗಳೂರು

ಇಪ್ಪತ್ತೊಂದನೇ ಶತಮಾನದ ಗಾಂಧೀ ವಕ್ತಾರ – ಜೀನ್ ಶಾರ್ಪ್

– ಡಾ.ಮುಜಾಫರ್ ಅಸ್ಸಾದಿ

ಇಂದಿನ ಯುದ್ಧ, ಮಿಲಿಟರಿ ಆಡಲಿತ, ಜನಾಂಗೀಯ ಘರ್ಷಣೆ, ಹಾಗೂ ಸರ್ವಾಧಿಕಾರಿಗಳ ಸಂದರ್ಭದಲ್ಲಿ ಎರಡು ಚರ್ಚೆಗಳು ಬಹು ಮುಖ್ಯವೆನಿಸುತ್ತದೆ: ಯುದ್ಧವನ್ನು ತಡೆಗಟ್ಟುವ ಅಥವಾ ಸರ್ವಾಧಿಕಾರಿಗಳನ್ನು ಸ್ಥಾನ ಪಲ್ಲಟಗೊಳಿಸುವ ಸಂದರ್ಭದಲ್ಲಿ ಯಾವ ಮಾರ್ಗಗಳನ್ನು ಅನುಸರಿಸಿಸಬೇಕು? ಸಂಘರ್ಷದ ಮಾರ್ಗ ಹಾಗೂ ಅಹಿಂಸಾ ಮಾರ್ಗಗಳಲ್ಲಿ ಅಥವಾ ಅಸ್ತ್ರಗಳಲ್ಲಿ ಯಾವುದು ಶ್ರೇಷ್ಠ ಅಥವಾ ಉತ್ತಮ? ವಾಸ್ತವವಾಗಿ ಇಲ್ಲಿ ತಾತ್ವಿಕತೆಯ ಪ್ರಶ್ನೆಯೂ ಅಡಗಿದೆ: ಒಂದೆಡೆ ಗಾಂಧೀಯೋತ್ತರದ ನವ-ಗಾಂಧೀವಾದ ಮತ್ತು ಫ್ಯಾಸಿಸಂ ಇದ್ದರೆ, ಇನ್ನೊಂದೆಡೆ ಮಾವೋವಾದ ಮತ್ತು ಸಾಂಪ್ರದಾಯಿಕ ಮಾರ್ಕ್ಸ್‌ವಾದ ಇವೆ. ಈ ಚರ್ಚೆ ಆರಂಭಗೊಂಡದ್ದು ಈಜಿಪ್ಟ್ ಜನಕ್ರಾಂತಿ ಅಥವಾ ಜನಾಂದೋಳನ ಆರಂಭಗೊಂಡ ನಂತರವೆಂದೇ ಹೇಳಬೇಕು.

ಈಜಿಪ್ಟ್ ಅಧ್ಯಕ್ಷ ಮುಬಾರಕ್ ವಿರುದ್ಧ ಈಜಿಪ್ಟ್‌ನಲ್ಲಿ ಜನಾಂದೋಳನ ಆರಂಭಗೊಂಡದ್ದು ೨೦೧೧ ಜನವರಿ ೨೫ರಂದು. ಅಸಹಕಾರ ಚಳವಳಿಯ ರೂಪದಲ್ಲಿ ಆರಂಭಗೊಂಡ ಈ ಜನಾಂದೋಳನ ಅಧ್ಯಕ್ಷ ಮುಬಾರಕ್‌ರವರ ರಾಜೀನಾಮೆಯಲ್ಲಿ ಪರ್ಯವಸನಗೊಂಡಿತ್ತು. ಈ ಜನಾಂದೋಳವನ್ನು ಲೋಟಸ್ ಕ್ರಾಂತಿಯೆಂದೂ, ಸಿಟ್ಟಿನ ಕ್ರಾಂತಿಯೆಂದೂ, ಶ್ವೇತ ಕ್ರಾಂತಿಯೆಂದೂ, ಸ್ವಾತಂತ್ರ್ಯ ಕ್ರಾಂತಿಯೆಂದೂ, ಯುವಕರ ಕ್ರಾಂತಿಯೆಂದೂ ಬಣ್ಣಿಸುವ ವಾಡಿಕೆ ಇದೆ. ಅದರ ಹಿಂದೆ ಇರುವ ಮೂಲ ಶಕ್ತಿ ಯಾವುದು? ಅದಕ್ಕೂ ಗಾಂಧಿಗೂ ಇರುವ ಸಂಬಂಧವೇನು? ವಸಾಹತು ಸಂದರ್ಭದಲ್ಲಿ ಉಪಯೋಗಿಸಿದ ಗಾಂಧಿಯ ಅಹಿಂಸಾ ಹಾಗೂ ಅಸಹಕಾರ ತಂತ್ರಗಾರಿಕೆ ಅಥವಾ ಅಸ್ತ್ರ ಇಂದಿನ ಸಂದರ್ಭದಲ್ಲಿ ಸರ್ವಾಧಿಕಾರಿಗಳಿಗೆ ಹಾಗೂ ತೀವ್ರತರ ಎಡಪಂಥೀಯ ಮಾವೋವಾದಕ್ಕೆ ಪರ್ಯಾಯವಾಗಬಲ್ಲುದೇ ಎಂಬೀ ಕೆಲವು ಪ್ರಶ್ನೆಗಳು ಈ ಸಂದರ್ಭದಲ್ಲಿ ಉದ್ಭವಿಸುವುದು ಸಹಜ.

ಈ ಕ್ರಾಂತಿಗೆ ಅಂತರಜಾಲದಲ್ಲಿ ಪ್ರಚಲಿತವಾಗಿರುವ ಫೇಸ್ ಬುಕ್‌ನ 'ವಿ ಆರ್ ಅಲ್ ಖಲೀದ್ ಸಯೀದ್' ಎಂಬ ಗುಂಪು ಕಾರಣವೆಂದು ಕೂಡಲೇ ತೀರ್ಮಾನಿಸಲಾಗುತ್ತದೆ. ಈ ರೀತಿಯ ಗುಂಪುಗಳು ಫೇಸ್ ಬುಕ್‌ನಲ್ಲಿ ಗಾಂಧಿ ಕುರಿತು ಕೂಡ ಹುಟ್ಟಿಕೊಂಡಿವೆ. ವಿಚಿತ್ರವೆಂದರೆ ಈ ಗುಂಪು ತನ್ನನ್ನು 'ವಿ ಹೇಟ್ ಗಾಂಧಿ' ಎಂಬ ಶೀರ್ಷಿಕೆಯಲ್ಲಿ ಕಾರ್ಯಾಚರಣೆ ನಡೆಸುತ್ತಿದೆ. ಈ ಗುಂಪು ನಿರ್ದಯವಾಗಿ ಗಾಂಧಿಯನ್ನು ತುಚ್ಛೀಕರಿಸಿ ವಿಶ್ಲೇಷಿಸುತ್ತದೆ. ವಿಚಿತ್ರವೆಂದರೆ ಈ ಗುಂಪಿನಲ್ಲಿರುವವರು ಬಹಳಷ್ಟು ಮಂದಿ ಅತ್ಯಂತ ಸುಶಿಕ್ಷಿತರು, ಬುದ್ಧಿವಂತರು. ವಾಸ್ತವವಾಗಿ ಈಜಿಪ್ಟ್‌ನ

ಗುಂಪಿಗೆ ಪ್ರೇರಕವಾಗಿದ್ದದ್ದು ಅಮೇರಿಕಾದಲ್ಲಿ ನೆಲೆಸಿರುವ ಹಾಗೂ ಗಾಂಧಿಯ ಅಹಿಂಸಾ ತತ್ವದ ಮೇಲೆ ಆಳವಾದ ನಂಬಿಕೆ ಇಟ್ಟಿರುವ ರಾಜ್ಯಶಾಸ್ತ್ರ ಪಂಡಿತರಾದ ಜೀನ್ ಶಾರ್ಪ್. ದುರಂತವೆಂದರೆ ಶಾರ್ಪ್ ಕುರಿತು ಅಮೇರಿಕಾದ ಬಹಳ ಕಡಿಮೆ ಜನ ಅರಿತಿದ್ದಾರೆ. ಇವರಿಗೆ ಹೆದರುವವರು ಬೇರಾರು ಅಲ್ಲ, ಹೊರತು ಜಗತ್ತಿನಲ್ಲಿರುವ ಸರ್ವಾಧಿಕಾರಿಗಳು. ಮಿಲಿಟರಿ ಆಡಳಿತಗಾರರು ಹಾಗೂ ಉದಾರವಾದಿ ಪ್ರಜಾಪ್ರಭುತ್ವ ವಿರೋಧಿಗಳು. ಈ ಶಾರ್ಪ್ ಗಾಂಧಿಯ ವಾರಸುದಾರರಲ್ಲ. ಗಾಂಧಿಯ ಖಾಸಾಶಿಷ್ಯನೂ ಅಲ್ಲ. ಆದರೆ ಗಾಂಧಿಯ ಅಹಿಂಸೆಯನ್ನು ಅಳವಾಗಿ ಪ್ರೀತಿಸುವವರು. ಅದರ ಮೂಲಕ ಸರ್ವಾಧಿಕಾರಗಳನ್ನು ಮೂಲೋತ್ಪಾಟನೆ ಮಾಡಬಯಸುವವರು ಹಾಗೂ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಬಯಸುವವರು. ಅಲ್ಲದೇ ಗಾಂಧಿಯ ಅಹಿಂಸಾ ಮಾರ್ಗಕ್ಕೆ ಹೊಸರೂಪವನ್ನು, ಹೊಸ ಚೌಕಟ್ಟನ್ನು ನೀಡಲು ಬಯಸುವವರು.

ಜೀನ್ ಶಾರ್ಪ್ ಅಮೇರಿಕಾದ ಮೆಸೆಚುಸೆಟ್ ವಿವಿಯ ಪದವೀಧರರು. ಅದೇ ವಿವಿಯಲ್ಲಿ ಹಲವು ವರುಷ ಪ್ರಾಧ್ಯಾಪಕರಾಗಿ ನಿವೃತ್ತಿಯಾದ ನಂತರ ಅಲ್ಬರ್ಟ್ ಐನ್‌ಸ್ಟೀನ್ ಇನ್‌ಸ್ಟಿಟ್ಯೂಟ್ ಎಂಬುದನ್ನು ಸ್ಥಾಪಿಸಿ ಜಗತ್ತಿನಲ್ಲಿ ಸರ್ವಾಧಿಕಾರವನ್ನು ಅಹಿಂಸಾ ಹೋರಾಟದ ಮುಖಾಂತರ ಬದಲಾಯಿಸುವ ಹೊಸ ಸಾಂಪ್ರದಾಯವನ್ನು ಜಗತ್ತಿಗೆ ಕಲಿಸಿ ಕೊಟ್ಟವರು. ಅವರ ಸಂಸ್ಥೆಯ ಮೂಲಧ್ಯೇಯಗಳನ್ನು ಗಮನಿಸಿದರೆ ಮೇಲ್ನೋಟಕ್ಕೆ ಈ ಅಂಶಗಳು ಕಂಡುಬರುತ್ತವೆ. ಅವುಗಳೆಂದರೆ ಪ್ರಜಾಪ್ರಭುತ್ವ ಸಂಸ್ಥೆ ಹಾಗೂ ಸ್ವಾತಂತ್ರವನ್ನು ಎತ್ತಿ ಹಿಡಿಯುವುದು; ಸರ್ವಾಧಿಕಾರ, ದಮನೀಯತೆ ಹಾಗೂ ಜನಾಂಗೀಯತೆಯನ್ನು ವಿರೋಧಿಸುವುದು ಮತ್ತು ನೀತಿಯ ಸಾಧನವಾಗಿರುವ ಕ್ರೌರ್ಯವನ್ನು ಕಡಿಮೆ ಮಾಡುವುದು ಇತ್ಯಾದಿ ಸೇರಿವೆ.

ಜೀನ್ ಶಾರ್ಪ್ ಮಾರ್ಕ್ಸ್‌ವಾದಿಯಲ್ಲ, ಅಥವಾ ಚೆಗವಾರರಂತೆ ಕ್ರಾಂತಿಯನ್ನು ಜಗತ್ತಿನ ಎಲ್ಲಾ ಕಡೆ ವಿಸ್ತರಿಸಲು ಪಣತೊಟ್ಟ ತೀವ್ರತರ ಎಡಪಂಥೀಯರೂ ಅಲ್ಲ. ಆದರೆ ಅವರು ಮಾವೋನಷ್ಟೇ ಪ್ರಸಿದ್ಧರು, ಚೆಗೆವಾರನಷ್ಟೆ ಅಭಿಮಾನಿಗಳನ್ನು ಹೊಂದಿರುವವರು. ಬಹಳಷ್ಟು ಸಂದರ್ಭದಲ್ಲಿ ಸರ್ವಾಧಿಕಾರ ಕೊನೆಗೊಂಡಾಗ ಅದಕ್ಕೆ ತಾವೇ ಕಾರಣರೆಂದು ಅಥವಾ ತಮ್ಮ ಆಲೋಚನೆಗಳ ಪ್ರಭಾವವೆಂಬ ವಾದವನ್ನು ಶಾರ್ಪ್ ಒಪ್ಪುವುದಿಲ್ಲ.

ಶಾರ್ಪ್ ಅವರನ್ನು ವಿವಿಧ ಪ್ರಕಾರವಾಗಿ ಕರೆಯುತ್ತಾರೆ: ಅಹಿಂಸಾ ಚಳವಳಿಯ 'ಮೆಖಿವೆಲ್ಲಿ', ಅಹಿಂಸಾ ಯುದ್ಧದ 'ಕ್ಲಾಸ್ವಿಟ್ಜ್', 'ಅಹಿಂಸಾ ತತ್ವದ ಹೊಸ ಪಿತಾಮಹ' ಇತ್ಯಾದಿ. ಯಾಕೆಂದರೆ ಸರ್ವಾಧಿಕಾರಿಯನ್ನು ವಿರೋಧಿಸುವ ಅವರ ಅಹಿಂಸಾ ಸೂತ್ರಗಳು, ಕ್ಷಿಪ್ರಕ್ರಾಂತಿಯನ್ನು ತಡೆಗಟ್ಟಲು ಮುಂದಿಡುವ ಅಹಿಂಸಾ ಸೂತ್ರಗಳು ಅವರನ್ನು ಜಗತ್ತಿನ ಇನ್ನೊಂದು 'ಗಾಂಧಿ'ಯನ್ನಾಗಿಸಿದೆ ಎಂದರೂ ಸುಳ್ಳಲ್ಲ. ಆದರೂ ಇವರಿಬ್ಬರ ನಡುವೆ ವ್ಯತ್ಯಾಸಗಳಿರುವುದು ಕೂಡ ಅಷ್ಟೇ ವಾಸ್ತವ.

ಗಾಂಧಿಯ ತರಹ ಅವರು ಅಸ್ಪಷ್ಟವಾಗಿ, ಅಮೂರ್ತವಾಗಿ ವಾದಿಸುವುದಿಲ್ಲ. ಬಹಳಷ್ಟು ಸಂದರ್ಭದಲ್ಲಿ ಅವರ ವಾದಗಳು ವ್ಯವಸ್ಥಿತವಾಗಿರುತ್ತವೆ ಹಾಗೂ ಬಹಳ ಸರಳವಾಗಿತ್ತವೆ. ಅವರ ಪುಸ್ತಕಗಳನ್ನು ಓದಿದರೆ ಒಂದೆಡೆ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿರುವ ವ್ಯವಸ್ಥಿತವಾದಗಳ ನೆನೆಪಾಗುತ್ತದೆ, ಮತ್ತೊಂದೆಡೆ ಮಾವೋನ ವ್ಯವಸ್ಥಿತವಾದಗಳ ನೆನಪಾಗುತ್ತದೆ. ಯಾಕೆಂದರೆ ಇವರಿಬ್ಬರೂ ವ್ಯವಸ್ಥೆ ವಿರುದ್ಧ ಯುದ್ಧವನ್ನು, ವೈರಿಗಳನ್ನು

ವಿವರಿಸುವಾಗ ಅದರ ಪ್ರತೀ ಸೂಕ್ಷ್ಮತೆಯನ್ನೂ ವಿವರಿಸುತ್ತಾರೆ. ಇದನ್ನು ಶಾರ್ಪ್‌ರವರ ಅಸಹಕಾರ ಹೋರಾಟಗಳಲ್ಲಿರುವ ಪ್ರಕಾರಗಳ ವಿಶ್ಲೇಷಣೆಗಳಲ್ಲಿ, ಸರ್ವಾಧಿಕಾರಿಗಳ ವಿರುದ್ಧ ಉಪಯೋಗಿಸುವ ವಿವಿಧ ತಂತ್ರಗಾರಿಕೆಗಳ ವಿಶ್ಲೇಷಣೆಗಳಲ್ಲಿ ನೋಡಬಹುದು.

ಎರಡನೇದಾಗಿ, ಶಾರ್ಪ್‌ರ ಕಾಲಮಾನಕ್ಕೂ ಗಾಂಧಿಯ ಕಾಲಮಾನಕ್ಕೂ ಅಜಗಜಾಂತರವಿದೆ. ಗಾಂಧಿಯ ಸಮಯ ರಾಷ್ಟ್ರೀಯ ಹೋರಾಟದ ಸಮಯ, ಪ್ರಜಾಪ್ರಭುತ್ವ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಕಾಲವದು. ಅಮೇರಿಕಾದ ಯಜಮಾನಿಕೆಗೆ ಸೋವಿಯತ್ ಯೂನಿಯನ್ ತಡೆಯೊಡ್ಡುವ ಕಾಲವದು. ಅಲ್ಲದೇ ಫ್ಯಾಸಿಸಂ ಜಗತ್ತಿನ ವಿವಿಧೆಡೆ ಹರಡುತ್ತಿದ್ದ ಕಾಲ ಕೂಡ ಹೌದು. ಅದೇ ಸಂದರ್ಭದಲ್ಲಿ ಗಾಂಧಿಯ ಅಹಿಂಸಾ ರಾಜಕಾರಣ ಮೇಲ್ನೋಟಕ್ಕೆ ಭಾರತಕ್ಕೆ ಸೀಮಿತಗೊಂಡರೂ, ವಾಸ್ತವವಾಗಿ ಅದರ ಪ್ರಯೋಗ ಜಗತ್ತಿನ ವಿವಿಧೆಡೆ ಸೂಕ್ಷ್ಮವಾಗಿ ನಡೆಯುತ್ತಿದ್ದ ಕಾಲ. ಗಾಂಧಿ ಒಬ್ಬ ದಂತಕತೆಯಾಗಿದ್ದ ಕಾಲ ಕೂಡ ಹೌದು. ಅವರ ಹೆಸರಿನಲ್ಲಿ ಅಮೇರಿಕಾದಲ್ಲಿ, ಇಂಗ್ಲೆಂಡಿನಲ್ಲಿ, ಜಗತ್ತಿನ ಇನ್ನಿತರ ಕಡೆ ಹತ್ತು ಹಲವು ಪೌರಸಮಾಜಗಳು ಹುಟ್ಟಿಕೊಂಡಿದ್ದವು, ಹಾಗೂ ಅವರ ಅಹಿಂಸಾ ತತ್ವದ ಪ್ರಯೋಗವನ್ನು ಮಾಡುತ್ತಿದ್ದವು. ಈ ರೀತಿಯ ಪ್ರಯೋಗ ಗಾಂಧಿಯೋತ್ತರ ಕಾಲದಲ್ಲೂ ನೋಡಬಹುದು. ಜಾಗತೀಕರಣ ಸಂದರ್ಭದಲ್ಲಿ ಹುಟ್ಟಿದ ನೂರಾರು ಸಾಮಾಜಿಕ ಚಳವಳಿಗಳಲ್ಲಿ ಗಾಂಧಿ ಇರುವುದು ವಾಸ್ತವ. ಈ ಎಲ್ಲಾ ಚಳವಳಿಗಳಿಗೂ ಗಾಂಧಿ ಸ್ಫೂರ್ತಿಯಾಗುತ್ತಾರೆ ಹಾಗೂ ಅವರ ಪುಸ್ತಕ 'ಹಿಂದ್ ಸ್ವರಾಜ್' ಜಾಗತೀಕರಣಕ್ಕೆ ಪರ್ಯಾಯವಾಗುತ್ತದೆ.

ಈ ಸಂದರ್ಭದಲ್ಲಿ ಜೀನ್ ಶಾರ್ಪ್ ಗಾಂಧಿಯ ಅಹಿಂಸಾ ತತ್ವಗಗಳಿಂದ ಆಕರ್ಷಿತವಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೆ ಜೀನ್ ಶಾರ್ಪ್‌ಗೂ ಗಾಂಧಿಗೂ ಇರುವ ವ್ಯತ್ಯಾಸವೆಂದರೆ ಜೀನ್‌ಗೆ ಜಗತ್ತು ಈಗಲೂ ಸಂಪೂರ್ಣವಾಗಿ ಸರ್ವಾಧಿಕಾರಿಗಳಿಂದ ಸ್ವತಂತ್ರಗೊಂಡಿಲ್ಲ, ಹಾಗೂ ಜಗತ್ತು ಸಂಪೂರ್ಣವಾಗಿ ಪ್ರಜಾಪ್ರಭುತ್ವಗೊಂಡಿಲ್ಲ. ಅವರು ತಮ್ಮ ಪ್ರಸಿದ್ಧ ಪುಸ್ತಕ 'ಫ್ರಮ್ ದಿಕ್ಟೇಟರ್‌ಶಿಪ್ ಟು ಡೆಮೋಕ್ರಸಿ'ಯಲ್ಲಿ ಹೇಳುವಂತೆ, ೨೦೦೮ರಲ್ಲಿ ಶೇ.೩೪ ರಷ್ಟು ಜಗತ್ತಿನ ಪ್ರಜೆಗಳು 'ಮುಕ್ತಗೊಳ್ಳದ' ಅತ್ಯಂತ ಕನಿಷ್ಠ ರಾಜಕೀಯ ಹಕ್ಕುಗಳಿರುವ ದೇಶಗಳಲ್ಲಿ ಜೀವಿಸುತ್ತಿದ್ದಾರೆ, ಇಂತಹ ದೇಶಗಳ ಸಂಖ್ಯೆಯೇ ಶೇ.೪೨ ಇದೆ. ಈ ರಾಷ್ಟ್ರಗಳ ಮುಖ್ಯ ಲಕ್ಷಣವೆಂದರೆ ಇಲ್ಲೆಲ್ಲಾ ಮಿಲಿಟರಿ ಆಡಳಿತ (ಬರ್ಮಾ); ಸಾಂಪ್ರದಾಯಿಕವಾದ ಅರಸೊತ್ತಿಗೆ; (ಸೌದಿ ಹಾಗು ಭೂತಾನ್); ಬಲಾಢ್ಯ ಏಕ ಪಕ್ಷ ಪದ್ಧತಿ (ಚೀನಾ, ಉತ್ತರ ಕೋರಿಯಾ); ವಿದೇಶಿ ಆಳ್ವಿಕೆ (ಟಿಬೆಟ್, ಪಶ್ಚಿಮ ಸಹಾರ) ಇವೆ.

ಗಾಂಧಿಯ ಪ್ರಭಾವವನ್ನು ಜೀನ್ ಶಾರ್ಪ್ ಬಹಳಷ್ಟು ಸಂದರ್ಭದಲ್ಲಿ ಒಪ್ಪಿಕೊಳ್ಳುತ್ತಾರೆ. ಇದು ಅವರ ದೊಡ್ಡತನವೂ ಹೌದು. ಗಾಂಧಿಯ ಕುರಿತಾದ ಉಲ್ಲೇಖ ಇವರ ಬಹಳಷ್ಟು ಪುಸ್ತಕಗಳಲ್ಲಿ ಕಂಡು ಬರುತ್ತದೆ. ಈಜಿಪ್ಟ್‌ನ ಪ್ರಜೆಗಳು ಸರ್ವಾಧಿಕಾರಿಯನ್ನು ಧಿಕ್ಕರಿಸಿದಾಗ ಅಮೇರಿಕಾದ ಟೈಮ್ಸ್ ಪತ್ರಿಕೆ 'ಇದು ಗಾಂಧಿಯ ನೇರ ಕಾಣಿಕೆ' ಎಂದೆಲ್ಲಾ ಬಣ್ಣಿಸಿತು. ತನ್ನ ಒಂದು ಮಹತ್ವದ ಪುಸ್ತಕ Gandhi as a Political Strategist, With Essays on Ethics and Politics ನಲ್ಲಿ ಗಾಂಧಿಯ ರಾಜಕೀಯ ಮಹತ್ವವನ್ನು, ಅಹಿಂಸಾ ಚಳವಳಿಯ ಉಗಮ, ಗಾಂಧಿಯ ಸತ್ಯ, ರಾಜಕೀಯ ಸಂಘರ್ಷ, ಭಾರತದಲ್ಲಿ ಅಹಿಂಸಾ ಚಳವಳಿ ಬೆಳೆದ ದಾರಿ, ಗಾಂಧಿಯ

ರಚನಾತ್ಮಕ ಚಟುವಟಿಕೆ, ಅಹಿಂಸಾ ಚಳವಳಿಗೆ ಭಾರತದ ಕೊಡುಗೆ, ಅಹಿಂಸೆ ಹಾಗೂ ನೈತಿಕತೆಯ ರಾಜಕಾರಣ ಇತ್ಯಾದಿಗಳ ಬಗ್ಗೆ ಚರ್ಚಿಸುತ್ತಾರೆ. Gandhi Weilds the Weapon of Moral Power ಎಂಬ ಇನ್ನೊಂದು ಪುಸ್ತಕದಲ್ಲಿ ಗಾಂಧಿಯ ಕುರಿತು ಈ ರೀತಿ ಹೇಳುತ್ತಾರೆ. "Gandhi's life, message and work derive vital significance. For he points to an alternative to war. He turned his back to violence, but he did not on that account meekly submit to evil. He discovered a way of fighting evil in dynamic way, which he felt could never know defeat." ಅದೇ ರೀತಿ ಇನ್ನೊಂದು ಪುಸ್ತಕ Gandhi As A Political Strategist ನಲ್ಲಿ ಗಾಂಧಿಯನ್ನು, "an extraordinay political strategist, and although not a systematic social analyst", ಎಂದು ಕರೆಯುತ್ತಾರೆ. ಇದು ಗಾಂಧಿಯನ್ನು ತಮ್ಮ ತಾತ್ವಿಕತೆಯಲ್ಲಿ ಒಪ್ಪಿಕೊಂಡ ರೂಪವೂ ಹೌದು.

ವಾಸ್ತವವಾಗಿ ಜೀನ್ ಶಾರ್ಪ್‌ರ ಅಹಿಂಸಾ ಚಿಂತನೆಯ ಪ್ರಭಾವವನ್ನು ಈಜಿಪ್ಟ್‌ಗೆ ಮಾತ್ರ ಸೀಮಿತಗೊಳಿಸಬಾರದು. ಈಜಿಪ್ಟ್‌ನಲ್ಲಿ ಜನ ಆಂದೋಳನಗಳು ಆರಂಭಗೊಳ್ಳುವ ಮೊದಲು ಟ್ಯುನೀಷೀಯಾದಲ್ಲಿ ಯುವಕರ ಹೋರಾಟಗಳು ಆರಂಭಗೊಂಡಿದ್ದವು. ಅದಕ್ಕೆ ಶಾರ್ಪ್‌ರವರ ಚಿಂತನೆಗಳು ಕಾರಣೀಭೂತವಾದವು. ಅದಕ್ಕೂ ಮೊದಲು ಐರೋಪ್ಯದಲ್ಲಿ ಕಮ್ಯೂನಿಸ್ಟ್ ಸರಕಾರದ ಪತನಕ್ಕೂ ಹಾಗೂ ಅಲ್ಲಿ ನಡೆದ ವಿವಿಧ 'ಬಣ್ಣ'ಗಳ ಕ್ರಾಂತಿಗೂ ಅವರ ಪ್ರಭಾವವೇ ಕಾರಣೀಭೂತವೆಂಬ ವಾದವಿದೆ. ನೈಜವಾಗಿ ನೋಡುವುವಾದರೆ 'ಬಣ್ಣ'ಗಳ ಉಲ್ಲೇಖ, ಹಾಗೂ ಸರ್ವಾಧಿಕಾರಿಗಳ ಪ್ರಭುತ್ವವನ್ನು ಕೊನೆಗಾಣಿಸಲು 'ಬಣ್ಣ'ಗಳನ್ನು ಸಂಕೇತವಾಗಿ ಬಳಸಬೇಕೆಂಬ ವಾದ ಶಾರ್ಪ್‌ರವರ ಅಸಹಕಾರ ತತ್ವಗಳಲ್ಲಿ ದಟ್ಟವಾಗಿ ಕಂಡುಬರುತ್ತದೆ. ಇದನ್ನು ನವ-ಗಾಂಧಿವಾದದ ಇನ್ನೊಂದು ರೂಪವೆಂದರೆ ಅತಿಶೋಕ್ತಿಯಾಗಲಾರದು.

ಶಾರ್ಪ್‌ರವರ ವಿವಿಧ ಪುಸ್ತಕಗಳು ವಿವಿಧ ದೇಶಗಳಲ್ಲಿ ಬದಲಾವಣೆಗೆ ಪ್ರೇರಕವಾಗಿದ್ದವು ಎಂದರೆ ಸುಳ್ಳಲ್ಲ. ಅವರ 'ಫ್ರಮ್ ಡಿಕ್ಟೆಟರ್‌ಶಿಪ್ ಟು ಡೆಮೋಕ್ರಾಸಿ'ಯು ಸರ್ಬಿಯಾ, ಜಾರ್ಜಿಯಾ, ಉಕ್ರೇನ್, ಕಿರಿಂಗ್‌ಸ್ತಾನ, ಜಿಂಬ್ವಾವ್ವೆ ಹಾಗೂ ಬೆಲೂರಸ್ ಚಳವಳಿಗೆ ಪ್ರೇರಕವಾಯಿತು. ವಾಸ್ತವಾಗಿ ಈ ಪುಸ್ತಕವನ್ನು ಪ್ರಥಮ ಬಾರಿಗೆ ೧೯೯೩ರಲ್ಲಿ ಮ್ಯೆಯನಮಾರ್‌ನ ಪ್ರಜಾಪ್ರಭುತ್ವ ಹೋರಾಟಗಳಿಗೆ ಬಳಸಲಾಯಿತು. ಅಲ್ಲದೇ ಮ್ಯೆಯನಮಾರ್‌ನ ಹೋರಾಟಗಳಿಗೂ ಈ ಪುಸ್ತಕ ಸ್ಫೂರ್ತಿಯಾಯಿತು. ಅದೇ ರೀತಿ ಥೈಲ್ಯಾಂಡ್, ಇಂಡೋನೇಶಿಯಾದ ಮಿಲಿಟರಿ ವಿರುದ್ಧ ಕೂಡ ಸ್ಫೂರ್ತಿಯಾಯಿತು. ಅವರ ಇನ್ನೊಂದು ಪುಸ್ತಕ 'ಸಿವಿಲಿಯನ್ ಬೇಸ್ಡ್ ಡಿಫೆನ್ಸ್', ಲುಥುವೇನಿಯಾ, ಲಾಟ್ವಿಯಾ, ಎಟ್ಟೋನೀಯಾ ಸರಕಾರಗಳಿಗೆ ಸೂವಿಯತ್ ಯೂನಿಯನ್ ಒಕ್ಕೂಟದಿಂದ ಹೊರಬರಲು ೧೯೯೧ರಲ್ಲಿ ಶಕ್ತಿಯನ್ನು ನೀಡಿತ್ತು. ಇದೇ ರೀತಿ ಅವರ ಕೃತಿಗಳು ಇರಾನ್‌ನಲ್ಲಿ ೨೦೦೯ರಲ್ಲಿ ಅಸಫಲ 'ಪಚ್ಚೆ' ಕ್ರಾಂತಿಗೂ ಅವಕಾಶವನ್ನು ಮಾಡಿಕೊಟ್ಟಿತ್ತು. ಆ ಸಂದರ್ಭದಲ್ಲಿ ಚಳವಳಿಗಾರರು ಅವರ ೧೯೮ ಅಸಹಾಕಾರ ತಂತ್ರಗಳಲ್ಲಿ ನೂರಕ್ಕೂ ಮಿಕ್ಕಿ ತಂತ್ರಗಳನ್ನು ಉಪಯೋಗಿಸಿದ್ದರು ಎಂಬ ಹೆಗ್ಗಳಿಕೆ ಇದೆ.

ಜೀನ್ ಶಾರ್ಪ್‌ರ ವಾದಗಳಲ್ಲಿ ಎರಡು ವಿಶಿಷ್ಟತೆ ಇದೆ. ಒಂದೆಡೆ ಇತಿಹಾಸವನ್ನು ಪರೀಕ್ಷಿಸುತ್ತಾ, ಮೌಲ್ಯೀಕರಿಸುತ್ತಾ ಪ್ರಸ್ತುತ ಕಾಲಮಾನದಲ್ಲಿ ಅದರ ಪ್ರಸ್ತುತೆಯನ್ನು ಹುಡುಕುವ ಯತ್ನದ ಮೆಥಡಾಲಜಿ ಇದ್ದರೆ, ಇನ್ನೊಂದೆಡೆ ಜನಾಂದೋಳನದಲ್ಲಿ ಅಹಿಂಸೆಯ ಕಾಳಜಿ ಹಾಗೂ ಒತ್ತು ಇದರಲ್ಲಿ ದಟ್ಟವಾಗಿ ಕಂಡುಬರುತ್ತದೆ.

ಜೀನ್ ಶಾರ್ಪ್ ಜನಾಂದೋಳನಗಳ ಸಂದರ್ಭದಲ್ಲಿ ಹೋರಾಟಗಳಿಗೆ 'ಬಣ್ಣ'ಗಳ ಶೀರ್ಷಿಕೆಯನ್ನು ಬಯಸುತ್ತಾರೆ. ಹಾಗೂ ಸಂಕೇತಗಳ ಮೂಲಕ ಗುರುತಿಸಲು ಬಯಸುತ್ತಾರೆ. ಆದಕಾರಣ ಜಾಗತೀಕರಣದ ಸಂದರ್ಭದಲ್ಲಿ ಹುಟ್ಟಿದ ವಿವಿಧ ಆಂದೋಳನಗಳನ್ನು 'ಶ್ವೇತ', 'ಕಿತ್ತಳೆ', 'ಪಚ್ಚೆ', 'ವೆಲ್ವೆಟ್' ಎಂದೆಲ್ಲಾ ನಾಮಕರಣಗೊಳ್ಳಲು ಜೀನ್ ಶಾರ್ಪ್ ಕಾರಣ ಎಂದರೂ ತಪ್ಪಾಗಲಾರದು. ಈ ರೀತಿಯ ನಾಮಕರಣ ಪದ್ಧತಿ ಗಾಂಧಿಯಲ್ಲಿ ಕಂಡುಬರುದಿಲ್ಲ. ಆದರೆ ಗಾಂಧಿಯ ಹೋರಾಟಗಳಲ್ಲಿ ಒಂದು ವಿಶಿಷ್ಟತೆ ಇದೆ. ಅದು ದೇಸೀಯತೆಯ ಛಾಪು: ಹರತಾಳ್, ಸತ್ಯಾಗ್ರಹ, ಹಿಜ್ರತ್ ಇತ್ಯಾದಿ. ಇದೇ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳುವುದು ಅನಿವಾರ್ಯವೆನಿಸುತ್ತದೆ: ಗಾಂಧಿಯ ಅಹಿಂಸಾ ಹೋರಾಟ ಭಾರತಕ್ಕೆ ಮಾತ್ರ ಸೀಮಿತಗೊಂಡಿತ್ತೇ? ಹಿಟ್ಲರ್ ಹಾಗೂ ನಾಜಿಗಳ ವಿರುದ್ಧ ಅಹಿಂಸಾ ಮಾರ್ಗವನ್ನು ಅನುಸರಿಸಲು ಗಾಂಧಿ ನೀಡಿದ ಕರೆ ಅದರ ಜಾಗತೀಕ ಮಹತ್ವವನ್ನು ತಿಳಿಸುತ್ತದೆ. ಅಲ್ಲದೆ, ಅದೇ ಸುಮಾರಿಗೆ ಜಗತ್ತಿನ ವಿವಿಧೆಡೆ ಗಾಂಧಿ ಹೆಸರಿನಲ್ಲಿ ಹುಟ್ಟಿದ ನೂರಾರು ಸರಕಾರೇತರ ಸಂಘ ಸಂಸ್ಥೆಗಳ ಅಹಿಂಸಾ ಮಾರ್ಗದ ಪ್ರಯೋಗ ಗಾಂಧೀಯವರ ಮಹತ್ವವನ್ನು ಸೂಚಿಸುತ್ತದೆ. ಜೀನ್ ಶಾರ್ಪ್‌ರ ಅಹಿಂಸಾ ಮಾರ್ಗದ ವಾದ ಗಾಂಧಿವಾದದ ವಿಸ್ತರಣೆ ಎನ್ನಲೇಬೇಕು.

ಜೀನ್ ಶಾರ್ಪ್‌ವರ ವಾದದಲ್ಲಿ ಒಂದು ಸರಳವಾದ ಅಂಶವಿದೆ. ಅದು ಅತ್ಯಂತ ಶಕ್ತಿಶಾಲಿಯೂ ಹೌದು. ಅವರ ಪ್ರಕಾರ ಸರ್ವಾಧಿಕಾರಿಯ ಶಕ್ತಿ ಹಾಗೂ ಅಧಿಕಾರವು ಮೂಲಭೂತವಾಗಿ ಪ್ರಜೆಗಳ ಮೌನ ಸಮ್ಮತಿಯಿಂದ ಬಂದಿದೆ. ಈ ಮೌನ ಸಮ್ಮತಿಯನ್ನು ಮುರಿದ ದಿನವೇ ಸರ್ವಾಧಿಕಾರಿಯ ಅಧಿಕಾರ ಕೊನೆಗೊಳ್ಳುತ್ತದೆ ಎಂಬ ಮುಖ್ಯವಾದವನ್ನು ಮುಂದಿಡುತ್ತಾರೆ. ಅಲ್ಲದೆ, ಅವರ ಪ್ರಕಾರ ಈ ಅಧಿಕಾರ ಅಥವಾ ಶಕ್ತಿ ಅಡಕವಾಗಿರುವುದು ಸಮಾಜದಲ್ಲಿ. ಅಲ್ಲದೆ, ಜನರ ಸಹಕಾರ, ವಿಧೇಯತೆ ಹಾಗೂ ಜನರ ಮೌನ ಸಮ್ಮತಿ ಈ ಅಧಿಕಾರವನ್ನು, ಶಕ್ತಿಯನ್ನು ಚಲಾಯಿಸಲು ಅವಕಾಶ ಮಾಡಿಕೊಡುತ್ತದೆ. ಇದನ್ನು ಬದಲಾಯಿಸಬೇಕಾದರೆ, ಅಥವಾ ಸರ್ವಾಧಿಕಾರವನ್ನು ಕೊನೆಗಾಣಿಸಬೇಕಾದರೆ ಜನರಲ್ಲಿ ಪ್ರಭುತ್ವವನ್ನು ಬದಲಾಯಿಸುವ ಪ್ರಬಲ ಇಚ್ಛೆ ಇರಬೇಕು. ಅಲ್ಲದೇ ಅದು ಸಾಧ್ಯವಾಗುವುದು ಒಂದು ಸಂದರ್ಭದಲ್ಲಿ–ಅದರಲ್ಲೂ ಆಳ್ವಿಕೆಗೆ ಸಹಕಾರ ಹಾಗೂ ವಿಧೇಯತೆಯನ್ನು 'ಅಸಹಕಾರದ' ಮೂಲಕ ವಾಪಸು ಪಡೆದುಕೊಂಡಾಗ ಮಾತ್ರ. ಅವರ ವಾದವನ್ನು ಉಲ್ಲೇಖಿಸುವುದಾದರೆ, "This view of power claims that all governments depend on sources of power which come from the society, and are made available because of the assistance and cooperation, and obedience of members of that society. When such assistance, cooperation, and obedience are withdrawn effectively the government's power is weakened, and when the sources of power are severed permanently, the

government's power is destroyed. Hence, all government, no matter how tyrannical, is potentially subject to control by the citizenry if they are willing to withhold their support despite repression until the regime, with no further sources of power available, disintegrates." ಆಸಕ್ತಿಯ ವಿಷಯವೆಂದರೆ ಜೀನ್ ಶಾರ್ಪ್ 'ನಾಗರೀಕರ ಇಚ್ಛೆ' ಹಾಗೂ 'ಅಸಹಕಾರ' ವಾದವನ್ನು ಗಾಂಧಿಯ ಮುಖಾಂತರ ತೆಗೆದುಕೊಳ್ಳುತ್ತಾರೆ. ಇದು ಶಾರ್ಪ್‌ರ ಬೌದ್ಧಿಕ ಚಲನಶೀಲತೆಯ ಮೂಲವನ್ನು ಎತ್ತಿಹೇಳುತ್ತದೆ. ಈ ಹಿನ್ನಲೆಯಲ್ಲಿ ಅವರು ವಿವಿಧ ಅಹಿಂಸಾ ಮಾರ್ಗಗಳನ್ನು ಪ್ರತಿಪಾದಿಸುತ್ತಾರೆ. ಗಾಂಧಿಯಲ್ಲಿ ಅಹಿಂಸಾ ಅಸ್ತ್ರಕ್ಕೆ ನಿರ್ದಿಷ್ಟ ಸಂಖ್ಯೆಗಳಿಲ್ಲ, ಶಾರ್ಪ್‌ರಲ್ಲಿ ಅದು ನಿರ್ದಿಷ್ಟವಾಗಿ ೧೯೮ ಸಂಖ್ಯೆಗೆ ಸೀಮಿತವಾಗಿರುತ್ತದೆ.

ವಾಸ್ತವವಾಗಿ ಅಹಿಂಸಾ ತಂತ್ರಗಳನ್ನು ಮೂರು ವಿಭಾಗಗಳನ್ನಾಗಿ ವಿಭಜಿಸಬಹುದು. ಅವುಗಳಲ್ಲಿ ಮುಷ್ಕರ ಹಾಗೂ ಸಮಜಾಯಿಸುವಿಕೆ; ಅಸಹಕಾರ, ಹಾಗೂ ಹಸ್ತಕ್ಷೇಪ ಸೇರಿವೆ. ಮೊದಲನೇ ತಂತ್ರಗಳಲ್ಲಿ ೫೪ ಪ್ರಕಾರಗಳಿವೆ. ಅವುಗಳಲ್ಲಿ ಸಾಂಕೇತಿಕ ಮುಷ್ಕರ, ಪರೇಡ್ ಇತ್ಯಾದಿ ಸೇರಿವೆ. ಅಸಹಕಾರದಲ್ಲಿ ಮೂರು ಪ್ರಕಾರಗಳಿವೆ: ಸಾಮಾಜಿಕ ಅಸಹಕಾರ (ಇದರಲ್ಲಿ ೧೬ ಪ್ರಕಾರಗಳಿವೆ), ಆರ್ಥಿಕ ಅಸಹಕಾರ (೨೬ಪ್ರಕಾರಗಳಿವೆ) ಹಾಗೂ ರಾಜಕೀಯ ಪ್ರಕಾರ (ಇದರಲ್ಲಿ ೩೮ ರೀತಿಗಳಿವೆ), ಕೊನೆಯ ತಂತ್ರವಾದ 'ಹಸ್ತಕ್ಷೇಪ'ದಲ್ಲಿ ೪೧ ವಿಧಗಳನ್ನು ಜೀನ್ ಶಾರ್ಪ್ ಗುರುತಿಸುತ್ತಾರೆ.

ನೈಜವಾಗಿ ವಿಶ್ಲೇಷಿಸುವುದಾದರೆ ಈ ಎಲ್ಲಾ ತಂತ್ರಗಳು ಹೊಸತೇನಲ್ಲ. ಅವುಗಳ ಇತಿಹಾಸವನ್ನು ಕೆದಕಿದರೆ ನಮಗೆ ಮತ್ತೆ ಗಾಂಧಿಯವರು ನೆನಪಾಗುತ್ತಾರೆ. ಅದರೆ ಅದರ ಶಕ್ತಿ ಇರುವುದು ಅದರ ಅಳವಡಿಕೆಯಲ್ಲಿ. ಬಹಳಷ್ಟು ತಂತ್ರಗಳನ್ನು ಹಾಗೂ ಅಸ್ತ್ರಗಳನ್ನು ಗಾಂಧಿ ತಮ್ಮ ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಅಳವಡಿಸಿದ್ದರು, ಜೀನ್ ಶಾರ್ಪ್ ಈ ಪಟ್ಟಿಯಲ್ಲಿ ಇನ್ನಷ್ಟು ಹೊಸ ತಂತ್ರಗಳನ್ನು ಸೇರಿಸಿದರು ಎಂದು ಹೇಳಿದರೆ ಅತೀಶಯೋಕ್ತಿಯಾಗಲಾರದು. ಆದಕಾರಣ ಇವುಗಳು ಗಾಂಧಿಯೋತ್ತರ ಕಾಲಾವಧಿಯ ಹೊಸ ಅಹಿಂಸಾ ರಾಜಕೀಯದ ತಂತ್ರ ಅಥವಾ ಅಸ್ತ್ರಗಳಾಗುತ್ತವೆ.

ಹೊಸತನದಿಂದ ಕೂಡಿದ ಅಹಿಂಸಾ ತಂತ್ರಗಳೆಂದರೆ ಸಾರ್ವಜನಿಕವಾಗಿ ಬತ್ತಲೆಯಾಗುವುದು, ಸ್ವಂತ ಆಸ್ತಿಯನ್ನು ಧ್ವಂಸಮಾಡುವುದು, ಹೊಸ ಸಂಜ್ಞೆಗಳನ್ನು ಅಳವಡಿಸುವುದು, ಚಳವಳಿಗೆ ಬಣ್ಣದ ಲೇಪ ಹಾಗೂ ಶೀರ್ಷಿಕೆ ನೀಡುವುದು, ಸರಕಾರಿ ನೌಕರರನ್ನು ಹೀಯಾಳಿಸುವುದು, ಸಾಂಕೇತಿಕ ಶಬ್ದಗಳ ಹಾಗೂ ಧ್ವನಿಗಳ ಉಪಯೋಗ ಇತ್ಯಾದಿ. ಆಸಕ್ತಿಯ ವಿಷಯವೆಂದರೆ ಜೀನ್ ಶಾರ್ಪ್ ಈ ಅಹಿಂಸಾ ತಂತ್ರಗಳಲ್ಲಿ ನಾಟಕ ಹಾಗೂ ಮ್ಯೂಸಿಕ್, ಕಲಿಕೆ ಮತ್ತು ಹಾಡುಗಳ ಉಪಯೋಗವನ್ನೂ, ಅಲ್ಲದೆ ಸತ್ತವರನ್ನು ಅಹಿಂಸಾ ಹೋರಾಟದ ಭಾಗವಾಗಿ ಗುರುತಿಸುತ್ತಾರೆ. ಅದರಲ್ಲಿ ರಾಜಕೀಯ ಶೋಕಾಚರಣೆ, ಅಣುಕು ಸಾವಿನ ಮೆರವಣಿಗೆ, ಸಮಾಧಿಗಳಿಗೆ ಗೌರವ ಸಲ್ಲಿಸುವುದು ಕೂಡ ಸೇರಿದೆ.

ಸಾಮಾಜಿಕ ಅಸಹಕಾರದಲ್ಲಿ ಸಾಮಾಜಿಕ ಬಹಿಷ್ಕಾರ, ಸಾಮಾಜಿಕ ಸಂಸ್ಥೆಗಳಿಗೆ ಬಹಿಷ್ಕಾರ ಸಾಮಾಜಿಕ ವ್ಯವಸ್ಥೆಯಿಂದ ಹೊರಗುಳಿಯಲು ಮನೆಯಲ್ಲಿಯೇ

ಇದ್ದುಬಿಡುವುದು, ಸಾಮುದಾಯಿಕವಾಗಿ ಪಲಾಯನ ಮಾಡುವುದು ಕೂಡ ಸೇರಿಕೊಂಡಿವೆ. ಈ ಸಂದರ್ಭದಲ್ಲಿ ಜೀನ್ ಶಾರ್ಪ್ ಬಳಕೆದಾರರಿಗೆ ಆರ್ಥಿಕ ಅಸಹಕಾರದ ತತ್ವವನ್ನು ಮುಂದಿಡುತ್ತಾರೆ. ಅದರಲ್ಲಿ ಗೇಣಿಯನ್ನು ನೀಡದಿರುವುದು, ಬಾಡಿಗೆ ನೀಡಲು ಅಸಹಕರಿಸುವುದು, ಕನಿಷ್ಟ ಖರ್ಚು ಮಾಡುವುದು, ಬಹಿಷ್ಕರಿಸಿದ ವಸ್ತುಗಳನ್ನು ಉಪಯೋಗಿಸದೇ ಇರುವುದು ಇತ್ಯಾದಿ ಸೇರಿವೆ. ಈ ರೀತಿಯ ಅಸಹಕಾರ ಬರೀ ಬಳಕೆದಾರರಿಗೆ ಮಾತ್ರ ಸೀಮಿತಗೊಳಿಸಲಿಲ್ಲ. ಈ ಅಸಹಕಾರವನ್ನು ಅವರು ಕಾರ್ಮಿಕರಿಗೆ, ಮಧ್ಯವರ್ತಿಗಳಿಗೆ, ಮ್ಯಾನೇಜ್‌ಮೆಂಟ್‌ಗೆ ಕೂಡ ನೀಡುತ್ತಾರೆ.

ಇವೆಲ್ಲರ ನಡುವೆ ಸರ್ವಾಧಿಕಾರಿಯನ್ನು ವಿರೋಧಿಸಲು ಅವರು ನೀಡುವ ಸಲಹೆ ಏಕರೂಪಿಯಲ್ಲ. ಸರ್ವಾಧಿಕಾರಿ ರಾಜಕೀಯವಾಗಿ ಬಲಹೀನವಾಗಿದ್ದರೆ ರಾಜಕೀಯ ಅಸ್ತ್ರಗಳನ್ನೂ; ಆರ್ಥಿಕವಾಗಿ ಬಲಹೀನವಾಗಿದ್ದರೆ ಆರ್ಥಿಕ ಅಸ್ತ್ರಗಳನ್ನೂ ಉಪಯೋಗಿಸಬೇಕೆಂದು ಜೀನ್ ಶಾರ್ಪ್ ವಾದಿಸುತ್ತಾರೆ. ಆದರೆ ಈ ಎಲ್ಲಾ ಅಸ್ತ್ರಗಳು ಅಂತಿಮವಾಗಿ ಅಹಿಂಸಾ ರೂಪದಲ್ಲಿರಬೇಕೆಂದು ಬಯಸುತ್ತಾರೆ; ಹಾಗೇನೆ ವಾದಿಸುತ್ತಾರೆ. ಒಟ್ಟಾರೆಯಾಗಿ ಜನತೆ ಸರ್ವಾಧಿಕಾರಿಯೊಂದಿಗೆ ಅಹಿಂಸಾ ರೂಪದಲ್ಲಿ ಅಸಹಕರಿಸಿದಾಗ, ಹಾಗೂ ಅವನ ನ್ಯಾಯಬದ್ಧತೆಯನ್ನು ಪ್ರಶ್ನಿಸಿದಾಗ ವ್ಯವಸ್ಥೆ ತನ್ನಿಂದ ತಾನಾಗಿಯೇ ಪತನಗೊಳ್ಳುತ್ತದೆ.

ಈ ಎಲ್ಲಾ ಕಾರಣಗಳಿಗಾಗಿಯೇ ಮಿಲಿಟರಿ ಆಡಳಿತಗಾರರಿಗೆ, ಸರ್ವಾಧಿಕಾರಿಗಳಿಗೆ, ಏಕವ್ಯಕ್ತಿ ಆಡಳಿತಗಾರರಿಗೆ ಜೀನ್ ಶಾರ್ಪ್ ಕಂಡರೆ ಭಯ. ವಿಚಿತ್ರವೆಂದರೆ ಈ ವ್ಯಕ್ತಿ ಎಲ್ಲಿಯೂ ಕಂಡು ಬರುವುದಿಲ್ಲ, ಯಾವುದೇ ಹೋರಾಟಗಳ ಮಂಚೂಣಿಯಲ್ಲಿಲ್ಲ. ಆದರೂ ಜಗತ್ತನ್ನು ಬದಲಾಯಿಸುವಷ್ಟು ಶಕ್ತಿಶಾಲಿ. ಒಂದು ಕಾಲದಲ್ಲಿ ಗಾಂಧಿಯಂತೆ ಆದರ್ಶವಾದಿಯಾಗಿದ್ದ ಜೀನ್ ಶಾರ್ಪ್ ಇವತ್ತು ವಾಸ್ತವವಾದಿ. ಅಹಿಂಸಾ ಅಸ್ತ್ರ ಬರೇ ಆದರ್ಶ ಕಲ್ಪನೆಯಾಗದೇ ಜನಸಾಮಾನ್ಯರು ತಮ್ಮ ದಿನ ನಿತ್ಯದಲ್ಲಿ ಪ್ರಯೋಗಿಸಬೇಕೆಂದು ವಾದಿಸಿದವರು. ಇದರಿಂದಾಗಿಯೇ ಅವರು ಪ್ರತಿಯೊಂದು ವ್ಯವಸ್ಥೆಗೂ, ಪ್ರಭುತ್ವಕ್ಕೂ, ತತ್ವಗಳಿಗೂ ದುಃಸ್ವಪ್ನವಾಗುತ್ತಾರೆ. ಇದರಲ್ಲಿ ಉದಾರವಾದಿ ಪ್ರಜಾಪ್ರಭುತ್ವವೂ, ತೀವ್ರತರ ಎಡಪಂಥೀಯವೂ ಹೊರತಾಗಿಲ್ಲ. ಒಂದು ರೀತಿಯಲ್ಲಿ ನೋಡುವುದಾದರೆ ಗಾಂಧಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟವರು.

ಆದಕಾರಣ ಒಂದು ಪ್ರಶ್ನೆ ಇಲ್ಲಿ ಅನಿವಾರ್ಯ. ಗಾಂಧಿಯಿಂದ ಸ್ಫೂರ್ತಿ ಪಡೆದ ಜೀನ್ ಶಾರ್ಪ್ ಬಲಶಾಲಿಯೇ ಅಥವಾ ಅಹಿಂಸಾ ಮಾರ್ಗಗಳನ್ನು ತನ್ನ ರಾಜಕೀಯ ಅಸ್ತ್ರವನ್ನಾಗಿ ಸೂಚಿಸಿ ವಸಾಹತುಶಾಹಿಯನ್ನು ತಲ್ಲಣಗೊಳಿಸಿದ ಗಾಂಧಿಯೇ? ವಾಸ್ತವವಾಗಿ ಜೀನ್ ಶಾರ್ಪ್ ಮುಖಾಂತರ ಗಾಂಧಿ ಇನ್ನಷ್ಟು ಬಲಶಾಲಿಯಾಗುವುದರಲ್ಲಿ ಸಂಶಯವಿಲ್ಲ. ಆದಕಾರಣ ಮಿಲಿಟರಿ ಆಡಳಿತಗಾರರು, ಸರ್ವಾಧಿಕಾರಿಗಳು ತತ್‌ಕ್ಷಣವಾಗಿ ಜೀನ್ ಶಾರ್ಪ್‌ಗೆ ಹೆದರಿದರೂ, ಅಂತಿಮವಾಗಿ ಅವರು ಹೆದರಬೇಕಾದದ್ದು ಗಾಂಧಿಗೇ. ಇವತ್ತಿನ ತಾತ್ವಿಕತೆಯ ಅನುಸಂಧಾನದ ಸಂದರ್ಭದಲ್ಲಿ ಗಾಂಧಿಯ ಅಹಿಂಸಾ ಅಸ್ತ್ರವು ಪ್ರಬಲವಾದರೆ ಹಾಗೂ ಸಫಲವಾದರೆ ಅದನ್ನು ಜನಸಾಮಾನ್ಯರ ಜಯವೆಂದೂ ತಿಳಿಯಬೇಕು. ಅಂತಿಮವಾಗಿ ಅದು ಅಹಿಂಸೆಯ ಜಯವೂ ಹೌದು, ಜನ ಸಾಮಾನ್ಯರ ಜಯವೂ ಹೌದು.

(ಸಾಭಾರ : 'ಸಂವಾದ')

ಕಲಿಯುಗ ಕುರಿತು ಭಾಗವತದೃಷ್ಟಿ

– ಲಕ್ಷ್ಮೀಶ ತೋಳ್ಪಾಡಿ

ಭಾಗವತಕ್ಕೆ ನೇರವಾಗಿ ಹೋಗುವ ಮುನ್ನ ಒಂದು ಪ್ರವೇಶಿಕೆ ಇದೆ. ಅದಕ್ಕೆ 'ಭಾಗವತ ಮಾಹಾತ್ಮ್ಯ' ಎಂದು ಹೆಸರು. ದೊಡ್ಡ ಗ್ರಂಥಗಳಿಗೆಲ್ಲ ಇಂಥದೊಂದು ಪ್ರವೇಶಿಕೆ ಇರುತ್ತೆ. ರಾಮಾಯಣ ಶುರುವಾಗುವ ಮುನ್ನ ನಾರದ ವಾಲ್ಮೀಕಿಯ ಆಶ್ರಮಕ್ಕೆ ಬಂದುದು, ನಿಜಕ್ಕೂ ಈ ಲೋಕದಲ್ಲಿ ಗುಣಾಢ್ಯನೊಬ್ಬನನ್ನು ಕಂಡಿರುವೆಯಾ ಎಂದು ವಾಲ್ಮೀಕಿ ನಾರದನನ್ನು ಕೇಳಿದ್ದು, ನಾರದ, ರಾಮನ ಕತೆ ಹೇಳಿದ್ದು– ಆಮೇಲೆ ಕ್ರೌಂಚಹಕ್ಕಿಯ ದುರಂತ ಇವೆಲ್ಲ ರಾಮಾಯಣಕ್ಕೆ ಪ್ರವೇಶಿಕೆಯೇ. ಮಹಾಭಾರತ, ತಾನು ನಿಜವಾಗಿ ತೆರೆದುಕೊಳ್ಳುವ ಮುನ್ನ ಪ್ರವೇಶಿಕೆಯಾಗಿ ಅಕ್ಕ-ತಂಗಿಯರ ಮಕ್ಕಳಾದ ಸರ್ಪ ಸಂತತಿ ಮತ್ತು ಗರುಡರ ನಡುವಣ ಸ್ಪರ್ಧೆಯನ್ನು ಕಥಿಸಿದೆ. ನಿಜಕ್ಕಾದರೆ ಮಹಾಭಾರತದ ಆದಿಪರ್ವವಿಡೀ ಒಂದು ಮಹಾಪ್ರವೇಶಿಕೆ ಎನ್ನಬಹುದು ಈ ಪ್ರವೇಶಿಕೆಗಳು ನಮಗೆ ಇಂಥ ಮಹಾಗ್ರಂಥಗಳ ಒಳಗೆ ಪ್ರವೇಶಾನುಕೂಲ ಮಾಡಿಕೊಡುವುದು ಮಾತ್ರವಲ್ಲ, ತಾವೇ ಕಾವ್ಯದ ಒಳಗೆ ಪ್ರವೇಶಿಸಿ, ಕಾವ್ಯದುದ್ದಕೆ ರೂಪಾಂತರಗೊಂಡು ಜೀವಿಸಿರುವುದುಂಟು.

ರಾಮಾಯಣದ ಉದ್ದಕ್ಕೆ ಕ್ರೌಂಚದ ಅಳಲು ಕೇಳುವುದಿಲ್ಲವೆ!

ಹಾಗೇ ಭಾಗವತಕ್ಕೂ ಒಂದು ಪ್ರವೇಶಿಕೆ ಇದೆ. ಸ್ವಲ್ಪ ಆಶ್ಚರ್ಯವೆಂದರೆ 'ಭಾಗವತ ಮಾಹಾತ್ಮ್ಯ' ಇರೋದು ಈಗ ಭಾಗವತದಲ್ಲಿಯಾದರೂ ಮೂಲದಲ್ಲಿ ಇದು ಪದ್ಮ ಪುರಾಣದ್ದು. ಭಾಗವತದ್ದಲ್ಲ. ಪದ್ಮಪುರಾಣದಲ್ಲಿ ಭಾಗವತದ ಪ್ರವೇಶಿಕೆ! ಪುರಾಣಗಳು ಹದಿನೆಂಟಿವೆ – ಭಾಗವತ ಪುರಾಣ ಕೊನೆಯದು ಎಂದು ಸರ್ವಸಮ್ಮತವಾದ ಅಭಿಪ್ರಾಯ. ಹಾಗಾದರೆ ಪದ್ಮಪುರಾಣ, ಭಾಗವತದ ಮುನ್ಸೂಚನೆಯನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ ಎಂದಾಯಿತು. ಸೃಜನಶೀಲತೆಯ ವಿಚಿತ್ರಗಳನ್ನು ಬಲ್ಲವರಿಗೆ ಇದೇನೂ ಚೋದ್ಯವಲ್ಲ. ಅಲ್ಲದೆ, ಭಾಗವತದ ರಚನೆಯಾದ ಮೇಲೆಯೇ ಈ 'ಭಾಗವತ ಮಾಹಾತ್ಮ್ಯ' ಪದ್ಮಪುರಾಣದಲ್ಲಿ ಸೇರಿರಬಹುದೆನ್ನುವುದು ಹೆಚ್ಚು ಸಂಭವನೀಯ. ಆದರೂ ಅದು ಪದ್ಮಪುರಾಣದಲ್ಲಿ ಸೇರಿತೇಕೆ, ಎನ್ನುವ ಪ್ರಶ್ನೆ ಉಳಿಯುತ್ತದೆ. ಭಾಗವತದ ಮಹಾತ್ಮೆಯನ್ನು ಇನ್ನೊಂದು ಪುರಾಣ ಹೇಳುವಂತಾಗಿರುವುದು ಒಂದು ಚಂದವೇ ಎನ್ನುವುದೂ ನಿಜ. ಮುಖ್ಯವಾದ ಮಾತೆಂದರೆ ಪ್ರಾಚೀನ ವಾಙ್ಮಯಗಳೊಳಗೆ ನಾವು ಭಾವಿಸದ, ಭಾವಿಸಲಾಗದ ರೀತಿಯಲ್ಲಿ ಒಂದು ಅಂತಃಸಂಬಂಧ ಇದೆ ಎನ್ನುವುದು.

ಈ ಪ್ರವೇಶಿಕೆ ಮುಖ್ಯವಾಗಿರುವುದು ಎರಡು ಚಿತ್ರಗಳಿಗಾಗಿ. ಮೊದಲನೆಯದು ಶುಕನ ಚಿತ್ರ, ಶುಕ, ವೇದವ್ಯಾಸರ ಓರ್ವನೇ ಮಗ. ದೊಡ್ಡಜ್ಞಾನಿ. ಜ್ಞಾನದ ಒಳನೋಟಗಳನ್ನು ಪಡೆದು ವಿರಕ್ತನಾದವ. ತೀವ್ರವಾದ ವಿರಾಗದ ಮನೋಧರ್ಮದಿಂದಾಗಿ ಮನೆ ಬಿಟ್ಟು ಹೊರಟುಹೋದ. ಎಲ್ಲಿ ಅಲೆಯುತ್ತಿದ್ದನೋ!

ತಂದೆಯಾದ ವ್ಯಾಸರಿಗೆ ಎದೆ ಕಲಕಿಹೋಯಿತು. ಶುಕನ ವಿರಕ್ತಿಯ ಇನ್ನೊಂದು ಮುಖ ಎನ್ನಬಹುದಾದ ತೀವ್ರವಾದ ಪುತ್ರಸ್ನೇಹ ಅವರನ್ನು ಆವರಿಸಿಬಿಟ್ಟಿತು; ಕಾಡಿತು.

ವ್ಯಾಸರು, ಶುಕನನ್ನು ಹುಡುಕಿಕೊಂಡು, 'ಮಗನೇ' ಎಂದು ಕೂಗಿ ಕರೆಯುತ್ತ, ಅವನಂತೇ, ಎಲ್ಲೆಲ್ಲೋ ಮರುಳನಂತೆ ಅಲೆದರು. "ದ್ವೈಪಾಯನೋ ವಿರಹಕಾತರಃ ಆಜುಹಾವ." ದ್ವೈಪಾಯನ ವ್ಯಾಸರು ಮಗನ ಅಗಲಿಕೆ ಸಹಿಸಲಾಗದೆ ಅವನನ್ನು ಕೂಗಿ ಕರೆಯುತ್ತಿದ್ದರು. ಆಗ ಒಂದು ಅದ್ಭುತ ನಡೆಯಿತು. ವ್ಯಾಸರು ಮಗನನ್ನು ಕರೆಯುತ್ತಿದ್ದಂತೆ, ಕಾಡಿನ ಮರ-ಗಿಡಗಳೆಲ್ಲ ಅವರ ಕರೆಗೆ ಓಗೊಟ್ಟುವಂತೆ. ತರವೋಭಿನೇದುಃ, ತರುಲತೆಗಳೂ ಮಾರ್ನುಡಿದವು. ಶುಕನನ್ನು ತಾವು ವಹಿಸಿಕೊಂಡು ಅವನ ಪರವಾಗಿ ಪ್ರಕೃತಿಯೇ ಪ್ರತಿಸ್ಪಂದಿಸಿದುದನ್ನು ಕಂಡು ವ್ಯಾಸರಲ್ಲಿ ಒಳನೋಟ ಉಂಟಾಯಿತು.

ಶುಕನು ಎಲ್ಲ ಜೀವಗಳನ್ನು- ಮರಗಿಡಗಳನ್ನು ಕೂಡ- ತನ್ನಂತೆ ಬಗೆಯುತ್ತಾನೆ. ಅವನಿಗೆ ಎಲ್ಲವೂ ಒಂದು ಎನ್ನುವ ಜೀವಂತಿಕೆಯ ಅನುಭವವಾಗಿದೆ. ಈ ಮರಗಿಡಗಳು ಓಗೊಡುತ್ತಿರುವುದೇ ಅದಕ್ಕೆ ಸಾಕ್ಷಿ. ಹೀಗೆ ಬಯಲಾದದವನು ತನ್ನದೆನ್ನುವ ಒಂದು ಆಲಯದಲ್ಲಿ ಇರೋದು ಸಾಧ್ಯವಿಲ್ಲ. ಮತ್ತು ನಿಜಕ್ಕೂ ವಿರಕ್ತಿ ಎಂದರೆ ಎಲ್ಲ ಜೀವಗಳನ್ನೂ ತನ್ನಂತೆ ನೋಡುವುದೇ ಆಗಿದೆ. ಅಚ್ಚರಿ ಎಂದರೆ ತಾನು ಪುತ್ರ ಸ್ನೇಹದಿಂದ ಕಂಗೆಟ್ಟು ಹುಚ್ಚು ಹಿಡಿದಂತೆ ಮಗನನ್ನು ಕರೆಯುತ್ತ ಅಲೆಯದಿರುತ್ತಿದ್ದರೆ ಈ ಸತ್ಯ ತನಗೆ ತಿಳಿದುಬರುತ್ತಿರಲಿಲ್ಲ. ಮರಗಿಡಗಳ ಪಾಡಿಗಿಂತ ಕೀಳಾಗುತ್ತಿತ್ತು ತನ್ನ ಈ ಮನುಷ್ಯತ್ವದ ಪಾಡು! ನಿಜಕ್ಕೂ ಈ ಮರಗಿಡಗಳು ಮಾರುವೇಷದಲ್ಲಿರುವ ದೇವತೆಗಳೇ ಇರಬೇಕು ನನ್ನ ಕರೆಗೆ ಓಗೊಟ್ಟು ಗುಟ್ಟು ಹೇಳಿದವು. ನಿಸರ್ಗವೇ ಓಗೊಡುವಂತೆ ಕರೆಯುವುದು ಸಾಧ್ಯ ಎಂದು ಈವರೆಗೆ ತಿಳಿದಿರಲಿಲ್ಲ. ಈ ಸತ್ಯ ತಿಳಿಯುವುದಕ್ಕಾಗಿ ಮಗನಿಗೆ ವಿರಕ್ತಿ ಉಂಟಾಯಿತೆ? ಎಲ್ಲ ಅನುಭವಗಳ ಆಳದಲ್ಲಿರುವ ಈ ಒಳಹೆಣೆಗೆಯಿದೇನು! ಮಗನೇ ಎಂದು ಆರ್ತವಾಗಿ ಕರೆದಾಗ, ಎಲ್ಲ ಓಗೊಟ್ಟುವಲ್ಲ- ಪಿತೃತ್ವ ಕೃತಾರ್ಥವಾಗಿಬಿಟ್ಟಿತು! ಯಾವುದನ್ನು ಬಿಟ್ಟುಕೊಟ್ಟು ಯಾವುದನ್ನು ಪಡೆದಂತಾಯಿತು?

ಸಾಹಿತ್ಯವು, ಅಧ್ಯಾತ್ಮದ; ತತ್ವಜ್ಞಾನದ ಬಾಗಿಲನ್ನು ತಟ್ಟುವ ಪರಿ ಇದು.

ವ್ಯಾಸರ ಈ ಅನುಭವ ಮತ್ತೆ ಭಾಗವತದಲ್ಲಿ ಕೃಷ್ಣ-ಗೋಪಿಕೆಯರ ಸಂದರ್ಭದಲ್ಲಿ ಮರುಹುಟ್ಟು ಪಡೆಯಿತೆನ್ನಬಹುದು. ಆದುದರಿಂದಲೇ ಈ ಚಿತ್ರ- ಇದನ್ನು ಶುಕನ ಚಿತ್ರ ಎನ್ನುವುದಕ್ಕಿಂತಲೂ ವ್ಯಾಸರ ಚಿತ್ರ ಎನ್ನುವುದೇ ಸರಿ- ಇದು ಭಾಗವತಕ್ಕೆ ಪ್ರವೇಶಿಕೆ.

ಎಲ್ಲ ಜೀವಗಳೂ ಓಗೊಡುವಂತೆ ಕರೆಯಬಲ್ಲನೆನ್ನುವುದೇ ವ್ಯಾಸಸಾಧ್ಯತೆ.

ಇನ್ನೊಂದು ಚಿತ್ರ, ಅದಕ್ಕೊಂದು ಕಥೆ ಇದೆ. ಇದು ಶುಕ ಮಹರ್ಷಿಗಳು ಸೂತ ಪುರಾಣಿಕನಿಗೆ ಏಕಾಂತದಲ್ಲಿ ಹೇಳಿದ ಕತೆಯಂತೆ. ಕತೆ ಹೀಗೆ: ನಾರದನೊಮ್ಮೆ ಮರ್ತ್ಯಲೋಕದಲ್ಲಿ ಅಲೆದಾಡುತ್ತಿದ್ದನಂತೆ. ಇದು ಲೋಕಗಳಲ್ಲೆಲ್ಲ ಸರ್ವೋತ್ತಮ ಲೋಕವೆಂದು ನಾರದನಿಗೆ ಯಾರೋ ಹೇಳಿದ್ದರು. ಆದರೆ ಇಲ್ಲಿ ಬಂದು ನೋಡುತ್ತಾನೆ: ಶಾಂತಿಯ ಮಾತು ಬಿಡಿ. ಮನಸ್ಸಿಗೆ ಸಂತೋಷವೇ ಇಲ್ಲವಾಗಿದೆ. ಹೊಟ್ಟೆಯ ಪಾಡು, ಅದಕಾಗಿ ಏನು ಮಾಡಲೂ ಹೇಸದ ಮಂದಿ- ಇದನ್ನು ಬಿಟ್ಟರೆ ಇನ್ನೇನೂ ಉಳಿದಿಲ್ಲವಲ್ಲ ಇಲ್ಲಿ. ನಡೆಯೆಲ್ಲ ಕಪಟ. ನುಡಿಯೆಲ್ಲ ಪ್ರಚ್ಛನ್ನ. ಒಂದು ಮಾತಿನಲ್ಲಿ ಹೇಳುವುದಾದರೆ, ಇಲ್ಲಿ ಎಲ್ಲವೂ ಮಾರಾಟದ ಸಾಮಗ್ರಿಯಾಗಿಬಿಟ್ಟಿದೆ. ಅನ್ನ, ವಿದ್ಯೆ ಮತ್ತು ದೇಹ- ಎಲ್ಲವೂ. ಯಾವುದೆಲ್ಲ ಮಾರಲಾಗದೋ ಅದೆಲ್ಲವೂ. ಇದೇನಪ್ಪ ಕಲಿಯುಗ! ಎಂದುಕೊಂಡು ಚಿಂತಾಕ್ರಾಂತನಾಗಿ ಅಲೆಯುತ್ತ ಯಮುನಾ ನದಿಯ ಬಳಿಗೆ ನಾರದ ತಲುಪಿದನಂತೆ. ಅಲ್ಲಿ ಈ ದೃಶ್ಯ ಕಂಡುಬಂದಿತು.

ಒಬ್ಬಾಕೆ ತರುಣಿ ನಿರ್ವಿಣ್ಣಳಾಗಿ ಕುಳಿತಿದ್ದಾಳೆ! ಅವಳ ಪಕ್ಕದಲ್ಲಿ ಇಬ್ಬರು ಮುದುಕರು ಪ್ರಜ್ಞೆ ಕಳೆದುಕೊಂಡು ಬಿದ್ದಿದ್ದಾರೆ. ಈ ತರುಣಿಯಾದರೋ ಏನೇನೋ ಉಪಚಾರ ಮಾಡುತ್ತ ಆ ಮುದುಕರಿಗೆ ಪ್ರಜ್ಞೆ ಮರುಕಳಿಸುತ್ತದೇನೋ ಎಂದು ಕಾತರದಿಂದ ನಿರೀಕ್ಷಿಸುತ್ತಿದ್ದಾಳೆ. ಪ್ರಜ್ಞೆ ಬರುತ್ತಿಲ್ಲ. ತರುಣಿ ಗೋಳಾಡುತ್ತಿದ್ದಾಳೆ; ಸುತ್ತ ಮಂದಿ ಹೆಂಗಸರು ನೆರೆದಿದ್ದಾರೆ.

ನಾರದ, ತರುಣಿಯ ಬಳಿ ಬಂದ. ಇದೆಲ್ಲ ಏನು ಕತೆ? ನೀನು ಯಾರು? ಎಂದು ಕೇಳಿದ. ಆಕೆ ಹೇಳಿದ್ದಿಷ್ಟು: ನಾನು 'ಭಕ್ತಿ', ಈ ಇಬ್ಬರು ನನ್ನ ಮಕ್ಕಳು– 'ಜ್ಞಾನ' ಮತ್ತು 'ವೈರಾಗ್ಯ' ನಾವು ಚೆನ್ನಾಗಿಯೇ ಇದ್ದೆವು. ಆದರೆ ಕಲಿಕಾಲದ ಪ್ರಭಾವ ಇರಬೇಕು; ನಾವು ಮೂವರೂ ಚೈತನ್ಯಕುಂದಿ ಗತಯೌವನರಾಗಿ ಮುಪ್ಪಾದೆವು. ಹಾಗೇ ಅಲೆಯುತ್ತ ವೃಂದಾವನಕ್ಕೆ ಬಂದೆವು. ವೃಂದಾವನವಾದರೋ ಕೃಷ್ಣ ನಡೆದಾಡಿದ ನೆಲ. ಕೃಷ್ಣ ಭಕ್ತಿಯಿಂದ ಉನ್ಮತ್ತರಾದ ಗೋಪಿಕೆಯರ ಹೆಜ್ಜೆಗುರುತುಗಳನ್ನು ಹೊತ್ತ ನೆಲ. ಅಲ್ಲಿಗೆ ಬಂದಂದಿನಿಂದ ಮರಳಿ ನಾನು ತಾರುಣ್ಯವನ್ನು ಹೊಂದಿದೆ. ಆದರೆ ಈ ನನ್ನ ಮಕ್ಕಳಿಗಾದರೋ ಕಳೆದುಹೋದ ಯೌವನ ಮರಳಿ ಬರಲಿಲ್ಲ. ಅವರು ಇನ್ನೂ ವೃದ್ಧರೇ ಆಗಿದ್ದಾರೆ. ಹೀಗಾಗಿ ತಾಯಿ ತರುಣಿ; ಮಕ್ಕಳು ಮುದುಕರು ಎನ್ನುವ ವಿಪರೀತ ಸ್ಥಿತಿ ಉಂಟಾಗಿದೆ. ಇನ್ನೊಂದು ರೀತಿಯಲ್ಲಿ, ಇದು ಕಲಿಯುಗದ ಪ್ರಭಾವವೇ ಎಂಬಂತಿದೆ. ಈ ಸ್ಥಿತಿ ಕಳೆದೀತು ಹೇಗೆ ಎಂದು ಹಗಲಿರುಳೂ ಚಿಂತಿಸುತ್ತಿದ್ದೇನೆ– ನೀವು ದೊಡ್ಡವರು; ನಮಗೊಂದು ದಾರಿ ತೋರಿಸಿ ಎಂದಳು.

ಹೀಗೆ ಹೇಳುವ ಸಂದರ್ಭದಲ್ಲಿ ತನ್ನ ಇತಿವೃತ್ತವನ್ನಾಕೆ ತೋಡಿಕೊಂಡಳು. ಅದು ಹೀಗೆ:

ಉತ್ಪನ್ನಾ ದ್ರಾವಿಡೇ ಸಾಹಂ ವೃದ್ಧಿಂ ಕರ್ಣಾಟಕೇಗತಾ
ಕ್ವಚಿತ್ ಕ್ವಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂಗತಾ

ದ್ರಾವಿಡದೇಶ(ತಮಿಳುನಾಡು)ದಲ್ಲಿ ಹುಟ್ಟಿದೆ. ದ್ರಾವಿಡಕನ್ಯೆ ನಾನು; 'ಭಕ್ತಿ'. ಆದರೆ ಬೆಳೆದುದೆಲ್ಲ ಕನ್ನಡದೇಶದಲ್ಲಿ. ಮಹಾರಾಷ್ಟ್ರದಲ್ಲೇನೋ ಅಲ್ಲಲ್ಲಿ ನಾನು ನಲಿದಾಡಿದ್ದುಂಟು. ಆದರೆ ಯಾವಾಗ ಗುಜರಾತಿಗೆ ಬಂದೆನೋ– ಮುಪ್ಪು ಆವರಿಸಿ ಬಿಟ್ಟಿತು, ಜೀರ್ಣಶೀರ್ಣಳಾಗಿಬಿಟ್ಟೆ.

ಇದು ಭಾರತೀಯ ಮನಸ್ಸು ಇತಿಹಾಸವನ್ನು ಕಥೆ ಮಾಡುವ ಪರಿ.

ನಿಜಕ್ಕಾದರೆ ಭಕ್ತಿಯಿಂದ ಪರಿಪ್ಲುತವಾದ ಕೀರ್ತನೆಗಳು ನಮಗೆ ಮೊದಲು ಸಿಗುವುದು ತಮಿಳುನಾಡಿನ ಆಳ್ವಾರುಗಳು ಮತ್ತು ನಾಯನ್ಮಾರರುಗಳದು. ಶೈವ; ವೈಷ್ಣವ ಭಕ್ತಿ ಮಾರ್ಗದ ಮೂಲಸೆಲೆಗಳವು. ಆದುದರಿಂದಲೇ ಕ್ರಿ.ಶ.ಹತ್ತನೆಯ ಶತಮಾನದಲ್ಲಿ ತಮಿಳುನಾಡಿನಲ್ಲಿ ಕಾಣಿಸಿಕೊಂಡ ಆಚಾರ್ಯ ರಾಮಾನುಜರು, ಆಳ್ವಾರುಗಳ ಪರಂಪರೆಯನ್ನು ತಮ್ಮದೆಂದೇ ಭಾವಿಸಿದರು; ಗುರುತಿಸಿದರು. ಅವರು ಆಳ್ವಾರುಗಳ ದೇಸೀ ತಮಿಳು ಕೀರ್ತನೆಗಳನ್ನು ವೇದತುಲ್ಯವಾಗಿ ಭಾವಿಸಿದರು. ಅವುಗಳನ್ನು ದಿವ್ಯಪ್ರಬಂಧ ಎಂದು ಕರೆದರು. ವೇದ–ಶಾಸ್ತ್ರಗಳು ಮತ್ತು ಈ ದಿವ್ಯಪ್ರಬಂಧಗಳು– ಇವೆರಡೂ ಸೇರಿ ಉಭಯ–ವೇದಾಂತ ಎಂದು ಸ್ಥಾಪಿಸಿದರು. ಭಕ್ತಿಯು ತನ್ನ ತೀವ್ರತೆಯಿಂದಾಗಿಯೇ, ತನಗೆ ತಿಳಿಯದೆಯೇ, ಕ್ರಾಂತಿಯ ಬೀಜವೊಂದನ್ನು ಹೊತ್ತದ್ದು ಸಮಾಜದ ಅರಿವಿಗೆ ಬಂತು. ಕನ್ನಡನಾಡಿನಲ್ಲಿ–ಶೈವ; ವೈಷ್ಣವ ಭಕ್ತಿಯ ಎರಡು ಪರಂಪರೆಗಳೂ ಬೆಳೆದವು. ಮೇಲುಕೋಟೆಯ ಸುತ್ತಮುತ್ತ ಆಳ್ವಾರುಗಳ ತಮಿಳು ದಿವ್ಯಪ್ರಬಂಧಗಳು ಕೇಳತೊಡಗಿದವು. ಆಚಾರ್ಯ ಶಂಕರರು ಶೃಂಗೇರಿಗೆ ಬಂದಿದ್ದರೆನ್ನುವುದು, ಪೀಠವೊಂದನ್ನು ಸ್ಥಾಪಿಸಿದ್ದರೆನ್ನುವುದು ಈಗ ಇತಿಹಾಸ.

ಶಂಕರರದು ಜ್ಞಾನಮಾರ್ಗವಾದರೂ ಅವರು ಭಕ್ತಿಯ ಮಹತ್ತ್ವವನ್ನು ಮನಗಂಡವರೇ. ಕರಾವಳಿಯ ತುಳುನಾಡಿನ ಆಚಾರ್ಯ ಮಧ್ವರು ಭಕ್ತಿಯಿಂದಲೇ ಜ್ಞಾನ ಎಂದು ಘೋಷಿಸಿದವರು. ಅಂಥ ಜ್ಞಾನದಿಂದ ಮತ್ತೆ ಭಕ್ತಿಯೇ ಬೆಳೆಯುತ್ತದೆ ಎಂದವರು. "ಭಕ್ತ್ಯಾ ಜ್ಞಾನಂ ತತೋಭಕ್ತಿಃ". ಮಧ್ವರ ಈ ಕಾಣ್ಕೆಯೇ ಆಮೇಲೆ ಕನ್ನಡನಾಡಿನಲ್ಲಿ ಮೂಡಿಬಂದ ಹರಿದಾಸ ಆಂದೋಲನಕ್ಕೆ ಒಂದು ಸ್ಫೂರ್ತಿಯಾಯಿತು. ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡು ಮತ್ತೊಂದು ಅಭೂತಪೂರ್ವವಾದ ಕ್ರಾಂತಿಯೊಂದಕ್ಕೆ ಸಾಕ್ಷಿಯಾಯಿತು. ಅದು ಬಸವಣ್ಣನವರ ನೇತೃತ್ವದಲ್ಲಿ ನಡೆದ ಜನಾಂದೋಲನ. ಬಸವಣ್ಣನವರ ನೇತೃತ್ವ ಎಂದರೆ ಭಕ್ತಿಯ ನೇತೃತ್ವ ಎನ್ನಬೇಕು. ಏಕೆಂದರೆ ಅವರು 'ಭಕ್ತಿಭಂಡಾರಿ'. ಅಲ್ಲಮನಂಥ ಜ್ಞಾನಿಗಳ ಬಸವಣ್ಣನವರ ನೇತೃತ್ವವನ್ನು ಒಪ್ಪಿದ್ದರು. ತಾವೇ ನೇತಾರರಾಗಿರಲಿಲ್ಲ. ಕ್ರಾಂತಿಯ ಬೀಜ ಇರುವುದು ಭಕ್ತಿಯ ಬಸಿರಿನಲ್ಲಿ.

ಮಧ್ಯಕಾಲದಲ್ಲಿ ಇಸ್ಲಾಮಿನ ಸಂಪರ್ಕ ಬಂತು. ಕನ್ನಡನಾಡಿನ ವಿಜಾಪುರ, ಸೂಫಿ ಸಂತರ ಕೇಂದ್ರವಾಗಿತ್ತು. ಸೂಫಿಗಳು ಉಜ್ವಲ ಭಕ್ತರಾಗಿದ್ದರು.

ಯಾವ ನೆಲೆನಿಂದಲೇ ನೋಡಿ; "ವೃದ್ಧಿಂಕರ್ಣಾಟಕೇಗತಾ." ಕ್ನಡನಾಡಿನಲ್ಲಿ ಬೆಳವಣಿಗೆ ಹೊಂದಿದೆ ಎಂಬ ಭಕ್ತಿ ತರುಣಿಯ ಮಾತು ಅನುಭವದ ಮಾತೆನ್ನಲೇಬೇಕು. ಮಹಾರಾಷ್ಟ್ರದಲ್ಲಿಯೂ ಸ್ವಲ್ಪಮಟ್ಟಿಗೆ ನಲಿದಳಂತೆ; ಬೆಳೆದಳಂತೆ.

ವಿಠ್ಠಲಭಕ್ತಿಯ ಸಂಪ್ರದಾಯ ಮಹಾರಾಷ್ಟ್ರದಲ್ಲಿ ಬೆಳೆಯಿತು. ವಿಠ್ಠಲಭಕ್ತರಿಗೆ ಚೆನ್ನಾಗಿ ಗೊತ್ತಿತ್ತು. ಭಕ್ತಿಯ ವೈಶಿಷ್ಟ್ಯವೆಂದರೆ ಯಾವ ಸಂಬಂಧವನ್ನೂ ಕೆಡಿಸದೆ, ಸಂಬಂಧವನ್ನು ಉಳಿಸಿ, ಬೆಳೆಸುತ್ತ, ವಿಸ್ತರಿಸುತ್ತ ಹೋಗುವುದು. ವಿಠ್ಠಲ ಕನ್ನಡದವನೆನ್ನುವುದು, ವೀರನಾರಾಯಣ ಗದುಗಿನವನೆನ್ನುವುದು ಈ ನೆಲೆಯಲ್ಲಿಯೇ. ದೇವರು ತಾನು ಸರ್ವವ್ಯಾಪಿ ಎಂದಾಗ ಯಾವ ನೆಲೆಯಲ್ಲಾದರೂ ನನ್ನ ಜತೆ ಸಂಬಂಧಹೊಂದಿ ಎಂದು ಪಿಸುನುಡಿದಂತೆ ಭಕ್ತಿಗೆ ಕೇಳಿಸುವುದು.

ಇನ್ನು ಗುಜರಾತಿನ ವಿಷಯ. "ಗುರ್ಜರೇಜೀರ್ಣತಾಂಗತಾ." ಗುಜರಾತಿನಲ್ಲಿ ಭಕ್ತಿಗೆ ಮುಪ್ಪು ಬಂತಂತೆ. ಗುಜರಾತು ಎಂದರೆ ವ್ಯಾಪಾರ ಎಂಬುದು ಗಾದೆಯ ಮಾತಾಗಿಬಿಟ್ಟಿದೆ.

ಇಷ್ಟು ಹೇಳಬಹುದು: ಕೃಷ್ಣ, ಯಾದವರ ನಾಶವಾದ ಮೇಲೆ, ತಾನು ದೇಹವಳಿಯುವ ಮುನ್ನ ಒಂದು ಮಾತು ಹೇಳಿಕಳುಹಿಸಿದನಂತೆ. ದ್ವಾರಕೆ ಕಡಲಲ್ಲಿ ಮುಳುಗುತ್ತೆ- ಇನ್ನೇಳು ದಿನಗಳಲ್ಲಿ- ಆದುದರಿಂದ ಎಲ್ಲರೂ ತಮ್ಮನ್ನು ತಾವು ರಕ್ಷಿಸಿಕೊಳ್ಳಿ ಅಂತ. ದ್ವಾರಕೆ, ಕೃಷ್ಣ-ಬಲರಾಮರೇ ಕಟ್ಟಿದ ನಗರ, ಕಡಲತಡಿಯಲ್ಲಿದೆ. ಎಲ್ಲ ದಿಕ್ಕಿನಲ್ಲಿಯೂ ಬಾಗಿಲಿರುವುದರಿಂದ ಅದು ದ್ವಾರ-ಕಾ. (ಭಗವಂತನ ಬಳಿ ಸಾರುವುದಕ್ಕೆ).

ಅಂಥ ದ್ವಾರಕೆ ಮುಳುಗುತ್ತೆ ಎಂದ ಕೃಷ್ಣ. ಗುರ್ಜರ ದೇಶದಲ್ಲಿದೆ. ದ್ವಾರಕೆ ಮುಳುಗಿದ್ದು ವಾಸ್ತವ ಸಂಗತಿ ಎನ್ನುತ್ತಾರೆ ತಜ್ಞರು. ಅದು ವಾಸ್ತವ ಮಾತ್ರವಲ್ಲ ಸಾಂಕೇತಿಕವೂ ಇರಬೇಕು!

ಇಷ್ಟು ಹೇಳಿ ಕೃಷ್ಣ ದೇಹ-ತ್ಯಾಗ ಮಾಡಿದ. ಕೃಷ್ಣ ನಿರ್ಯಾಣ ಹೊಂದಿದ ದಿನವೇ ಕಲಿಯುಗ ಮೊದಲಾದ ದಿನವಂತೆ. ಕಲಿಯುಗದ ಕತೆಯನ್ನು ನಾರದನ ಬಾಯಿಂದ, ಭಕ್ತಿಯ ಬಾಯಿಂದ ಕೇಳಿದ್ದೇವಲ್ಲ-

ಭಕ್ತಿಗೆ ನಾರದ ಏನು ಹೇಳಲಿಕ್ಕಿದೆ- ಮುಂದೆ ನೋಡೋಣ.

* * *

ಮೀರಾಬೆಹನ್ ಮತ್ತು ಬಹುಗುಣರ ಸಂಬಂಧ

ಮೂಲ – ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

೧೯೪೪ರಿಂದ ಸುಂದರಲಾಲ್ ಬಹುಗುಣ ಪ್ರಜಾಮಂಡಲದ ಸಾಮಾನ್ಯ ಕಾರ್ಯದರ್ಶಿಯಾಗಿ ಕೆಲಸ ಪ್ರಾರಂಭಿಸಿದಾಗ ಗಾಂಧೀಜಿಯವರ ಸುಪ್ರಸಿದ್ಧ ಪಾಶ್ಚಿಮಾತ್ಯ ಶಿಷ್ಯರಲ್ಲಿ ಒಬ್ಬರಾದ ಮೀರಾಬೆಹನ್‌ರ ಪರಿಚಯವಾಯಿತು ಮತ್ತು ಅವರೊಂದಿಗೆ ಕೆಲಸ ಪ್ರಾರಂಭಿಸಿದರು. ಅವರೊಂದಿಗಿನ ಅರ್ಥಪೂರ್ಣ ಮತ್ತು ಆತ್ಮೀಯ ಸಂಬಂಧ ಸುಂದರಲಾಲರ ಜೀವನವನ್ನು ಬಹುವಾಗಿ ಪ್ರಭಾವಿಸಿತು. ರಾಜಸ್ಥಾನದ ಮಧ್ಯಯುಗದ ಸನ್ಯಾಸಿನಿ ಮೀರಾಬಾಯಿ ಎಂದು ಗಾಂಧೀಜಿಯವರಿಂದ ನಾಮಕರಣಗೊಂಡ ಈ ಮಹಿಳೆಯಿಂದ ತಾವು ಪಡೆದ ಸ್ಫೂರ್ತಿಯನ್ನು ಬಹುಗುಣ ಹೃದಯಪೂರ್ವಕವಾಗಿ ಒಪ್ಪಿಕೊಳ್ಳುತ್ತಾರೆ. ಮೀರಾಬಾಯಿ ಅವರೊಂದಿಗಿನ ಬಹುಗುಣರವರ ಸಹವಾಸದ ಮಹತ್ವವನ್ನು ಪೂರ್ಣವಾಗಿ ಮೆಚ್ಚಬೇಕಾದರೆ ಮೀರಾಬಾಯಿಯವರ ಜೀವನದ ವಿವರಗಳನ್ನು ತಿಳಿಯಬೇಕಾಗುತ್ತದೆ. ಅದು ತುಂಬ ಚೇತೋಹಾರಿಯಾದ ಸಂಗತಿ. ಮೀರಾಬಾಯಿ ಭಾರತಕ್ಕೆ ಬಂದದ್ದು ಗಾಂಧೀಜಿಯವರೊಂದಿಗೆ ಕೆಲಸ ಮಾಡಲು. ಅದರಿಂದಾಗಿ ಅವರು ಬಂಧಿತರಾಗಿ ಗಾಂಧೀ ಮತ್ತು ಅವರ ಹೆಂಡತಿ ಕಸ್ತೂರಬಾರೊಂದಿಗೆ ಕಾರಾಗೃಹ ಅನುಭವಿಸಿದ್ದು, ಗಡವಾಲ್ ಪರ್ವತ ಶ್ರೇಣಿಗೆ ಆಗಮಿಸಿದ್ದು, ಇದೆಲ್ಲವನ್ನು ತಿಳಿಯಬೇಕಾಗುತ್ತದೆ. ಗಾಂಧೀಯವರೊಂದಿಗಿನ ಈ ಪರೋಕ್ಷ ಸಂಬಂಧ ಹಾಗೂ ಮೀರಾಬಾಯಿ ಗಡವಾಲ್ ಪ್ರದೇಶದಲ್ಲಿ ನೆಲೆಸಲು ಪ್ರಯತ್ನಿಸುತ್ತಿದ್ದಾಗ ಅವರು ಬಹುಗುಣರನ್ನು ಭೇಟಿಮಾಡಲು ಪ್ರಥಮ ಬಾರಿಗೆ ಬಂದರು. ಒಂದರ್ಥದಲ್ಲಿ ಮೀರಾಬಾಯಿ ಎಂದರೆ ಸ್ವತಂತ್ರ ಮತ್ತು ಸ್ವಾವಲಂಬಿ ಹಳ್ಳಿಗಳ ಗಾಂಧೀಜಿಯವರ ಕಲ್ಪನೆಯ ಸಾಕಾರ ಮೂರ್ತಿಯೆಂದೇ ತಿಳಿಯಬಹುದು. ಅಲ್ಲದೆ ಅವರು ಪರಿಸರವಾದಿಯೂ ಆಗಿದ್ದರು. ೧೮೯೨ರಲ್ಲಿ ಲಂಡನ್‌ನಲ್ಲಿ ಮೀರಾಬಾಯಿ ಸರ್ ಎಡ್ಮಂಡ್ ಸ್ಲೇಡ್ ಎಂಬ ಬ್ರಿಟಿಷ್ ನೌಕಾಪಡೆ ಅಧಿಕಾರಿಯ ಮಗಳಾಗಿ ಜನಿಸಿದರು. ಸ್ವಲ್ಪ ಸಮಯದ ನಂತರ ಅವರು ಸರ್ ಎಡ್ಮಂಡ್ ಆಡ್ಮಿರಲ್ ಸ್ಲೇಡ್ ಎಂದು ಉನ್ನತಿ ಪಡೆದು ಈಸ್ಟ್ ಇಂಡಿಸ್ ದ್ವೀಪಗಳಲ್ಲಿಯ ಬ್ರಿಟಿಷ್ ನೌಕಾಪಡೆಯ ಪ್ರಧಾನ ಅಧಿಕಾರಿಯಾದರು. ಅವರ ಶ್ರೀಮಂತ ಶೈಲೀಯ ಜೀವನ, ಗಾಂಧೀಯವರ ಶಿಷ್ಯತ್ವ, ಹಿಮಾಲಯ ಪರ್ವತ ಶ್ರೇಣಿಯ ಬಗ್ಗೆ ಅವರ ಪ್ರೀತಿ ಮತ್ತು ತದನಂತರ ಗಾಂಧೀಯವರ ರಚನಾತ್ಮಕ ಕಾರ್ಯಕ್ಕೆ ಬದ್ಧತೆ ಇವೆಲ್ಲ ಇಂಗ್ಲೆಂಡ್‌ನಲ್ಲಿಯ ಮೀರಾಬಾಯಿಯವರ ಬಾಲ್ಯ ಜೀವನದ ಮುಂದುವರಿಕೆಯೇ ಆಗಿದೆ ಎಂದು ಹೇಳಬಹುದು. ೧೯೫೦ರ ದಶಕದಲ್ಲಿ ಅವರು ಬರೆದ ತಮ್ಮ ಜೀವನ ಚರಿತ್ರೆಯಲ್ಲಿ ಅವರು ಹೀಗೆ ಬರೆದಿದ್ದಾರೆ, "ಐದು ಅಥವಾ ಆರನೇ ವಯಸ್ಸಿನಲ್ಲಿಯೇ ಆಗಾಗ್ಗೆ ಸಮುದ್ರದಲ್ಲಿ ತೇಲಿಕೊಂಡು ಹೋಗುತ್ತಿದ್ದೆ. ಪ್ರಕೃತಿಯ ಸಂಗೀತ, ಹಕ್ಕಿಯ ಹಾಡು, ಗಿಡಗಳ ಮೂಲಕ ಬರುವ

ಗಾಳಿಯ ಧ್ವನಿ ಆಗ ನನ್ನಲ್ಲಿ ಅನಂತವಾದ ಸಂತೋಷಾನುಭವದ ಇಚ್ಛೆಯನ್ನು ಉಂಟುಮಾಡಿತು. ಜೀವನದ ಈ ಘಟ್ಟದಲ್ಲಿಯೇ ನನ್ನ ಮನಸ್ಸು ಆ ಜ್ಞಾನ ಜಗತ್ತಿನ ಕರೆಗಳ ಹುಡುಕಾಟವನ್ನು ಪ್ರಾರಂಭಿಸಿತು. ತಂದೆಯವರು ದೀರ್ಘಕಾಲ ಮನೆಯಿಂದ ಕರ್ತವ್ಯದ ನಿರ್ವಹಣೆಗಾಗಿ ಹೊರಹೋದಾಗ ಹಳ್ಳಿಯ ನನ್ನ ತಾತನ ಇಪ್ಪತ್ತು ಎಕರೆ ಮನೆಯಲ್ಲಿ ಸುತ್ತಲಿನ ಮರ ಬಳ್ಳಿಗಳ ಜೊತೆಗೆ ಪ್ರಾಣಿಗಳ ಜೊತೆಗೆ ಮೈತ್ರಿ ಭಾವವನ್ನು ಬೆಳೆಸಿಕೊಂಡೆ. ಅಲ್ಲಿಯ ಕೆಲವು ಮರಗಳ ಬಗ್ಗೆ ವಿಶೇಷವಾದ ಪ್ರೀತಿಯಿತ್ತು. ನನಗೆ ಆ ಮರಗಳೆಲ್ಲವು ದೊಡ್ಡ ವ್ಯಕ್ತಿಗಳಾಗಿ ತೋರುತ್ತಿದ್ದವು. ಆ ಮರಗಳ ಸುತ್ತ ಕೈಗಳನ್ನು ಹಾಕಿ ತಬ್ಬಿಕೊಳ್ಳುತ್ತಿದ್ದೆ. ನನ್ನ ಅರವತ್ತರ ವಯಸ್ಸಿನಲ್ಲಿ ಕೂಡ ಮರದ ಬಗ್ಗೆ ಪ್ರೇಮ ಭಾವನೆಯಿತ್ತು".

ಸುಂದರಲಾಲರ ಪ್ರಕಾರ ಪ್ರಕೃತಿಯ ಬಗೆಗಿನ ಮೀರಾಬಾಯಿಯವರ ಸ್ಪಂದನಕ್ಕೆ ಪೋಷಕವಾಗಿ ನಿಂತದ್ದು ಸಂಗೀತದ ಬಗ್ಗೆ ಇದ್ದ ಅವರ ಭಕ್ತಿ. ಸಂಗೀತದ ಮೇಲಿನ ಪ್ರೀತಿಯ ಕಾರಣದಿಂದಾಗಿಯೇ ಅವರು ಗಾಂಧಿಯ ಬಳಿಗೆ ಬಳಸಾದ ದಾರಿಯನ್ನು ಸುತ್ತಿ ಬಂದರು. ಮೀರಾಬಾಯಿ ಹದಿನೈದು ವರ್ಷದವರಾಗಿದ್ದಾಗ ಬಿಥೋವೆನ್‌ರವರ ಸಂಗೀತದ ಮಾಧುರ್ಯವನ್ನು ಮಾದಲಬಾರಿಗೆ ಅನುಭವಿಸಿದರು. ಅದು ಅವರ ಒಳಗಿನ ಚೇತನವನ್ನು ಪ್ರಜ್ವಲಿಸಿತು. ಅವರು ಭಿಥೋವೆನ್‌ರವರ ಜೀವನ ಚರಿತ್ರೆ ಓದಿದಾಗ ಅವರ ಶ್ರೇಷ್ಠ ಸಂಗೀತ ಕಲೆಗೆ ಪ್ರಕೃತಿಯೇ ಪ್ರೇರಣೆಯನ್ನು ಕೊಟ್ಟಿತ್ತೆಂಬುದು ಗೊತ್ತಾಯಿತು. ಅಲ್ಲದೆ, ಸಂಸ್ಕೃತ ಸಾಹಿತ್ಯದ ಜರ್ಮನ್ ಭಾಷೆಯ ಸುದೀರ್ಘವಾದ ಶ್ಲೋಕಗಳನ್ನು ಎತ್ತಿಕೊಂಡಿದ್ದರೆಂದೂ ಮತ್ತು ಅವು ಅವರ ಪ್ರಜ್ಞೆಯನ್ನು ಕಟ್ಟಿದವೆಂದೂ ಗೊತ್ತಾಯಿತು. ಅವರ ೩೦ನೇ ವಯಸ್ಸಿನಲ್ಲಿ ಭಿಥೋವೆನ್ ಸಂಗೀತ ಬೆಂಬತ್ತಿ ಸ್ವಿಜರ್‌ಲ್ಯಾಂಡ್‌ಗೆ ಹೋದರು. ಅಲ್ಲಿ ಭಿಥೋವಿನ್‌ರವರ ಜೀವನ ಚರಿತ್ರಾರ ನೋಬಲ್ ಪ್ರಶಸ್ತಿ ವಿಜೇತ ಸಾಹಿತಿ ರೋಮನ್ ರೊಲಾಂಡ್‌ರನ್ನು ಸಂಧಿಸಿದರು. ರೊಲಾಂಡ್‌ರನ್ನು ಸಂದರ್ಶಿಸಿದ ಮೇಲೆ, ಅವರೂ ಸಹ ಭಾರತದಲ್ಲಿಯ ಸಮಕಾಲೀನ ಘಟನೆಗಳ ಬಗ್ಗೆ ಮತ್ತು ಗಾಂಧೀಯವರ ವಿಚಾರಗಳು ಮತ್ತು ಚಟುವಟಿಕೆಗಳ ಬಗ್ಗೆ ಆಳವಾದ ಆಸಕ್ತಿಯನ್ನು ಹೊಂದಿದ್ದಾರೆ ಎಂದು ಮೀರಾಬಾಯಿಗೆ ಗೊತ್ತಾಯಿತು. ಆಗತಾನೇ ಅವರು ಮಹಾತ್ಮಗಾಂಧೀ ಎಂಬ ಹೆಸರಿನಲ್ಲಿ ಬರೆದ ಚಿಕ್ಕ ಪುಸ್ತಕ ಮುದ್ರಣದಲ್ಲಿತ್ತು. ಗಾಂಧೀಯವರ ಬಗ್ಗೆ ಕೇಳಿದ್ದೀಯಾ ಎಂದು ರೊಲಾಂಡ್ ಮೀರಾಬಾಯಿಯವರನ್ನು ಕೇಳಿದರು. ಅದಕ್ಕೆ ಅವಳು ತಾನು ಕೇಳಿಲ್ಲವೆಂದು ಉತ್ತರಿಸಿದಳು. ಆಗ ರೊಲಾಂಡ್ ಗಾಂಧೀಯವರ ಬಗ್ಗೆ ವಿಷಯವನ್ನು ತಿಳಿಸುತ್ತ ಗಾಂಧೀಯವರ ಸ್ವಭಾವವನ್ನು ಕ್ರಿಸ್ತನ ಸ್ವಭಾವದೊಂದಿಗೆ ಹೋಲಿಸಲು ಪ್ರಾರಂಭಿಸಿದರು. ಭಿಥೋವಿನ್‌ರವರ ಮಾತುಗಳು ಮೀರಾಬಾಯಿವರ ಮನಸ್ಸಿನ ಮೇಲೆ ಆಗಾಧವಾದ ಪ್ರಭಾವವನ್ನು ಬೀರಿದವು. ಅವರು ಪ್ಯಾರೀಸ್‌ಗೆ ಹಿಂದಿರುಗಿದ ನಂತರ ಭೀಥೊವಿನ್‌ರವರ ಪುಸ್ತಕವನ್ನು ಖರೀದಿಸಿದರು ಮತ್ತು ಒಂದೇ ದಿನದಲ್ಲಿ ಓದಿ ಮುಗಿಸಿಬಿಟ್ಟರು. ಈ ಅನುಭವದ ನಂತರ ಗಾಂಧೀಯವರ ಇತರ ಬರಹಗಳ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅದನ್ನು ಓದಿದಾಗ ಅವರಿಗೆ ಜೀವನದ ಅರ್ಥವನ್ನು ಕಂಡುಕೊಂಡಿದ್ದೇನೆಂದೆನಿಸಿತು. ಇಂಗ್ಲೆಂಡ್‌ನಲ್ಲಿಯ ತಮ್ಮ ಮನೆಯನ್ನು ಮುಟ್ಟುವ ಮೊದಲೇ ತನಗೆ ಭಾರತಕ್ಕೆ ಹೋಗಲು ಕರೆ ಬಂದಿದೆ ಎಂದು ಮತ್ತು

ಭಾರತದ ಸ್ವಾತಂತ್ರ್ಯ ಚಳುವಳಿಗಾಗಿ ಗಾಂಧೀ ಅನುಸರಿಸುತ್ತಿದ್ದ ಸತ್ಯ ಮತ್ತು ಅಹಿಂಸೆಯ ಪ್ರಯೋಗದಲ್ಲಿ ಅವರೊಂದಿಗೆ ಇರಬೇಕೆಂದು ಅನಿಸಿತು. ಗಾಂಧೀಯವರ ಸ್ವಾತಂತ್ರ್ಯದ ಉದ್ದೇಶ್ಯ ಭಾರತಕ್ಕೆ ಸೀಮಿತವಾಗಿದ್ದರೂ ಮೀರಾಬಾಯಿ ದೃಷ್ಟಿಯಲ್ಲಿ ಅದು ಇಡೀ ಮಾನವ ಕುಲಕ್ಕೆ ಸಂಬಂಧಿಸಿದ್ದಾಗಿದೆಯೆಂದು ಅನಿಸಿತು. ಗಾಧೀಯವರೊಂದಿಗೆ ಪತ್ರ ವ್ಯವಹಾರ ಮಾಡಿ ಶಿಸ್ತಿನ ಜೀವನಕ್ಕಾಗಿ ಸಿದ್ಧತೆ ಮಾಡಿಕೊಂಡು ೧೯೨೫ ಅಕ್ಟೋಬರ್ ೨೫ ಭಾರತಕ್ಕೆ ಬಂದರು. ಗಾಂಧೀಯವರ ಜೊತೆಗಾರರು ಅವರನ್ನು ಮುಂಬಯಿಯಲ್ಲಿ ಸ್ವಾಗತಿಸಿದರು. ಸ್ವಲ್ಪವೂ ತಡಮಾಡದೆ ಅಹಮದಾಬಾದ್‌ಗೆ ಹೋಗುವ ರಾತ್ರಿ ರೈಲನ್ನು ಹತ್ತಿದರು. ಅಲ್ಲಿಂದ ಸಾಬರಮತಿ ಆಶ್ರಮಕ್ಕೆ ಕಾರಿನಲ್ಲಿ ಹೋದರು. ಅವರು ತುಂಬ ಅಪೇಕ್ಷೆ ಪಡುತ್ತಿದ್ದ ಮತ್ತು ಯಾರ ಆದರ್ಶಗಳನ್ನು ತನ್ನದಾಗಿ ಮಾಡಿಕೊಂಡಿದ್ದರೊ ಅಂಥ ಗಾಂಧೀಯವರ ಮೇಲೆ ಅವರ ದೃಷ್ಟಿ ಬಿದ್ದಿತು. ಅವರು ಗಾಧೀಯವರ ಪಾದಕ್ಕೆ ನಮಸ್ಕಾರ ಮಾಡಿದರು. ಗಾಂಧೀ ಅವರನ್ನು ತಮ್ಮ ಮೃದು ಕೈಗಳಿಂದ ಮೇಲಕ್ಕೆ ಎತ್ತಿದರು. ಆಗ ಗಾಂಧೀಜಿಯವರ ಬಾಯಿಯಿಂದ ಬಂದ ಮೊದಲ ಶಬ್ದಗಳು, "ನೀನು ನನ್ನ ಮಗಳಂತೆ" ಎಂಬುದಾಗಿತ್ತು. ಆನಂತರ ಸ್ವಲ್ಪ ಸಮಯದ ನಂತರ ಗಾಂಧೀಜಿ ಅವರಿಗೆ ಮೀರಾಬೆಹನ್ ಎಂದು ನಾಮಕರಣ ಮಾಡಿದರು. ಕೃಷ್ಣನ ಅನನ್ಯ ಭಕ್ತೆಯಾಗಿದ್ದ ರಾಜಸ್ಥಾನದ ಸಂತ ಮೀರಾಬಾಯಿ ಹೆಸರನ್ನು ಅವರಿಗೆ ಇಟ್ಟರು. ಗಾಂಧೀಜಿಯವರ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಪುರುಷರನ್ನು ಭಾಯಿ ಅಂದರೆ ಸಹೋದರ ಎಂದೂ, ಹೆಣ್ಣು ಮಕ್ಕಳನ್ನು ಬೆಹನ್ ಎಂದರೆ ಸಹೋದರಿಯೆಂದೂ ಕರೆಯಲಾಗುತಿತ್ತು. ಈ ರೀತಿ ಗಾಂಧೀಯವರು ತಮ್ಮ ಅನುಯಾಯಿಗಳಲ್ಲಿ ಕೌಟುಂಬಿಕ ಭಾವನೆಯನ್ನು ಆಚರಣೆಗೆ ತಂದರು. ಇದೇ ಅರ್ಥದಲ್ಲಿ ಸ್ವತಃ ಗಾಂಧೀ, ಬಾಪು ಅಥವಾ ತಂದೆ ಎಂಬುದಾಗಿ ಪರಿಚಿತರಾದರು. ಆದ್ದರಿಂದ ಮಡಿಲೈನ್ ಸ್ಲೇಡ್ ಗಾಂಧೀ ಕುಟುಂಬದಲ್ಲಿ ಮತ್ತು ಅವರನ್ನು ಬಲ್ಲ ಎಲ್ಲರಿಗೂ ಮೀರಾಬೆಹನ್ ಎಂದೇ ಪ್ರಸಿದ್ಧಿ ಹೊಂದಿದರು. ಬಹುಗುಣ ಹೇಳುವಂತೆ ಗಾಂಧೀಯವರು ರಾಜಕೀಯ ಕ್ಷೇತ್ರದಲ್ಲಿಯೂ ಕುಟುಂಬ ತತ್ವವನ್ನು ಜಾರಿಗೆ ತಂದರು. ಪ್ರಾರಂಭದ ಪರಿಚಯದ ನಂತರ ಮೀರಾಬೆಹನ್ ಬೇಗನೆ ಸಾಬರಮತಿ ಆಶ್ರಮದ ಸಕ್ರಿಯ ಕಾರ್ಯಕರ್ತರಾದರು ಮತ್ತು ಆಶ್ರಮದ ನಿಯಮಗಳಿಗೆ ಬದ್ಧರಾದರು.

ತಮ್ಮ ಹಿಂದಿನ ಶ್ರೀಮಂತಿಕೆಯ ಜೀವನ ಪದ್ಧತಿಯನ್ನು ಕಳಚಿ ಹಾಕಿದರು. ಆಶ್ರಮದಲ್ಲಿ ನಡೆಯುತ್ತಿದ್ದ ಬೆಳಗಿನ ೪.೩೦ರ ಸಮಯದ ಪ್ರಾರ್ಥನೆಯಲ್ಲಿ ಭಾಗವಹಿಸಲು ೪ ಗಂಟೆಗೆ ಎದ್ದೇಳುತ್ತಿದ್ದರು. ಆಶ್ರಮದ ಬೇರೆ ನಿವಾಸಿಗಳೊಂದಿಗೆ ಅವರು ಆವರಣವನ್ನು ಗುಡಿಸುವುದು, ಸ್ವಚ್ಛಮಾಡುವುದು ಮತ್ತು ಶೌಚಾಲಯ ಹಾಗೂ ಮೂತ್ರಾಲಯಗಳನ್ನು ಸ್ವಚ್ಛಮಾಡುವುದು ಇತ್ಯಾದಿ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ನೂಲುವುದನ್ನು ಕಲಿತುಕೊಂಡು ಗಾಂಧೀಯವರೊಂದಿಗೆ ಇರಲು ಅಗತ್ಯವಾದ ಸಿದ್ಧತೆ ಮಾಡಿಕೊಂಡರು. ಕ್ರಮೇಣ ಹಂಜಿ ಮಾಡುವುದು ಮತ್ತು ಖಾದಿಗೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ಕಲಿತುಕೊಂಡರು. ಬೇರೆಯವರೊಂದಿಗೆ ಸರದಿಯ ಮೇಲೆ ಅಡುಗೆ ಮನೆಯ ಕೆಲಸದಲ್ಲಿ ಭಾಗಿಯಾಗುತ್ತಿದ್ದರು. ಗೋಧಿ ರೊಟ್ಟಿ ತಯಾರಿಸುವುದು, ಸಾರುಮಾಡುವುದು, ತರಕಾರಿ ಹೆಚ್ಚುವುದು ಮುಂತಾದ ಎಲ್ಲ ಕೆಲಸಗಳನ್ನು ಸುಮಾರು ಇನ್ನೂರು ಜನರಿಗಾಗಿ ಮಾಡುವುದನ್ನು ಅಭ್ಯಾಸ

ಮಾಡಿಕೊಂಡರು. ಸುಂದರಲಾಲ್ ಬಹುಗುಣ ಹೇಳುವಂತೆ ಮೀರಾಬೆಹನ್ ಸ್ವಲ್ಪ ಕಾಲದಲ್ಲಿಯೇ ತಮ್ಮ ಊಟದ ಪದ್ಧತಿಯಲ್ಲಿ ಮತ್ತು ಬಟ್ಟೆ ಧರಿಸುವುದರಲ್ಲಿ ಭಾರತೀಯರಂತೆ ಆದರು. ಈ ಸಮಯದಲ್ಲಿಯೇ ಗಾಂಧೀಯವರೊಂದಿಗೆ ಸುದೀರ್ಘ ಸಂವಾದ ನಡೆಸಿ ತಮ್ಮ ಕೇಶರಾಶಿಯನ್ನು ತೆಗೆದು ಹಾಕಿ ಬ್ರಹ್ಮಚರ್ಯದ ವ್ರತವನ್ನು ಕೈಗೊಂಡರು. ಹಿಂದಿಯನ್ನು ಕಲಿಯುವುದಕ್ಕಾಗಿ ಮೊದಲು ದೆಹಲಿಗೂ ನಂತರ ಹರಿದ್ವಾರಕ್ಕೂ ಹೋದರು. ತದನಂತರ ಗಾಂಧೀಯವರ ಶಿಷ್ಯ ವಿನೋಬಾ ಭಾವೆ ಪ್ರಾರಂಭಿಸಿದ್ದ ಆಶ್ರಮದಲ್ಲಿ ಇದ್ದುಕೊಂಡು ಅರಳೆ ಹಿಂಜುವುದು, ನೂಲುವುದು ಮತ್ತು ನೇಯುವುದು ಇತ್ಯಾದಿಗಳನ್ನು ಕಲಿತು ಗಾಂಧೀಯವರ ಖಾದಿ ಪ್ರಚಾರ ಪ್ರವಾಸಗಳಲ್ಲಿ ಜೊತೆಗೂಡಿದರು. ಗ್ರಾಮೋದ್ಯೋಗಗಳ ಮೂಲಕ ಗ್ರಾಮ ಸ್ವಾವಲಂಬನೆ, ಗ್ರಾಮಸ್ವರಾಜ್ಯ, ಗ್ರಾಮನೈರ್ಮಲ್ಯ ಗ್ರಾಮೀಣ ಜೀವನ ಶಿಕ್ಷಣ ಇತ್ಯಾದಿಗಳ ಮೂಲಕ ಗ್ರಾಮಸ್ವರಾಜ್ಯದ ಮಹತ್ವವನ್ನು ಪ್ರಚಾರ ಮಾಡಿದರು. ಗಾಂಧೀಜಿಯವರ ಸಲಹೆ ಮೇರೆಗೆ ಮೀರಾಬಾಯಿ ಬಿಹಾರ್‌ಗೆ ಹೋದರು. ಗೊತ್ತಿದ್ದ ಹಿಂದಿ ಭಾಷೆ ಮೂಲಕ ಅಲ್ಲಿಯ ಖಾದಿ ಕೆಲಸಗಾರರಿಗೆ ಸುಧಾರಿತ ಹತ್ತಿ ಹಿಂಜುವ ಪದ್ಧತಿ ಮತ್ತು ನೂಲುಗಾರಿಕೆ ಕಲಿಸಿದರು. ೧೯೨೯ರಲ್ಲಿ ಗಾಂಧೀ ಅವರೊಂದಿಗೆ ಹಿಮಾಲಯದಲ್ಲಿರುವ ಕೌಸಾನಿಗೆ ಹೋದರು. ಅಲ್ಲಿ ಅವರು ಹಿಮಾಚ್ಛಾದಿತ ಪರ್ವತಗಳನ್ನು ನೋಡಿದಾಗ ಪ್ರಕೃತಿಯೊಂದಿಗೆ ಅವರ ಪ್ರೇಮ ಬೆಳೆಯಿತು. ಕಾಲಕ್ರಮೇಣ ಮೀರಾಬೆಹನ್ ಗಾಂಧೀಯವರ ಅತ್ಯಂತ ನಿಕಟವರ್ತಿಯೆಂದೇ ಗುರುತಿಸಲ್ಪಡಲಾರಂಭಿಸಿದರು. ಈ ಕಾರಣಕ್ಕಾಗಿ ಅವರು ಕಾರಾಗೃಹಕ್ಕೆ ಹೋಗಬೇಕಾಯಿತು. ೧೯೩೧ರಲ್ಲಿ ಗಾಂಧೀ ದುಂಡು ಮೇಜಿನ ಪರಿಷತ್‌ಗಾಗಿ ಲಂಡನ್‌ಗೆ ಹೋದಾಗ ಅವರು ಗಾಂಧೀಯವರ ಆಪ್ತ ಸಹಾಯಕರಾಗಿ ಕೆಲಸ ಮಾಡಿದರು.

೧೯೩೨ರಲ್ಲಿ ಅಸಹಕಾರ ಚಳುವಳಿ ಪ್ರಾರಂಭವಾಯಿತು. ಗಾಂಧೀಯವರು ಬಂಧಿತರಾದರು. ಮೀರಾಬೆಹನ್ ಮುಂಬಯಿಯಲ್ಲಿ ಇದ್ದುಕೊಂಡೇ ದೇಶದೆಲ್ಲೆಡೆ ನಡೆಯುತ್ತಿದ್ದ ಸ್ವಾತಂತ್ರ ಚಳುವಳಿಯ ಮಾಹಿತಿಯನ್ನು ಸಂಗ್ರಹಿಸಿ ಹೊರದೇಶಗಳಿಗೆ ಪ್ರಕಟಣೆಗಾಗಿ ಕಳುಹಿಸುತ್ತಿದ್ದರು. ಈ ನಿಮಿತ್ತ ಅವರನ್ನು ಬಂಧಿಸಲಾಯಿತು, ಮೂರು ತಿಂಗಳ ಶಿಕ್ಷೆಯನ್ನು ವಿಧಿಸಿ ಅರ್ಥರ್ ರೋಡ್ ಜೈಲಿನಲ್ಲಿ ಇರಿಸಲಾಯಿತು. ಬಿಡುಗಡೆಯ ನಂತರ ಅವರು ಮುಂಬಯಿಗೆ ಹಿಂದಿರುಗಕೂಡದೆಂದು ಸರ್ಕಾರ ಆದೇಶಿಸಿತು. ಆದರೆ ಮೀರಾಬಾಯಿ ಸರ್ಕಾರದ ಈ ಆದೇಶವನ್ನು ಉಲ್ಲಂಘಿಸಿದರು. ಆದ್ದರಿಂದ ಒಂದು ವರ್ಷದ ಅವಧಿಗೆ ಅವರನ್ನು ಪುನಃ ಕಾರಾಗೃಹಕ್ಕೆ ಕಳುಹಿಸಲಾಯಿತು. ಕಾರಾಗೃಹದಲ್ಲಿದ್ದಾಗ ಗಂಭೀರವಾದ ಓದುವಿಕೆ ಮತ್ತು ಅಧ್ಯಯನಕ್ಕಾಗಿ ಒಳ್ಳೆಯ ಅವಕಾಶ ಸಿಕ್ಕಿತು. ಅದರಿಂದಾಗಿ ಅವರಿಗೆ ಭಾರತೀಯ ಧಾರ್ಮಿಕ ಪರಂಪರೆಗಳನ್ನು ಅರ್ಥಮಾಡಿಕೊಳ್ಳಲು ಅವಕಾಶ ಸಿಕ್ಕಿದಂತಾಯಿತು. ಅಲ್ಲದೇ ಕಾರಾಗೃಹವಾಸವು ಗಾಂಧೀಯವರ ದೇಶೋದ್ಧಾರದ ಕಾರ್ಯಕ್ರಮಕ್ಕೆ ಅವರ ಬದ್ಧತೆಯನ್ನು ಇನ್ನಷ್ಟು ಬಲಪಡಿಸಿತು. ಜೈಲಿನಿಂದ ಗಾಂಧೀಜಿಗೆ ಬರೆದ ತಮ್ಮ ಮೊದಲ ಕಾಗದದಲ್ಲಿ ತಾವು ಯಾವ ಪುಸ್ತಕಗಳನ್ನು ಓದಬಹುದೆಂಬುದರ ಬಗ್ಗೆ ಸಲಹೆ ಕೇಳಿದರು. ಆಗ ಗಾಂಧೀಜಿಯವರು ಹಿಂದೂ ಧರ್ಮಕ್ಕೆ ಸಂಬಂಧಿಸಿದ ಎರಡು ಮಹಾ ಉದ್ಗ್ರಂಥಗಳಾದ ಮಹಾಭಾರತ ಮತ್ತು ರಾಮಾಯಣ ಓದಲು

ಸೂಚಿಸಿದರು. ತರುವಾಯ ಉಪನಿಷತ್ತಿನ ಹನ್ನೊಂದು ತತ್ವಗಳನ್ನು ಓದಲು ಶಿಫಾರಸು ಮಾಡಿದರು. ಸಾಹಿತ್ಯದ ಈ ಅಧ್ಯಯನದಿಂದ ತಮ್ಮ ಮೇಲೆ ಉಂಟಾದ ಪರಿಣಾಮದ ಬಗ್ಗೆ ಮೀರಾಬಾಯಿ ಹೀಗೆ ಹೇಳಿದ್ದಾರೆ :- "ನನ್ನ ಅಂತರಾತ್ಮದ ಭಾಗವೆಂದು ಅನಿಸುವ ವಿಷಯಗಳನ್ನು ಅರಿತುಕೊಂಡೆ. ಮೊದಲು ಯಾವುದರ ಅರಿವಿತ್ತೊ ಅದು ಕಳೆದಂತಾಗಿತ್ತು. ಅದನ್ನು ಪುನಃ ಪಡೆದಂತೆನಿಸಿತು".

ಉತ್ತರ ದಾಯಿತ್ವದ ಭಯಾನಕ ಸ್ಥಿತಿ ಹೋಗಿ ಅವ್ಯಕ್ತದ ಬಗ್ಗೆ ಜ್ಞಾನೋದಯ ಉಂಟಾಯಿತು. ಅದರಿಂದಾಗಿ ಅದನ್ನು ಕುರಿತಾದ ಧ್ಯಾನ ಗಾಬರಿಯುಕ್ತವಾಗಿದ್ದಿರದೆ ಅನಂತ ಪ್ರೇರಣಾದಾಯಕವೆಂದನಿಸಿತು. ತಮ್ಮ ಎರಡನೆಯ ಸರತಿಯ ಕಾರಾಗೃಹವಾಸದಲ್ಲಿ ಗಾಂಧೀ ಮೀರಾಬಾಯಿಗೆ ವೇದದಲ್ಲಿಯ ಭಾಗಗಳನ್ನು ಓದಲು ಶಿಫಾರಸು ಮಾಡಿದರು. ಅಧ್ಯಯನದ ಈ ಕ್ರಮದಿಂದ ಹಿಂದೂ ದರ್ಶನದ ಬಗ್ಗೆ ಒಳನೋಟ ಸಿಗುವುದು. ಇದನ್ನು ಸರಿದೂಗಿಸಲು ಕುರಾನ್‌ನನ್ನು ಮತ್ತು ಅಮೀರ್ ಅಲಿಯವರ 'ಇಸ್ಲಾಂ ಧರ್ಮದ ಚೇತನ' ಎಂಬುದನ್ನು ಓದಲು ಶಿಫಾರಸು ಮಾಡಿದರು. ಮೀರಾಭಾಯಿ ಅದರಂತೆ ಕುರಾನ್ ಓದಿ ಗಾಂಧೀಯವರಿಗೆ ತಮ್ಮ ಮನೋಭಿಪ್ರಾಯವನ್ನು ತಿಳಿಸಿದರು. ಕುರಾನ್‌ನಲ್ಲಿ ಇನ್ನು ಅನೇಕ ರತ್ನಗಳನ್ನು ಪಡೆಯುವಿಯೆಂದು ಮೀರಾಬಾಯಿಗೆ ಗಾಂಧೀ ಮಾರುತ್ತರ ಬರೆದರು. ರಾಮಾಯಣ, ಮಹಾಭಾರತದಲ್ಲಿಯ ನಳದಮಯಂತಿ ಕಥೆಯಿಂದ ಮೀರಾಬೆಹನ್ ತುಂಬಾ ಪ್ರಭಾವಿತರಾದರು. ಗಂಡನ ಬಗ್ಗೆ ಇರುವ ಹೆಂಡತಿಯ ನಿಷ್ಠೆಯನ್ನು ತಿಳಿದು ಅವರ ಹೃದಯ ತುಂಬಿ ಬಂತು. ಸೀತಾ ಮತ್ತು ದಮಯಂತಿಯರಲ್ಲಿ ಆ ಆದರ್ಶದ ಚಿತ್ರವನ್ನು ಕಂಡರೆಂಬುದಾಗಿ ತಿಳಿಸಿದರು. ಉಪನಿಷತ್ ಮತ್ತು ವೇದಗಳಲ್ಲಿ ಬಿಥೋವಿನ್‌ರವರ ಸಂಗೀತದಲ್ಲಿಯ ಲಯವನ್ನು ಕೇಳಿದಂತಾಯಿತು ಮತ್ತು ನನ್ನ ಹೃದಯ ತುಂಬಿ ಬಂತು ಎಂಬುದಾಗಿ ಮೀರಾಬೆಹನ್ ಗಾಂಧಿಗೆ ತಿಳಿಸಿದರು. ಕಾರಾಗೃಹದಿಂದ ಬಿಡುಗಡೆಯಾದ ನಂತರ ಗಾಂಧೀಜಿಯವರು ವಾಸವಾಗಿದ್ದ ನಾಗಪುರ ಬಳಿ ಇರುವ ವಾರ್ಧಾಗೆ ಹೋದರು. ಅಲ್ಲಿಂದ ಅವರು ಉಪನ್ಯಾಸ ನೀಡುವ ಕಾರ್ಯಕ್ರಮಕ್ಕಾಗಿ ಇಂಗ್ಲೆಂಡ್ ಮತ್ತು ಅಮೇರಿಕಾ ಪ್ರವಾಸಕ್ಕೆ ಹೋದರು. ಅಲ್ಲಿ ಅವರು ತಮ್ಮ ಉಪನ್ಯಾಸಗಳ ಮೂಲಕ ಭಾರತದಲ್ಲಿಯ ಸ್ವಾತಂತ್ರ ಸಂಗ್ರಾಮದ ನೈಜ ಚಿತ್ರಣವನ್ನು ಆಯಾದೇಶಗಳ ಜನತೆಯ ಮುಂದೆ ಮಂಡಿಸಿದರು. ಸೇವಾಗ್ರಾಮ ಆಶ್ರಮವನ್ನು ಸ್ಥಾಪಿಸುವುದಕ್ಕೆ ಮೀರಾಬೆಹನ್ ಬಹಳಷ್ಟು ಕಾರಣರಾದರು. ಅನಂತರದ ವರ್ಷಗಳಲ್ಲಿ ಅದು ಗಾಂಧೀಯವರ ರಚನಾತ್ಮಕ ಕಾರ್ಯ ಮತ್ತು ಸ್ವಾತಂತ್ರ ಆಂದೋಲನದ ಕೇಂದ್ರವಾಯಿತು. ಆಶ್ರಮದ ಎಲ್ಲ ಕಾರ್ಯಕ್ರಮಗಳಲ್ಲಿ ಮೀರಾಬಾಯಿ ಭಾಗಿಯಾಗುತ್ತಿದ್ದರಾದರೂ ಅವರಿಗೆ ಪಶು ಸಂಗೋಪನೆಯಲ್ಲಿ ವಿಶೇಷ ಆಸಕ್ತಿ ಉಂಟಾಯಿತು.

೧೯೪೨ ಏಪ್ರಿಲ್‌ನಲ್ಲಿ ಅಲಹಾಬಾದ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಸೇರಿದಾಗ ಗಾಂಧೀಯವರು ಒಂದು ಕರಡು ಠರಾವನ್ನು ಬರೆದು ಮೀರಾಬೆಹನ್ ಮೂಲಕ ಕಳುಹಿಸಿದರು. ಆಗಸ್ಟ್ ೮ರಂದು ಆ ಸಮಿತಿ ಮುಂಬಯಿಯಲ್ಲಿ ಪುನಃ ಸಭೆ ಸೇರಿದಾಗ ಸುಪ್ರಸಿದ್ಧ 'ಭಾರತ ಬಿಟ್ಟು ತೊಲಗಿ' ಠರಾವನ್ನು ಅಂಗೀಕರಿಸಿತು. ಅದರ ಮಾರನೆಯ ದಿನವೇ ಮೀರಾಬೆಹನ್

ಮಹದೇವ್ ದೇಸಾಯಿಯವರೊಂದಿಗೆ ಬಂಧಿತರಾದರು. ಮಹದೇವ್ ದೇಸಾಯಿ ಗಾಂಧೀಯವರ ಬಲಗೈಯಾಗಿದ್ದರು. ಮುಂದೆ ಕೆಲವೇ ದಿನಗಳಲ್ಲಿ ಗಾಂಧೀ ಮತ್ತು ಅವರ ಹೆಂಡತಿ ಕಸ್ತೂರಬಾ ಹಾಗೂ ಅವರ ಅನೇಕ ಜೊತೆಗಾರರು ಮತ್ತು ಇಡೀ ಕಾಂಗ್ರೆಸ್ ಸಮಿತಿಯ ಸದಸ್ಯರು ಕಾರಾಗೃಹಕ್ಕೆ ತಳ್ಳಲ್ಪಟ್ಟರು. ಪುಣೆಯಲ್ಲಿಯ ಆಗಾಖಾನ್ ಸೆರಮನೆಯಲ್ಲಿ ಬಂಧಿಯಾಗಿದ್ದಾಗ ಮೀರಾಬೆಹನ್, ಕಸ್ತೂರಬಾ ಮತ್ತು ದೇಸಾಯಿಯವರ ಮರಣವನ್ನು ನೋಡಿದರು. ಕೊನೆಗೆ ೧೯೪೪ ಮೇ ೬ ರಂದು ಗಾಂಧೀ ಮತ್ತು ಅವರ ಸಹಚರರು ಅಂತಿಮವಾಗಿ ಬಿಡುಗಡೆಗೊಂಡರು.

ಈ ಕಾರಾಗೃಹ ವಾಸದನಂತರ ಮೀರಾಬೆಹನ್ ಗಾಂಧೀಯವರಿಂದ ದೂರವಿದ್ದುಕೊಂಡು ಸ್ವತಂತ್ರವಾಗಿ ಕೆಲಸ ಮಾಡಲಾರಂಭಿಸಿದರು. ಅವರ ಸ್ವಂತ ಬರವಣಿಗೆಗಳ ಮೂಲಕ ಅವರು ಪ್ರಕೃತಿಯೊಂದಿಗೆ ತಾದ್ಯಾತ್ಮ ಭಾವನೆಯನ್ನು ಬೆಳೆಸಿಕೊಂಡರೆಂದು ಗೊತ್ತಾಗುತ್ತದೆ. ಪ್ರಕೃತಿಯೊಂದಿಗಿನ ಆ ತಾದ್ಯಾತ್ಮತೆ ಅವರ ಯೌವನದಲ್ಲಿ ಬಹು ಪ್ರಮುಖವಾದ ಸಂಗತಿಯಾಗಿತ್ತು. ಅದು ಗಾಂಧೀಯವರೊಂದಿಗಿನ ಸ್ವಾತಂತ್ರ ಹೋರಾಟದ ಪರಿಶ್ರಮದಾಯಕ ಅವಧಿಯಲ್ಲಿ ಕುಂಠಿತಗೊಂಡಿತ್ತು. ಅವರ ಈ ಪರಿಸರ ಪ್ರೇಮ, ವಿಚಾರಗಳಲ್ಲಿ ಹೊರಹೊಮ್ಮಲಾರಂಭಿಸಿತು. ಅಂದರೆ ಪ್ರಕೃತಿಯೊಂದಿಗೆ ಸಮರಸತೆಯನ್ನು ಹೊಂದಿದ ಜನಪದಗಳನ್ನು ಸ್ಥಾಪಿಸುವುದು ಮತ್ತು ಪ್ರಕೃತಿಯನ್ನು ದುರುಪಯೋಗಪಡಿಸಿಕೊಳ್ಳುವುದರ ವಿರುದ್ಧ ಬರೆಯುವುದು ಇತ್ಯಾದಿಗಳ ಮೂಲಕ ಹೊರಹೊಮ್ಮಿತು. ಗಾಂಧೀಯವರ ರಚನಾತ್ಮಕ ಕಾರ್ಯಗಳನ್ನು ಪ್ರಚುರ ಪಡಿಸುವುದಕ್ಕಾಗಿ ರುರುಕಿ ಮತ್ತು ಹರಿದ್ವಾರ ಮಧ್ಯೆ ಕಿಸಾನ್ ಆಶ್ರಮವೆಂಬ ಹೆಸರಿನಲ್ಲಿ ಕೇಂದ್ರವೊಂದನ್ನು ಸ್ಥಾಪಿಸಿದರು. ಈ ಆಶ್ರಮ ಯಶಸ್ವಿಯಾಗಿ ನಡೆಯುತ್ತಿದ್ದರೂ ಕೂಡ ಮೀರಾ ಬೆಹನ್‌ರಿಗೆ ಇನ್ನೂ ಕೆಲವು ಆಕಾಂಕ್ಷೆಗಳಿದ್ದವು. ಮುಖ್ಯವಾಗಿ ಪಶುಸಂಗೋಪನೆ ವಿಷಯ. ೧೯೪೬ರಲ್ಲಿ ಅವರ ವ್ಯವಸಾಯದಲ್ಲಿಯ ಮತ್ತು ಪಶುಸಂಗೋಪನೆಯಲ್ಲಿಯ ಹಾಗೂ ತತ್ಸಂಬಂಧಿತ ವಿಷಯಗಳಲ್ಲಿಯ ಪರಿಣಿತಿಯನ್ನು ಗಮನಿಸಿ ಉತ್ತರಪ್ರದೇಶ ಸರ್ಕಾರವು ಹೊಸದಾಗಿ ಪ್ರಾರಂಭಿಸಿದ 'ಹೆಚ್ಚು ಆಹಾರ ಬೆಳೆಯಿರಿ' ಎಂಬ ಚಳುವಳಿಗೆ ಅವರನ್ನು ಗೌರವ ವಿಶೇಷ ಮಾರ್ಗದರ್ಶಕರನ್ನಾಗಿ ನಿಯುಕ್ತಿ ಮಾಡಿತು. ಈ ಕಾರ್ಯಗೌರವ ಸರ್ಕಾರದ ಆಡಳಿತದ ಹೊಸ ಪ್ರಪಂಚಕ್ಕೆ ಅವರನ್ನು ಪರಿಚಯಿಸಿತು. ಗಾಂಧೀಯವರ ಆದರ್ಶಗಳಿಗೆ ಅನುಗುಣವಾಗಿ ಪ್ರಕೃತಿಯೊಂದಿಗಿನ ಸಮರಸತೆಯ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವ ಕೇಂದ್ರವೊಂದನ್ನು ಸ್ಥಾಪಿಸಬೇಕೆಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ಈ ಉದ್ದೇಶ್ಯಕ್ಕಾಗಿ ಅವರು ೧೯೪೭ ರಲ್ಲಿ ಹೃಷಿಕೇಶ್ ಬಳಿ ಪಶುಲೋಕ ಎಂಬ ಕೇಂದ್ರವನ್ನು ಸ್ಥಾಪಿಸಿದರು. ಅಲ್ಲಿ ಅವರು ಗುಡ್ಡಗಾಡು ಪ್ರದೇಶದಲ್ಲಿಯ ದನಕರುಗಳ ತಳಿಯನ್ನು ಸುಧಾರಿಸುವ ಬಗ್ಗೆ ಸಂಶೋಧನೆ ಪ್ರಾರಂಭಿಸಿದರು. ಗಾಂಧೀಯವರು ತಮ್ಮ ಅನೇಕ ಪತ್ರಗಳ ಮೂಲಕ ಮೀರಾಬಾಯಿಯವರ ಈ ಕೆಲಸಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟರಲ್ಲದೆ ಮತ್ತು ಕೇಂದ್ರದ ಹೆಸರಿಗೂ ಕೂಡ ಒಪ್ಪಿಗೆಯನ್ನು ಕೊಟ್ಟರು. ಪ್ರಕೃತಿಯ ಬಗ್ಗೆ ಇರುವ ಅವರ ಕುತೂಹಲದ ಭಾವನೆಯ ಪುನರುದ್ದೀಪನದ ಸಾಕ್ಷಿಯಾಗಿ ತಮ್ಮ ಕ್ಷೇತ್ರದ ಸ್ಥಾಪನೆಗೆ ಆರಿಸಿಕೊಂಡಿರುವ ಸ್ಥಳದ ಸಂಬಂಧದಲ್ಲಿ ಮೀರಾಬಾಯಿ ತಮ್ಮ ಒಂದು ಅನುಭವದ

ಬರಹದಲ್ಲಿ ಹೀಗೆ ಬರೆದಿದ್ದಾರೆ.

"ಆ ಭವ್ಯ ಕಾಡುಗಳ ನಿಸರ್ಗ ಸಹಜ ಸೌಂದರ್ಯ ಮತ್ತು ಅವುಗಳ ಪ್ರಾಣಿ ಮತ್ತು ಹಕ್ಕಿಗಳ ಸಂಕುಲದ ಸಿರಿತನ ನನ್ನಲ್ಲಿ ಹೊಸ ಬಗೆಯ ಬಲವನ್ನು ತಂದುಕೊಟ್ಟಿತು. ಕೌಮಾರ್ಯವನ್ನು ಉಳಿಸಿಕೊಂಡ ಪ್ರಕೃತಿಯಲ್ಲಿ ಬಹುದೊಡ್ಡ ಶಕ್ತಿ ಇದೆ. ಅದು ತನ್ನೊಂದಿಗೆ ಇರುವವರ ಜೊತೆಗೆ ಸಂಭಾಷಣೆ ಮಾಡುತ್ತದೆ." ತಾವು ನಿಜವಾದ ಕಾಡಿನಲ್ಲಿ ಪ್ರಥಮ ಬಾರಿಗೆ ವಾಸಿಸಲು ಬಂದದ್ದಾಗಿ ತಿಳಿಸಿದ್ದಾರೆ.

ಅವರು ಈ ಪಶುಲೋಕ ಆಶ್ರಮದಲ್ಲಿ ಇದ್ದಾಗಲೆ ಜನವರಿ ೩೦, ೧೯೪೮ರಂದು ಮೀರಾಬೆಹನ್ ಗಾಂಧೀ ಹತ್ಯೆಯ ಸುದ್ದಿ ಕೇಳಿದರು. ಅವರು ದುಃಖದಿಂದ ಆಘಾತಗೊಂಡರು. ಅವರು ದೆಹಲಿಗೆ ಹೋಗಲು ಅನುಕೂಲ ಮಾಡಿಕೊಡುವುದಾಗಿ ಸ್ನೇಹಿತರು ಬಂದರು. ಗಾಂಧೀಯವರ ಮರಣದ ಬಗ್ಗೆ ಅವರ ಪ್ರತಿಕ್ರಿಯೆ ಪ್ರಕೃತಿಯ ಬಗ್ಗೆ ಇದ್ದ ಅವರ ಭಕ್ತಿ, ಗಾಂಧೀಯವರ ಬಗ್ಗೆ ಇದ್ದ ತಿಳುವಳಿಕೆ ಮತ್ತು ಅವರ ಬಗ್ಗೆ ಇದ್ದ ನಿರೀಕ್ಷೆ ಇವೆಲ್ಲವುಗಳನ್ನು ಒಳಗೊಂಡಂಥ ಭಾವನೆ ಉಳ್ಳದ್ದಾಗಿತ್ತು. 'ಪ್ರೀತಿಸಿದ ಚೇತನ ಯಾವಾಗಲೂ ತನ್ನ ಬಳಿ ಇದೆ' ಎಂದು ಗಾಂಧೀಜಿ ಹೇಳಿದ ಮಾತುಗಳು ಮೀರಾಬಾಯಿಗೆ ಜ್ಞಾಪಕ ಬಂದವು.

"ದೇವರನ್ನು ನಂಬು ಮತ್ತು ನೀನೆಲ್ಲಿರುವೆಯೊ ಅಲ್ಲಿರು" ಎಂಬ ಗಾಂಧೀಜಿ ಹೇಳಿದ ತಿಳುವಳಿಕೆ ಮಾತನ್ನು ಜ್ಞಾಪಿಸಿಕೊಂಡು ಅವರು ತಮ್ಮ ಆಶ್ರಮದಿಂದ ದಿಲ್ಲಿಗೆ ಹೋಗದಿರಲು ತೀರ್ಮಾನಿಸಿದರು. ಗಾಂಧೀಜಿಯವರ ಶವಸಂಸ್ಕಾರ ಮತ್ತು ಇತರ ಧಾರ್ಮಿಕ ವಿಧಿ ವಿಧಾನಗಳು ಮುಗಿದಾದ ಮೇಲೆ ಅವರು ದಿಲ್ಲಿಗೆ ಹೋದರು. ಗಾಂಧೀ ಹತ್ಯೆಯ ಸ್ಥಳಕ್ಕೆ ಭೇಟಿಕೊಟ್ಟರು ಮತ್ತು ರಾಜಘಾಟ್‌ದಲ್ಲಿಯ ಗಾಂಧೀಯವರ ಅಂತ್ಯಸಂಸ್ಕಾರ ಸ್ಥಳಕ್ಕೂ ಭೇಟಿಕೊಟ್ಟರು. ಆದರೆ ಅಲ್ಲಿ ಅವರ ದುಃಖಕ್ಕೆ ಯಾವ ಸಾಂತ್ವನ ಸಿಗಲಿಲ್ಲ. ತಮ್ಮಷ್ಟಕ್ಕೆ ತಾವೇ ಹೀಗೆ ರೋದಿಸಿದರು. "ಎಲ್ಲಿ ಸಾವಿಗಾಗಿ ರೋದನ ಇಲ್ಲವೊ ಅಂಥ ಪ್ರದೇಶ ಮತ್ತು ಕಾಡುಗಳಲ್ಲಿಯ ಜೀವನಕ್ಕೆ ಹಿಂದಿರುಗುವೆನು. ನನ್ನ ಮಟ್ಟಿಗೆ ಬಾಪು ಇಲ್ಲಿಲ್ಲ, ಅಲ್ಲಿದ್ದಾರೆ." ಈ ಆಲೋಚನೆಗಳೊಂದಿಗೆ ಅವರು ಪಶುಲೋಕಕ್ಕೆ ತ್ವರಿತವಾಗಿ ಹೋದರು. ಅಲಹಬಾದ್‌ನಲ್ಲಿ ಗಂಗಾ ಮತ್ತು ಯಮುನಾ ನದಿಗಳ ಸಂಗಮದಲ್ಲಿ ಗಾಂಧೀಜಿಯವರ ಚಿತಾಭಸ್ಮ ವಿಸರ್ಜನೆಗೂ ಅವರು ಹೋಗದೆ ಇದ್ದಾಗ ಅವರ ಸ್ನೇಹಿತರು ಗಾಂಧೀಜಿಯವರ ಚಿತಾಭಸ್ಮವನ್ನು ಹೃಷೀಕೇಶ ಬಳಿ ಗಂಗೆಯಲ್ಲಿ ವಿಸರ್ಜಿಸಲು ಮೀರಾಬೆಹನ್‌ರಿಗೆ ಕಳುಹಿಸಿದರು. ಮೀರಾಬೆಹನ್ ಸೋಪಾನದವರೆಗೆ ಗಾಂಧೀಜಿಯವರ ಬೂದಿಯ ಪಾತ್ರೆಯನ್ನು ಕೈಯಲ್ಲಿ ಹಿಡಿದುಕೊಂಡು ಬರಿಗಾಲಿನಲ್ಲಿ ನಡೆದು ಕೊಂಡು ಹೋಗುವಾಗ ತಮ್ಮ ಶರೀರದ ಅಸ್ತಿತ್ವವನ್ನು ಮರೆತಂತವರಾಗಿದ್ದರು. ಅವರ ಪಾದದಡಿಯಲ್ಲಿದ್ದ ಭೂಮಿಯ ಸ್ಪರ್ಶಜ್ಞಾನ ಅವರಿಗೆ ಬರಲಿಲ್ಲ. ಗಂಗೆಯ ಶುದ್ಧ ಮತ್ತು ಮಿನುಗುವ ನೀರು ತೆಪ್ಪದ ಸುತ್ತ ಹರಿಯುತ್ತಿತ್ತು. ಬೂದಿಯನ್ನು ವೇಗವಾಗಿ ಹರಿಯುತ್ತಿರುವ ನದಿಯಲ್ಲಿ ಹಾಕಿದಾಗ ಪ್ರಕೃತಿಯ ವೈಭವ ಹಿಂದೆಂದಿಗಿಂತ ಹೆಚ್ಚು ಅನುಭವಕ್ಕೆ ಬಂದಿತು. ನಮ್ಮ ಭೌತಿಕ ಶರೀರವನ್ನು ತನ್ನ ಸರ್ವಾಂತರ್ಯಾಮಿ ಪ್ರೀತಿಯಿಂದ ಹಿಂದಕ್ಕೆ ಪಡೆಯುತ್ತಿರುವ ಅನುಭವವು ಆಯಿತು ಎಂಬುದಾಗಿ ಮೀರಾ ಹೇಳಿದ್ದಾರೆ.

(ಮುಂದುವರಿಯುವುದು...)

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

ಅವಸ್ಮ ಯಸ್ಯ ವೇಷಣೆ ಸ್ವೇದಂ ಪಥಿಷು ಜುಹ್ವತಿ
ಅಭೀಮಹ ಸ್ವಜೇನ್ಯಂ ಭೂಮಾ ಪೃಷ್ಠೇವ ರೂರೂಹುಃ

ಸೇವೆಗಾಗಿ ಬೆವರು ಹರಿಯುತ್ತಿದೆ. ಪರಮಾತ್ಮನ ಸಾಧನೆಗಾಗಿ ಕೃಷಿಯನ್ನು ಪರಮಾತ್ಮನ ಸ್ವರೂಪವೆಂದು ತಿಳಿದು ಮಾಡುತ್ತಿದ್ದಾನೆ, ಬೆವರಿನ ಆಹುತಿಯನ್ನು ಕೊಡುತ್ತಿದ್ದಾನೆ. ದಾರಿಯಲ್ಲಿ ಒಂದೇ ಸಮನೆ ಬೆವರು ಬೀಳುತ್ತಿದೆ, ಧರ್ಮ ಬಿಂದುಗಳು ಬೀಳುತ್ತಿವೆ.

ಈ ರೀತಿ ವೇದದಲ್ಲಿ ಉತ್ಪಾದಕ ಪರಿಶ್ರಮ-ನಿಷ್ಠೆಯ ಮಾತು ಬರುತ್ತದೆ. ಎಲ್ಲಕ್ಕಿಂತ ಉತ್ತಮ ಪರಿಶ್ರಮವೆಂದರೆ ಕೃಷಿ.

* * *

ವಸ್ತ್ರೇವಾ ಭದ್ರಾ ಸುಕೃತಾ ವಸೂಯುಃ

"ಸುಂದರವಾದ ಕೈಗಳಿಂದ ನೇಯ್ದ ಬಟ್ಟೆಯ ರೀತಿ ನನ್ನ ಸ್ತೋತ್ರವನ್ನು ಈಶ್ವರನಿಗೆ ಧರಿಸುವೆನು." ದೇವರಿಗಾಗಿ ಕವಿ ಸ್ತೋತ್ರ ರಚಿಸುತ್ತಾನೆ. ನೇಕಾರನು ನೇಯುವ ಬಟ್ಟೆ ಕೂಡ ದೇವರಿಗಾಗಿಯೇ. ಎಷ್ಟು ಹೃದಯಂಗಮ ಕಲ್ಪನೆ! ಮನಸ್ಸನ್ನು ಎಷ್ಟೊಂದು ವಿಶುದ್ಧ ಮಾಡುವ ಮತ್ತು ಹೃದಯವನ್ನು ಮುಟ್ಟುವ ವಿಚಾರ! ಕಬೀರ ಬಟ್ಟೆ ನೇಯುತ್ತಿದ್ದ, ಅದರಲ್ಲಿಯೇ ನಿಮಗ್ನನಾಗಿ ಹಾಡುತ್ತಿದ್ದ-'ಝಿನೀ ಝಿನೀ ಬಿನೀ ಚದರಿಯಾ' ಅವನು ಹಾಡು ಹೇಳುತ್ತ ಪರಮೇಶ್ವರನಿಗೆ ಹೊದಿಯುವುದಕ್ಕಾಗಿ ಚಾದರ ನೇಯುತ್ತಿದ್ದ. ಈ ಭಾವನೆ ಜೀವನದಲ್ಲಿ ಬಂದುಬಿಟ್ಟರೆ ಜೀವನ ಎಷ್ಟೊಂದು ನಿರ್ಮಲವಾಗುವುದು! ಪ್ರತಿಯೊಂದು ಕ್ರಿಯೆಯನ್ನೂ ದೇವರೊಂದಿಗೆ ಜೋಡಿಸಿದ ಕೂಡಲೆ ಜೀವನದಲ್ಲಿ ಒಮ್ಮೆಲೆ ಅದ್ಭುತ ಶಕ್ತಿ ಬರುತ್ತದೆ.

* * *

ಸ್ತ್ರಿಯೊ ಹಿದಾಸ ಆಯುಧಾನಿ ಚಕ್ರೆ ಕಿಂ ಮಾ ಕರತ್ರಬಲ ಅಸ್ಯ ಸೇನಾಃ

ದಾಸ ಅಂದರೆ ದಸ್ಯು, ಅಂದರೆ ಕಳ್ಳ. ಕಳ್ಳರು ಸ್ತ್ರೀಯರನ್ನು ಆಯುಧವನ್ನಾಗಿ ಮಾಡಿಕೊಂಡರು. ಆದರೆ ಈ ಅಬಲೆಯರ ಸೇನೆ ನನಗೇನು ತೊಂದರೆ ಕೊಡುವುದು ಎಂಬ ಬಗ್ಗೆ ಅವರಿಗೆ ತಿಳುವಳಿಕೆಯಿಲ್ಲ. ನಿಜ ಸಂಗತಿ ಏನೆಂದರೆ ದೇವರು ಮಹಿಳೆಯರನ್ನು ನನ್ನ ಹೃದಯದ ಮೇಲೆ ದಾಳಿ ಮಾಡುವುದಕ್ಕೆ ಕಳುಹಿಸಿದ್ದಾನೆ! ಹಿಂದಕ್ಕೆ ಹೀಗೆಯೇಯಿತ್ತು. ಇಂದ್ರ, ರಂಭಾ-ಮೇನಕೆ ಮುಂತಾದ ಅಪ್ಸರೆಯರನ್ನು ತಪಸ್ಚರ್ಯದ ಭಂಗಕ್ಕಾಗಿ ಕಳುಹಿಸುತ್ತಿದ್ದ. ಆದರೆ ಜ್ಞಾನದೇವ ಹೇಳುತ್ತಾರೆ- "ರಂಭೆ ಚೆನೀ ಹಿ ರೂಪೇ. ಶುಕಿ ನುಠೇ ಚಿ ಕಂದ್ರ ಪೇ" (ರಂಭೆಯ ರೂಪದಿಂದ ಕೂಡ ಶುಕ ದೇವನ ಚಿತ್ತದಲ್ಲಿ ಕಾಮದ ಉದ್ಭವವಾಗುವುದಿಲ್ಲ.)

ಅನುಬ್ರವಾಣೊ ಅಧ್ಯೇತಿನ ಸ್ವಪನ್

ಯಾರು ಪ್ರಾತಃಕಾಲವೆದ್ದು ಅಧ್ಯಯನ ಮಾಡುತ್ತಾರೊ ಅವರಿಗೆ ವಿದ್ಯೆ ಲಭಿಸುತ್ತದೆ. ಉಷಃಕಾಲ ಕಾಲಪುರುಷನ ಮಸ್ತಕ. ಯಾರು ಉಷಃಕಾಲವನ್ನು ವ್ಯರ್ಥವಾಗಿ ಕಳೆಯುತ್ತಾರೊ ಅಂಥವರು ಕಾಲ ಪುರುಷನ ತಲೆಯನ್ನೇ ಒಡೆದಂತೆ.

* * *

ವಸ್ತ್ರ ಪುತ್ರಾಯ ಮಾತರೊ ವಯಂತಿ

ಮಹಿಳೆಯರು ಮನೆಯಲ್ಲಿ ಅಡುಗೆ ಮಾಡುತ್ತಾರೆ, ಅದರಿಂದಾಗಿ ಸ್ವಚ್ಛ, ರುಚಿ ಊಟ ದೊರೆಯುತ್ತದೆ. ಅದೇ ರೀತಿ ಮಹಿಳೆಯರ ಕೈಗೆ ನೂಲುವ ಮತ್ತು ನೇಯುವ ಕೆಲಸ ಬಂದರೆ ಅವರು ರಾಣಿಯರಾಗುವರು.

ಪ್ರಾಚೀನ ಕಾಲದಲ್ಲಿ ಗಂಡಸು ಹೊಲದಲ್ಲಿ ಕೆಲಸ ಮಾಡುತ್ತಿದ್ದ, ಹೆಂಗಸು ಮನೆಯಲ್ಲಿ ನೇಯುತ್ತಿರುತ್ತಿದ್ದಳು. ಇಂದು ಗಂಡಸರು ನೇಯುತ್ತಾರೆ, ಹೆಂಗಸರು ಮಣ್ಣು ಹೊರುವ ಕೆಲಸ ಮಾಡುತ್ತಾರೆ. ಅಂದರೆ ಹೆಂಗಸರ ಸ್ವತಂತ್ರ ರೂಪದ ಕೆಲಸ ಹೊರಟು ಹೋಯಿತು. ಈ ರೀತಿ ಒಂದೊಂದು ಕೆಲಸವೂ ಹೆಂಗಸರಿಂದ ಕಸಿಯಲ್ಪಟ್ಟರೆ ಅವರು ಸ್ವಾಧೀನರಾಗಿ ಹೇಗಿರುವರು? ಗಂಡ ಸತ್ತರೆ ಮಕ್ಕಳ ಪಾಲನೆಯನ್ನು ಹೇಗೆ ಮಾಡಬೇಕೆಂಬುದು ಕೂಡ ಅವಳಿಗೆ ಗೊತ್ತಿಲ್ಲ. ಅವಳ ಬಾಳು ದಯನೀಯ ಅವಸ್ಥೆಯಾಗಿ ಬಿಡುತ್ತದೆ! ಹೆಂಗಸರಿಗಾಗಿ ಉದ್ಯೋಗಗಳು ಬೇಕು ಮತ್ತು ಅವು ಅವರ ಕೈಯಲ್ಲಿ ಇರಬೇಕು. ಹಾಗಿಲ್ಲವಾದಲ್ಲಿ ಸಮಾಜ ಉಳಿಯುದಿಲ್ಲ ಮತ್ತು ಧರ್ಮವೂ ಉಳಿಯುವುದಿಲ್ಲ. ಹೆಂಗಸರು ಮನೆಯಲ್ಲಿ ಇದ್ದರೆ ಧರ್ಮ ಉಳಿಯುವುದು, ಮಕ್ಕಳಿಗೆ ಒಳ್ಳೆಯ ವ್ಯವಸ್ಥೆಯಾಗುವುದು. ಆದ್ದರಿಂದ ಧರ್ಮರಕ್ಷಣೆಗಾಗಿ ಮಹಿಳೆಯರಿಗೆ ಮನೆಯಲ್ಲಿ ಉದ್ಯೋಗ ದೊರೆಯಬೇಕು. ಆದ್ದರಿಂದ ಜನರು ಖಾದಿ ತೊಟ್ಟುಕೊಳ್ಳುವುದು ಧರ್ಮವಾಗುತ್ತದೆ.

ವೇದದಲ್ಲಿ ಹೀಗೆ ಹೇಳಲಾಗಿದೆ, "ಹೇ ಭಗವಂತನೇ ನನಗೆ ಹಾಸಿನ ದಾರವೂ ಗೊತ್ತಿಲ್ಲ, ಹೊಕ್ಕಿನ ದಾರವೂ ಗೊತ್ತಿಲ್ಲ. ನನ್ನ ರಕ್ಷಣೆ ಮಾಡು, ಜೀವನ ಹಾಳಾಗುತ್ತಿದೆ." ಇಷ್ಟೊಂದು ಮಹತ್ವ ಖಾದಿಗೆ ಕೊಟ್ಟಿದೆ.

* * *

ಸ್ವಸ್ತಿ ಪಂಥಾಮನು ಚರೇಮ ಸೂರ್ಯಚಂದ್ರಮಸಾವಿವ

ನಮ್ಮ ಜೀವನ ಹೇಗಿರಬೇಕು? ಸೂರ್ಯ ಮತ್ತು ಚಂದ್ರರಂತೆ. ಸೂರ್ಯ ಮತ್ತು ಚಂದ್ರ ಅತ್ಯಂತ ನಿಯಮಿತವಾಗಿರುತ್ತಾರೆ, ಅಂತೆಯೇ ನಾವು ನಮ್ಮ ಜೀವನವನ್ನು ನಿಯಮಿತ ಮಾಡಿಕೊಳ್ಳಬೇಕು.

* * *

ಪೂರ್ವ ಪೂರ್ವೋ ಯಜಮಾನೊ ವನಿಯಾನ್

ಯಾರು ಎಲ್ಲರಿಗಿಂತ ಮೊದಲು ಎದ್ದು ವ್ಯವಸಾಯ ಮಾಡುತ್ತಾರೊ ಅವರು ಶ್ರೇಷ್ಠ.

ಯುಂಜತೆ ಮನ ಉತ ಯುಂಜತೆ ಧೀಯಃ ವಿಪ್ರಾವಿಪ್ರಸ್ಯ ಬೃಹತೋ ವಿಪಶ್ಚಿತಃ
ವಿ ಹೋತ್ರ ದಧೆ ವಯುನಾ ವಿದೇಕ ಇತ್ ಮಹೀ ದೇವಸ್ಯ ಸವಿತುಃ ಪರಿಷ್ಟುತಿಃ

ವಿಪ್ರ ತನ್ನ ಮನಸ್ಸಿನ ಮತ್ತು ಬುದ್ಧಿಯ ಯೋಗವನ್ನು ಆ ಮಹಾನ್ ಜ್ಞಾನಿ ವಿಪ್ರನೊಂದಿಗೆ ಮಾಡುತ್ತಾನೆ. ಅದು ಒಂದೇ ಒಂದು ಅದ್ವೀತಿಯ ವಿಶ್ವದಲ್ಲಿ ಹರಡಿದ ಎಲ್ಲ ತತ್ವವನ್ನು ತಿಳಿದಿರುವ ಆತನು ಉಪಾಸಕರಿಗಾಗಿ ವಿವಿಧ ಹವನ ಕರ್ಮವನ್ನು ಹಂಚಿದ್ದಾನೆ. ಇಂಥ ಅವನು ಆ ಸವಿತಾದೇವನ ಅಂದರೆ ದೇದೀಪ್ಯಮಾನ ಪ್ರೇರಕ ಪ್ರಭುವಿನ ಮಹಾನ್ ಸ್ತುತಿ. ಅಂದರೆ ಮಹಿಮೆ.

* * *

ನಿಜವಾದ ನಿದ್ರೆ ಅಂದರೆ ಯಾವುದು ಗಾಢವೂ ಮತ್ತು ನಿಃಸ್ವಪ್ನವಾಗಿದೆಯೋ ಅದು. ಸತ್ತ ಮೇಲೆ ಯಮಯಾತನೆ ಏನಾಗುವುದೊ ಅದಂತಿರಲಿ. ಆದರೆ ಯಾರಿಗೆ ಒಳ್ಳೆಯ ನಿದ್ರೆ ಬರುವುದಿಲ್ಲವೊ ದುಃಸ್ವಪ್ನಗಳು ಬರುತ್ತವೊ ಅವನ ಯಾತನಾಸ್ಥಿತಿ ಕೇಳ ಬೇಡಿ. ಋಷಿ ತ್ರಸ್ತರಾಗಿ ಹೀಗೆ ಹೇಳುತ್ತಾರೆ.

ಪರಾ ದುಃಸ್ವಪ್ನಂ ಸುವ

ಹೇ ಪರಮಾತ್ಮ ನನ್ನ ದುಃಸ್ವಪ್ನ ದೂರಮಾಡು. "ಇಂಥ ದುಷ್ಟ ನಿದ್ರೆ ನನಗೆ ಬೇಕಿಲ್ಲ" ವಿಶ್ರಾಂತಿಗಾಗಿ ನಿದ್ರೆ ಆದರೆ ಒಂದು ವೇಳೆ ಅದರಲ್ಲೂ ಕೂಡ ತರಹ-ತರಹದ ಸ್ವಪ್ನ ಮತ್ತು ವಿಚಾರ ನಮ್ಮ ಪಿಂಡವನ್ನು ಬಿಡದಿದ್ದರೆ ಆರಾಮವೆಲ್ಲಿ? ಸ್ವಲ್ಪವೇ ಆಗಿರಲಿ ಆದರೆ ನಿದ್ರೆ ಆಳ ಮತ್ತು ಗಾಢವಾಗಿರಬೇಕು. ನಿದ್ರೆ ವಸ್ತುತಃ ಪವಿತ್ರ ವಸ್ತು. ಶಾಂತ ಮತ್ತು ಆಳವಾದ ನಿದ್ರೆ ಪರಮ ಭಾಗ್ಯವಾನನಿಗೆ ಮಾತ್ರ ದೊರೆಯುತ್ತದೆ.

* * *

ವಿಶ್ವಾನೀ ದೇವ ಸವಿತಾಃ ಧುರೀತಾನಿ ಪರಾಸುವ
ಯದ್ ಭದ್ರಂ ತನ್ನ ಆ ಸುವ

ಹೇ ಸವಿತಾ ದೇವ! ನನ್ನ ಪಾಪವೆಲ್ಲ ನಷ್ಟವಾಗಲಿ, ಯಾವುದು ಪುಣ್ಯವೊ ಅದೇ ನನ್ನ ಕೈಯಿಂದ ನೆರವೇರಲಿ.

(ಮುಂದುವರಿಯುವುದು...)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಸಹೃದಯರ ಬಳಗದ ಆಶ್ರಯದಲ್ಲಿ 'ಭ್ರಷ್ಟಾಚಾರ ನಿರ್ಮೂಲನೆ ಒಂದು ವಿವೇಚನೆ' ಎಂಬ ವಿಷಯದ ಮೇಲೆ ಮಾಜಿ ಸ್ಪೀಕರ್ ಕೃಷ್ಣರವರಿಂದ ಉಪನ್ಯಾಸ ಏರ್ಪಡಿಸಲಾಗಿತ್ತು.

ಅಮೇರಿಕಾ ಸಂಯುಕ್ತ ಸಂಸ್ಥಾನದ ಇಪ್ಪತ್ತೈದು ಯುವಕರು ಮೂರು ದಿನಗಳ ವಾಸ್ತವ್ಯಕ್ಕೆ ಬಂದರು, ಹೊಸ ಜೀವನ ದಾರಿ ಕೇಂದ್ರದಲ್ಲಿ ಇದ್ದರು.

ಬೆಂಗಳೂರಿನಿಂದ ಬಜಾಜ್ ಸೇವಾ ಟ್ರಸ್ಟ್‌ನ ಡಾ॥ರಮೇಶ್ ಶರ್ಮಾರವರು ಮತ್ತು ಹಿರಿಯ ಸರ್ವೋದಯ ಕಾರ್ಯಕರ್ತರಾದ ನರೇಂದ್ರ ದುಬೆಯವರ ಸೊಸೆ ಟ್ರಸ್ಟ್‌ಗೆ ಭೇಟಿಕೊಟ್ಟರು. ಟ್ರಸ್ಟ್‌ನ ಕಾರ್ಯಕ್ರಮ ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಮೈಸೂರಿನಲ್ಲಿಯ ಇನ್‌ಫೋಸಿಸ್ ಸಂಸ್ಥೆಯ ಕೆಲ ಟ್ರಸ್ಟ್‌ನ ಅಭಿಮಾನಿ ಯುವಕರು ಭೇಟಿಕೊಟ್ಟರು.

ಕರ್ನಾಟಕ ಖಾದಿ ಕ್ಷೇತ್ರದ ಪಿತಾಮಹರಾದ ವೆಂಕಟರಮಣ ಅಯ್ಯರ್‌ರವರ ನೂರನೇ ಜನ್ಮದಿನೋತ್ಸವದಲ್ಲಿ ಟ್ರಸ್ಟ್‌ನ ಅಧ್ಯಕ್ಷರು ಭಾಗವಹಿಸಿದರು. ಶ್ರೀ ಅಯ್ಯರ್ ಅವರು ತಮ್ಮ ಇಳಿವಯಸ್ಸಿನಲ್ಲೂ ಟ್ರಸ್ಟ್‌ನ ಬಗ್ಗೆ ಇರಿಸಿಕೊಂಡಿರುವ ಅಭಿಮಾನದ ಸಂಕೇತವಾಗಿ ಮತ್ತು ಟ್ರಸ್ಟ್‌ನ ಖಾದಿ ಕಾರ್ಯಕ್ರಮಗಳ ಪ್ರೋತ್ಸಾಹಕ್ಕಾಗಿ ಐದುಸಾವಿರ ರುಪಾಯಿಗಳನ್ನು ಆರ್ಶೀವಾದರೂಪವಾಗಿ ಕೊಟ್ಟರು. ಟ್ರಸ್ಟ್ ಅವರಿಗೆ ಆಭಾರಿಯಾಗಿದೆ.

ತಿಪಟೂರಿನ ಖಾದಿ ಸಂಸ್ಥೆಯವರು ತಮ್ಮ ಸಂಸ್ಥೆಯಲ್ಲಿ ಮಾರಾಟಕ್ಕೆ ಬೇಕಾದ ಸಿದ್ಧ ಉಡುಪು ತಯಾರಿಕೆಗೆ ಟ್ರಸ್ಟ್‌ನ ಹೊಲಿಗೆ ಕೇಂದ್ರಕ್ಕೆ ಬಟ್ಟೆಯನ್ನು ತಂದುಕೊಟ್ಟರು.

ಬೇಸಿಗೆ ರಜೆಯ ನಂತರ ೨೦೧೧-೧೨ನೇ ಸಾಲಿಗೆ ಶ್ರೀಕೃಷ್ಣ ಕನ್ನಡ ಶಿಶುವಿಹಾರ ಪ್ರಾರಂಭಗೊಂಡಿತು. ಅಧ್ಯಾಪಕಿಯರಿಗೆ ಮಕ್ಕಳ ಶಿಕ್ಷಣದಲ್ಲಿ ವಿಶೇಷ ಅನುಭವ ಪಡೆಯುವುದಕ್ಕಾಗಿ ಮೈಸೂರಿನಲ್ಲಿರುವ ಪ್ರಯತ್ನ ಚಾರಿಟೆಬಲ್ ಟ್ರಸ್ಟ್‌ಗೆ ಭೇಟಿಕೊಡಿಸಲಾಯಿತು.

೨೦೧೧ ಜೂನ್ ಮಾಹೆಯ ದಾನಿಗಳು

ಶ್ರೀ ಸಿ.ಎಸ್.ಕೃಷ್ಣಗುಪ್ತ, ಶ್ರೀ ರಘುನಂದನ್, ಶ್ರೀ ವೆಂಕಟರಮಣ ಅಯ್ಯರ್, ಶ್ರೀಮತಿ ಗಾಯತ್ರಿ, ಶ್ರೀ ಸಿ.ಪಿ.ಶೇಷಾದ್ರಿ – ಬೆಂಗಳೂರು

ಶ್ರೀ ಕೆ.ಯಶವಂತ್ – ಮಂಗಳೂರು

ಶ್ರೀಮತಿ ದಿವ್ಯಾ – ಮೈಸೂರು

ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೯೨

– *ಸುರೇಂದ್ರ ಕೌಲಗಿ*



ಕಳೆದ ಮಾರ್ಚ್ ೨೭ ಜನಪದ ಸೇವಾ ಟ್ರಸ್ಟ್‌ನ ಐವತ್ತನೇ ಸ್ಥಾಪನಾ ಮಹೋತ್ಸವ ಆಚರಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಯಾವುದೇ ಒಂದು ಸಂಸ್ಥೆಯ ಜೀವನದಲ್ಲಿ ಐವತ್ತು ವರ್ಷಗಳ ಸಾರ್ಥಕ ಕಾರ್ಯಚರಣೆ ಮಹತ್ವದ ಸಂಗತಿ. ಅಂತೆಯೇ ಜನಪದ ಸೇವಾ ಟ್ರಸ್ಟ್‌ನ ಜೀವನದಲ್ಲೂ ಕೂಡ. ಸಂಸ್ಥೆಯು ಸ್ಥಾಪಿತಗೊಳ್ಳಬೇಕಾದರೆ, ಸ್ಥಾಪಿತಗೊಂಡ ಸಂಸ್ಥೆ ತನ್ನ ಉದ್ದೇಶಕ್ಕನುಸಾರವಾಗಿ ಕಾರ್ಯಚಟುವಟಿಕೆಗಳಲ್ಲಿ ತೊಡಗಬೇಕಾದರೆ, ಸಂಸ್ಥೆ ಉತ್ತರೋತ್ತರ ಪ್ರವರ್ಧಮಾನಕ್ಕೆ ಬರಬೇಕಾದರೆ ಮತ್ತು ಜನತೆಯ ವಿಶ್ವಾಸ, ಸಹಾಯ ಮತ್ತು ಸಹಕಾರ ಪಡೆಯಬೇಕಾದರೆ ಸಂಸ್ಥೆಯ ಸದಸ್ಯರ ಪಾತ್ರ ಹಿರಿದಾಗಿರುತ್ತದೆ. ಸಂಸ್ಥೆಯ ದೈನಂದಿನ ಕಾರ್ಯಚಟುವಟಿಕೆಯನ್ನು ನಡೆಸಿಕೊಂಡು ಹೋಗುವ ಪದಾಧಿಕಾರಿಗಳಲ್ಲಿ ಅಧ್ಯಕ್ಷ ಮತ್ತು ಕಾರ್ಯದರ್ಶಿ ಮುಖ್ಯವಾಗಿರುತ್ತಾರೆ. ಅವರು ಸಂಸ್ಥೆಯ ಕಾರ್ಯಗೌರವ ನಿಮಿತ್ತ ಹತ್ತಾರು ಕಡೆ ಓಡಾಡಬೇಕಾಗುತ್ತದೆ. ನೂರಾರು ಜನರ ಸಂಪರ್ಕ ಬೆಳೆಸಿಕೊಳ್ಳಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದ ಅವರು ಸಮಾಜದ ದೃಷ್ಟಿಗೆ ಹೆಚ್ಚು ಬೀಳುತ್ತಾರೆ. ಅನೇಕ ಸಲ ಅವರನ್ನು ಸಂಸ್ಥೆಯೊಂದಿಗೆ ಸಮೀಕರಣಗೊಳಿಸುವುದೂ ಉಂಟು. ಆದರೆ ಈ ಪದಾಧಿಕಾರಿಗಳ ಎಲ್ಲ ಕಾರ್ಯಗಳಿಗೆ ಚೇತನವನ್ನು ಕೊಡುವಂಥವರು ಮತ್ತು ಮುಖ್ಯವಾಗಿ ನೈತಿಕಶಕ್ತಿಯನ್ನು ಕೊಡುವಂಥವರು ಸಂಸ್ಥೆಯ ಇತರ ಸದಸ್ಯರೇ ಆಗಿರುತ್ತಾರೆ. ಒಂದು ವೇಳೆ ಸಂಸ್ಥೆಯ ಸಮಿತಿಯಲ್ಲಿ ಪದಾಧಿಕಾರಿಗಳ ಬಗ್ಗೆ ಒಡಕು ಧ್ವನಿ ಕೇಳಿ ಬಂದರೆ ಪದಾಧಿಕಾರಿಗಳ ಕಾರ್ಯಶಕ್ತಿ ಬಹಳಷ್ಟು ಕುಂಠಿತವಾಗಿಬಿಡುತ್ತದೆ. ಅಷ್ಟೇ ಅಲ್ಲ ತೇಜೋವಧೆಯ ಗಂಡಾಂತರವನ್ನೂ ಎದುರಿಸಬೇಕಾಗುತ್ತದೆ. ಅನೇಕ ಸಂಸ್ಥೆಗಳು ಸ್ಥಾಪನೆಯಾಗಿ ಬೆರಳೆಣಿಕೆಯ ವರ್ಷಗಳಲ್ಲಿಯೆ ಆ ಸಂಸ್ಥೆಯ ಸಮಿತಿಯ ಸದಸ್ಯರಲ್ಲಿ ಒಡಕು ಧ್ವನಿ ಉಂಟಾಗಿ ಆ ಸಂಸ್ಥೆಯ ಕಾರ್ಯಕ್ರಮಗಳಿಗೆ ದಿನನಿತ್ಯದ ಹಿಂಜರಿತ ಉಂಟಾಗಿ ಕ್ರಮೇಣ ಆ ಸಂಸ್ಥೆ ನಿಲುಗಡೆಗೆ ಬರುತ್ತದೆ. ಈ ರೀತಿ ದುರ್ದೆಸೆಗೆ ಒಳಗಾದ ಅನೇಕ ಸಂಸ್ಥೆಗಳ ಉದಾಹರಣೆ ಸಮಾಜದ ಮುಂದೆ ಇದೆ. ಇದಕ್ಕೆಲ್ಲಾ ಅಪವಾದಾತ್ಮಕವಾಗಿ ಐವತ್ತು ವರ್ಷಗಳಿಂದ ನಿರಂತರವಾಗಿ ಕೆಲಸಮಾಡಿಕೊಂಡುಬಂದು ಯಾವುದೇ ಕಾರಣದಿಂದ ಧೃತಿಗೆಡುವ ಪರಿಸ್ಥಿತಿಗೆ ಬರದೆ ಹೊಸ ಉತ್ಸಾಹ, ಹೊಸ ಚೈತನ್ಯ, ಹೊಸ ಸಾಮರ್ಥ್ಯದಿಂದ ತನ್ನ ಉದ್ದೇಶಿತ ಗುರಿಗಳನ್ನು ಸಾಧಿಸಲು ಸಾತ್ವಿಕ ಶಕ್ತಿಯಿಂದ ಕೆಲಸಮಾಡಲು ಸಾಧ್ಯವಾದುದಕ್ಕೆ

ಜನಪದ ಸೇವಾ ಟ್ರಸ್ಟ್‌ನ ಧರ್ಮದರ್ಶಿ ಮಂಡಲಿ ಬಹಳಷ್ಟು ಕಾರಣವಾಗಿದೆ ಎಂದು ಟ್ರಸ್ಟ್‌ನ ಐವತ್ತನೇ ವರ್ಷದ ಜನ್ಮದಿನೋತ್ಸವದ ಸಂದರ್ಭದಲ್ಲಿ ಸಾರಿ ಹೇಳಲು ಸಂತೋಷವೆನಿಸುತ್ತದೆ.

ಗತಿಸಿದ ಐವತ್ತು ವರ್ಷಗಳಲ್ಲಿ ಟ್ರಸ್ಟಿನ ಧರ್ಮದರ್ಶಿ ಮಂಡಲಿಯಲ್ಲಿ ಯಾವುದೇ ಭಿನ್ನಾಭಿಪ್ರಾಯ ಬರಲಿಲ್ಲ ಎಂದು ಅರ್ಥವಲ್ಲ. ಸಮಿತಿಯೆಂದರೆ ಮಿತ್ರರ ಬಳಗ. ಪ್ರತಿಯೊಬ್ಬರದು ಅವರದೇ ಆದ ವಿಚಾರಗಳು, ಅಭಿಪ್ರಾಯಗಳು ಇದ್ದೇ ಇರುತ್ತವೆ. ಅಂತೆಯೇ ಟ್ರಸ್ಟ್‌ನ ಧರ್ಮದರ್ಶಿ ಮಂಡಲಿಯಲ್ಲಿ ಕೆಲವೊಂದು ಸಂದರ್ಭದಲ್ಲಿ ಭಿನ್ನಾಭಿಪ್ರಾಯ ಉಂಟಾದದ್ದುಂಟು. ಆ ಎಲ್ಲ ಭಿನ್ನಾಭಿಪ್ರಾಯಗಳು ಸಾತ್ವಿಕ ರೂಪದ ಭಿನ್ನಾಭಿಪ್ರಾಯ ಆಗಿದ್ದವೇ ಹೊರತು ಸಂಸ್ಥೆಯನ್ನು ಮುರಿದು ಹಾಕುವ ರಾಜಸಿಕ ಭಿನ್ನಾಭಿಪ್ರಾಯಗಳಾಗಿರಲಿಲ್ಲ. ಆದ್ದರಿಂದ ಐವತ್ತುವರ್ಷಗಳ ನಂತರ ಸಾಗಿಬಂದ ದಾರಿಯತ್ತ ಕಣ್ಣುಹಾಕಿದಾಗ ಮೂಡಿ ಬಂದಿದ್ದ ಪ್ರತಿಯೊಂದು ಭಿನ್ನಾಭಿಪ್ರಾಯ ಸಂಸ್ಥೆಯನ್ನು ಗಟ್ಟಿಮಾಡಿತೇ ಹೊರತು ದುರ್ಬಲಗೊಳಿಸಲಿಲ್ಲ ಎಂದೆನಿಸದೆ ಇರದು. ಟ್ರಸ್ಟ್ ಐವತ್ತು ವರ್ಷ ಉಳಿದು ಬಾಳುತ್ತಿರುವುದಕ್ಕೂ ಟ್ರಸ್ಟ್‌ನ ಈ ಅಂತಃಶಕ್ತಿಯೇ ಕಾರಣ. ಧರ್ಮದರ್ಶಿಗಳಲ್ಲೆರೂ ಒಂದು ಮನೆಯವರಂತೆ, ಬಂಧುಗಳಂತೆ, ಒಂದೇ ವಿಚಾರ ಮಾರ್ಗದ ಸಹಪಥಿಕರಂತೆ ಕೆಲಸಮಾಡಿಕೊಂಡು ಬಂದಿದ್ದಾರೆ. ಟ್ರಸ್ಟ್‌ನ ನಿಯಮಾವಳಿ ಪ್ರಕಾರ ಟ್ರಸ್ಟಿನ ಸದಸ್ಯತ್ವಕ್ಕಾಗಿ ಯಾವ ಶುಲ್ಕವೂ ನಿಗದಿತವಾಗಿಲ್ಲ. ಯಾರಿಗೆ ಟ್ರಸ್ಟ್‌ನ ಧ್ಯೇಯೋದ್ದೇಶಗಳಲ್ಲಿ ನಂಬಿಕೆ ಇದೆಯೋ, ಯಾರು ಟ್ರಸ್ಟ್‌ನ ಕಾರ್ಯಚಟುವಟಿಕೆಗಳಿಗಾಗಿ ತಮ್ಮ ಸಮಯ ಕೊಡಬಲ್ಲರೋ ಅಂಥವರು ಸದಸ್ಯತ್ವ ಪಡೆಯಬಹುದಾಗಿದೆ. ಅಂದರೆ ಧರ್ಮದರ್ಶಿಗಳಲ್ಲಿ ಯಾವುದೇ ಕಾರಣದಿಂದ ಭೇದಭಾವ ಇಲ್ಲ. ಟ್ರಸ್ಟ್‌ನ ಹಿತದ ವಿಚಾರದಲ್ಲಿ ಎಲ್ಲರೂ ಒಂದು ಎಂಬ ಭಾವನೆ ಮುಖ್ಯವಾಗಿದೆ.

ಜನಪದ ಸೇವಾ ಟ್ರಸ್ಟ್‌ನ ಐವತ್ತನೇ ವರ್ಷದ ಸಂಧ್ಯಾಕಾಲದಲ್ಲಿ ಅಲ್ಲ, ಉಷಃಕಾಲದಲ್ಲಿ ಟ್ರಸ್ಟ್‌ನ ಧರ್ಮದರ್ಶಿಯಾಗಿ ಸೇವೆ ಸಲ್ಲಿಸಿದವರನ್ನು ನೆನೆಯುವುದು ಒಂದು ಪುಣ್ಯಕಾರ್ಯ.

ಜನಪದ ಸೇವಾ ಟ್ರಸ್ಟ್ ೧೯೬೦ರಲ್ಲಿ ಪ್ರಾರಂಭವಾಯಿತು. ಆ ವರ್ಷ ಶ್ರೀ ಬಿ.ಕೆ.ಕೆಂಚೇಗೌಡರು, ವಯಸ್ಸಿನಲ್ಲಿ ಎಲ್ಲರಿಗಿಂತ ಕಿರಿಯರಾಗಿದ್ದವರು, ಅಧ್ಯಕ್ಷರಾದರು. ಅವರು ಎರಡು ವರ್ಷದ ಸೇವಾ ಅವಧಿಯಂತೆ ಮೂರು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಟ್ರಸ್ಟ್‌ನ ಸಂಸ್ಥಾಪನೆಗೆ ಪ್ರೋತ್ಸಾಹ ಕೊಟ್ಟವರು ಪ್ರೊ.ಬಿ.ಆರ್.ಪ್ರಾಣೇಶ್‌ರಾವ್. ಅವರು ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದರಲ್ಲದೆ ಗಾಂಧೀ ವಿಚಾರದಲ್ಲಿ ಬಹಳಷ್ಟು ಕೃಷಿ ಮಾಡಿದ್ದರು. ತಮ್ಮ ವಿಶಿಷ್ಟವಾದ ಜೀವನಶೈಲಿ, ಸಮಾಜಮುಖಿ ಜೀವನ ಮತ್ತು ಸಜ್ಜನಿಕೆಯ ಕಾರಣದಿಂದ ಮೈಸೂರು ನಗರದಲ್ಲಿ ಜನಪ್ರಿಯ ವ್ಯಕ್ತಿಯಾಗಿದ್ದರು. ಅವರು ಎರಡು ವರ್ಷ ಅವಧಿಯ ಅಧ್ಯಕ್ಷತೆಯನ್ನು ಎರಡು ಬಾರಿ ನಿರ್ವಹಿಸಿದರು. ಟ್ರಸ್ಟ್‌ಗೆ ಭದ್ರ ವೈಚಾರಿಕ ಬುನಾದಿಯನ್ನು

ಹಾಕಿದರು. ಟ್ರಸ್ಟ್ ಮೇಲುಕೋಟೆಯಲ್ಲಿ ಸ್ಥಾಪಿತವಾಗಿದ್ದರೂ ಕೊಡಗಿನ ಶ್ರೀಮತಿ ಮಿನ್ನಿ ಜಿ.ಬೋಪಯ್ಯ ಟ್ರಸ್ಟ್‌ನ ಧರ್ಮದರ್ಶಿಯಾಗಿ ಹಾಗೂ ನಂತರ ಮೂರು ಬಾರಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇವರ ಅಧ್ಯಕ್ಷತೆ ಅವಧಿಯಲ್ಲಿ ಒಂದು ಬಾರಿ ಮಡಿಕೇರಿಯಲ್ಲಿ ಟ್ರಸ್ಟ್‌ನ ಸಭೆನಡೆಯಿತು. ಆಗ ಅವರು ವಿಶೇಷ ಆದರಾತಿಥ್ಯ ಮಾಡಿದರಲ್ಲದೆ ಮಡಿಕೇರಿಯಲ್ಲಿ ನೆಲೆಸಿದ್ದ ಭಾರತದ ನಿವೃತ್ತ ಶ್ರೇಷ್ಠ ಸೇನಾ ದಂಡಾಧಿಕಾರಿ ಕಾರ್ಯಪ್ಪನವರ ಮನೆಗೆ ಕರೆದುಕೊಂಡು ಹೋಗಿ ಧರ್ಮದರ್ಶಿಗಳ ಪರಿಚಯ ಮಾಡಿಕೊಟ್ಟರು. ಟ್ರಸ್ಟ್ ಯುವ ಸದಸ್ಯರಿಗಾಗಿ ಹುಡುಕುತ್ತಿದ್ದಾಗ ಮೈಸೂರು ನಗರದ ಕನ್ನಡ ಕಟ್ಟಾಳು ಮತ್ತು ಲೋಹಿಯಾ ವಿಚಾರವಾದಿ ಶ್ರೀ ಪ.ಮಲ್ಲೇಶ್ ದೊರೆತರು. ಅವರು ಮೂರು ಬಾರಿ ಅಧ್ಯಕ್ಷರಾಗಿಯೂ, ಒಂದು ಬಾರಿ ಖಜಾಂಚಿಯಾಗಿಯೂ, ಎರಡು ಬಾರಿ ಕಾರ್ಯದರ್ಶಿಯಾಗಿಯೂ ಸೇವೆಸಲ್ಲಿಸಿದರು. ಇವರ ಸೇವಾ ಅವಧಿಯಲ್ಲೂ ಕೂಡ ಟ್ರಸ್ಟ್ ಮುನ್ನಡೆಯುತ್ತ ಬಂತು. ಟ್ರಸ್ಟ್‌ನ ಸ್ಥಾಪಕ ಧರ್ಮದರ್ಶಿಗಳಲ್ಲಿ ಒಬ್ಬರಾದ ಶ್ರೀ ಎಸ್.ಪಟ್ಟಾಭಿರಾಮನ್‌ರವರು ಪ್ರಾರಂಭಿಕ ದಿನಗಳಲ್ಲಿ ಟ್ರಸ್ಟ್‌ಗಾಗಿ ಬಹಳಷ್ಟು ಕೆಲಸ ಮಾಡಿದರಲ್ಲದೆ, ಹನ್ನೊಂದು ಬಾರಿ ಖಜಾಂಚಿಯಾಗಿ ಸೇವೆ ಸಲ್ಲಿಸಿದರು. ಟ್ರಸ್ಟಿನ ಸೇವಾ ಕಾರ್ಯಗಳನ್ನು ನೋಡಲು ತಮ್ಮ ಆಪ್ತ ಸ್ನೇಹಿತ ಶ್ರೀ ಸುಬ್ಬರಾವ್‌ರೊಂದಿಗೆ ಟ್ರಸ್ಟ್‌ಗೆ ಭೇಟಿಕೊಟ್ಟ ಶ್ರೀ ಎಸ್.ಪ್ರಾಣೇಶ್‌ರವರು ಕ್ರಮೇಣ ಟ್ರಸ್ಟ್ ಬಗ್ಗೆ ಅಭಿಮಾನ ಬೆಳೆಸಿಕೊಂಡರು. ನಂತರ ಖಜಾಂಚಿಯಾಗಿ ನಾಲ್ಕು ಬಾರಿ ಸೇವೆ ಸಲ್ಲಿಸಿದರು. ಶ್ರೀ ಡಿ.ಪ್ರಭಾಕರ್‌ರವರು ಎರಡು ಬಾರಿ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ಟ್ರಸ್ಟ್‌ನ ಆಶ್ರಯದ ಕರುಣಾಗೃಹದಲ್ಲಿ ವಿದ್ಯಾರ್ಥಿಯಾಗಿ ಬೆಳೆದ ಜಿ.ರಾಚಪ್ಪ ಧರ್ಮದರ್ಶಿಯಾಗಿ ಕೆಲಸ ಮಾಡಿ ನಂತರ ಒಂದು ಬಾರಿ ಖಜಾಂಚಿಯಾಗಿಯೂ ಕೆಲಸಮಾಡಿದ್ದಾರೆ. ಕಾರ್ಯದರ್ಶಿಗಳಾಗಿ ಸುರೇಂದ್ರ ಕೌಲಗಿಯವರು ಹದಿನೇಳು ಬಾರಿ, ಪ.ಮಲ್ಲೇಶ್ ಎರಡು ಬಾರಿ ಮತ್ತು ಸಂತೋಷ್ ಕೌಲಗಿಯವರು ಒಂದು ಬಾರಿ ಕಾರ್ಯನಿರ್ವಹಿಸಿದರು. ಇದಲ್ಲದೆ ಶ್ರೀ ಟಿ.ಎಲ್.ಭೈರಶೆಟ್ಟಿ, ಶ್ರೀ ಎಚ್.ಡಿ.ತುಳಸಿದಾಸ್ ಮತ್ತು ಶ್ರೀ ಪಿ.ಎಲ್.ಕುಮಾರಸ್ವಾಮಿ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿ ಗಿರಿಜಾ ಕೌಲಗಿ, ಶ್ರೀ ಕೆ.ಮಾದೇಗೌಡ, ಡಾ॥ಮನೋಹರ್ ಧರ್ಮದರ್ಶಿಗಳಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕರುಣಾಗೃಹದ ಹಳೆ ವಿದ್ಯಾರ್ಥಿ ಶ್ರೀ ಸಂತೋಷ್ ಶೀಲವಂತ್ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ರೀತಿಯಾಗಿ ಜನಪದ ಸೇವಾ ಟ್ರಸ್ಟ್‌ನ ಈ ಎಲ್ಲ ಧರ್ಮದರ್ಶಿಗಳು ಟ್ರಸ್ಟ್ ಏಳಿಗೆಗೆ ಶ್ರಮಿಸಿರುವುದು ಟ್ರಸ್ಟ್‌ನ ಇತಿಹಾಸದಲ್ಲಿ ದಾಖಲೆಗೊಂಡಿದೆ.

(ಮುಂದುವರಿಯುವುದು...)

* * *

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ಸೂಚನೆಯ ಮೇರೆಗೆ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಸರ್ವೋದಯ ಮಿತ್ರ ಮಂಡಲಿಗಳನ್ನು ರಚಿಸಬೇಕಿದೆ. ಇವುಗಳಲ್ಲಿ ಲೋಕಸೇವಕರಿದ್ದರಂತೂ ಉತ್ತಮ. ಈ ನಿಟ್ಟಿನಲ್ಲಿ ಮಂಗಳೂರು ಜಿಲ್ಲಾ ಸರ್ವೋದಯ ಮಂಡಲ, ಉಡುಪಿ ಜಿಲ್ಲಾ ಸರ್ವೋದಯ ಮಂಡಲ ರಚನೆಗೆ ಪ್ರಯತ್ನ ನಡೆದಿದೆ. ಅದರಂತೆಯೇ ಮಂಡ್ಯ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ರಚನೆಯ ಪ್ರಯತ್ನವೂ ನಡೆದಿದೆ. ಈ ಮೂರೂ ಜಿಲ್ಲೆಗಳ ಅಧಿಕೃತ ಸರ್ವೋದಯ ಮಿತ್ರ ಮಂಡಲಿಗಳ ರಚನೆ ಜುಲೈ ಮೊದಲ ವಾರದೊಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕರ್ನಾಟಕ ಸರ್ವೋದಯ ಮಂಡಲವನ್ನು ಸಂಘಟನಾತ್ಮಕವಾಗಿ ಬಲಪಡಿಸಲು ಮಂಡಲಿಗೆ ರಾಜ್ಯದ ಮೂವತ್ತು ಜಿಲ್ಲೆಗಳಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ನಡೆದಿದೆ. ಆಗಸ್ಟ್ ೩ ಮತ್ತು ೪ರಂದು ಫರೂಕಾಬಾದ್‌ನಲ್ಲಿ ಸರ್ವಸೇವಾ ಸಂಘದ ಕಾರ್ಯಕಾರಿ ಸಮಿತಿ ಸಭೆ ನಡೆಯಲ್ಲಿದೆ. ಈ ಸಭೆಯನ್ನು ಫರೂಕಾಬಾದ್ ಸರ್ವೋದಯ ಮಂಡಲ ಏರ್ಪಡಿಸಿದೆ. ಈ ಸಭೆಯ ಅಧ್ಯಕ್ಷತೆಯನ್ನು ಸರ್ವ ಸೇವಾ ಸಂಘದ ಅಧ್ಯಕ್ಷರಾದ ರಾಧಾಭಟ್ ವಹಿಸಲಿದ್ದಾರೆ. ಈ ಸಭೆಯಲ್ಲಿ ದೇಶದ ಎಲ್ಲ ರಾಜ್ಯಗಳ ಸರ್ವೋದಯ ಮಂಡಲಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಭಾಗವಹಿಸುವರು. ಪ್ರತಿ ವರ್ಷದಂತೆ ಈ ವರ್ಷವೂ ೨೦೧೧ ಡಿಸಂಬರ್ ೨೬ ರಿಂದ ೩೧ರವರೆಗೆ ತಮಿಳುನಾಡಿನ ಮಧುರೈ ನಗರದಲ್ಲಿ ಅಖಿಲ ಭಾರತ ಸರ್ವೋದಯ ಸಮಾಜದ ಸಮಾವೇಶ ನಡೆಯಲಿದೆ. ಈ ಸಮಾವೇಶಕ್ಕೆ ಬರುವವರಿಗೆ ರೈಲ್ವೇ ಪ್ರಯಾಣದ ಶೇ.೨೫ರಷ್ಟು ರಿಯಾಯಿತಿ ದೊರೆಯಲಿದೆ. ಈ ಸಮಾವೇಶದಲ್ಲಿ ಸುಮಾರು ಐದು ಸಾವಿರ ಸರ್ವೋದಯ ಮಿತ್ರರು ಭಾಗವಹಿಸುವ ನಿರೀಕ್ಷೆಯಿದೆ. ದೇಶದಾದ್ಯಂತ ನಡೆಯುತ್ತಿರುವ ಭ್ರಷ್ಟಚಾರ ನಿರ್ಮೂಲನಾ ಆಂದೋಲನದಲ್ಲಿ ಸರ್ವೋದಯ ಕಾರ್ಯಕರ್ತರು ಭಾಗವಹಿಸುತ್ತಿದ್ದಾರೆ. ಕರ್ನಾಟಕ ಸರ್ವೋದಯ ಮಂಡಲಿಗೆ ಹಿರಿಯ ಸರ್ವೋದಯ ಕಾರ್ಯಕರ್ತರಾದ ಮಂಗಳೂರಿನ ಶ್ರೀ ನಾಮದೇವಶಣೈ ಮತ್ತು ತುಮಕೂರಿನ ಎಮ್.ಬಸವಯ್ಯರವರನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಆಂದೋಲನದ ಪೋಷಕರು

ಸರ್ವೋದಯ ಆಂದೋಲನಕ್ಕೆ ಈ ಕೆಳಗೆ ಕಾಣಿಸಿದವರು ಇತ್ತೀಚಿಗೆ ಒಂದು ಸಾವಿರ ರುಪಾಯಿ ಕೊಟ್ಟು ಪೋಷಕರಾಗಿದ್ದಾರೆ.

೧) ವೆಂಕಟೇಶ್, ಬೆಂಗಳೂರು ತಮ್ಮ ಮಗಳು ಚಿ॥ ಅವನಿಯ ಹೆಸರಿನಲ್ಲಿ.

೨) ಡಾ॥ ಸಹನಾ, ಬೆಂಗಳೂರು ಚಿ॥ ಆದಿತ್ಯನ ಹೆಸರಿನಲ್ಲಿ.

* * *

ಖಾದಿ ವಿಚಾರ

ಗಾಂಧೀಜಿಯವರು ಕೇವಲ ಪಶ್ಚಿಮದ ಸಭ್ಯತೆಯ ವಿರುದ್ಧ ಮಾತ್ರವಿರಲಿಲ್ಲ. ಅವರು ಇಡೀ ಜಗತ್ತಿನ ಮೇಲೆ ಹೇರಲಾಗಿರುವ ಅಭಿವೃದ್ಧಿಯ ಸಿದ್ಧಾಂತಗಳ ವಿರುದ್ಧ ಕೂಡ ಇರುವುದು ಕಂಡು ಬರುತ್ತದೆ. ೧೯ನೇ ಶತಮಾನದ ಉತ್ತರಾರ್ಧ ಮತ್ತು ೨೦ನೇ ಶತಮಾನದ ಪೂರ್ವಾರ್ಧದಲ್ಲಿ ಜಗತ್ತಿನ ನಾಲ್ಕೂ ಕಡೆಗೆ ಆಧುನಿಕ ಅಭಿವೃದ್ಧಿಯ ಬಾವುಟ ಹಾರಾಡುತ್ತಿತ್ತು. ಪಶ್ಚಿಮದ ಔದ್ಯೋಗಿಕ ಕ್ರಾಂತಿಯ ತರುವಾಯ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮಾಧ್ಯಮದ ಮೂಲಕ ಜಗತ್ತಿನಲ್ಲಿ ವಸಾಹತುವಾದದ ಅಧ್ಯಾಯ ಪ್ರಾರಂಭವಾಯಿತು. ಅದರಲ್ಲಿ ಹಿಂದೂಸ್ತಾನದ ಜೊತೆಗೆ ಜಗತ್ತಿನ ಎಲ್ಲ ದೇಶಗಳ ಮೇಲೆ ಪಶ್ಚಿಮವೂ ತನ್ನ ಹಿಡಿತವನ್ನು ಸಾಧಿಸಿತು. ಇಂಥ ಸ್ಥಿತಿಯಲ್ಲಿ ಭಾರತದಲ್ಲಷ್ಟೇಯಲ್ಲ ಇಡೀ ಜಗತ್ತಿನಲ್ಲಿಯೇ ಆಧುನಿಕ ಅಭಿವೃದ್ಧಿಯ ಹೊಸ ಪರಿಭಾಷೆಗಳು ಸ್ಥಾಪಿತಗೊಂಡಿದ್ದವು. ಯಾರು ಕೂಡ ಇದರ ವಿರೋಧ ಮಾಡುವ ಸಾಹಸ ಕಾಣಬರುತ್ತಿರಲಿಲ್ಲ. ಇಂಥ ಸ್ಥಿತಿಯಲ್ಲಿ ಗಾಂಧೀಜಿ ಆಧುನಿಕ ಸಭ್ಯತೆ ಮತ್ತು ವಿಜ್ಞಾನದ ಎಲ್ಲ ಸಾಧನಗಳ ಮತ್ತು ಹೆಜ್ಜೆಗಳನ್ನು ತಿರಸ್ಕರಿಸುವ ಧೈರ್ಯವನ್ನು ಮಾಡುತ್ತಿರುವುದಾಗಿ ಕಂಡು ಬರುತ್ತದೆ. ಇದು ತನ್ನಷ್ಟಕ್ಕೆ ಬಹಳ ದೊಡ್ಡ ಮಾತು. ನಮಗೆ ಇಂದು ಈ ಪಶ್ಚಿಮ ಸಭ್ಯತೆ ಮತ್ತು ಅಭಿವೃದ್ಧಿಯ ಸಂಕಟ ಕಂಡು ಬರುತ್ತವೆ. ಆದರೆ ಗಾಂಧೀಜಿಗೆ ಈ ಸಂಕಟ ನೂರು ವರ್ಷಗಳ ಮೊದಲೇ ಕಾಣಬರುತ್ತಿತ್ತು. ಆದ್ದರಿಂದ ಅವರು 'ಹಿಂದ್‌ಸ್ವರಾಜ್'ದಲ್ಲಿ ಈ ಪಾಶವಿಕ ಸಭ್ಯತೆಯ ಬಗ್ಗೆ ಬರೆದರು. ನಿಃಸಂದೇಹವಾಗಿ ಗಾಂಧೀಜಿಗೆ ಮೇರುದಂಡ ಭಾರತೀಯ ಸಭ್ಯತೆಯೇ ಆಗಿತ್ತು. ಅವರು ಆಧುನಿಕ ವಿಕಾಸ ಮತ್ತು ಅದರ ವಿವಿಧ ಮುಖಗಳನ್ನು ಪೂರ್ಣವಾಗಿ ನಿರಾಕರಿಸುತ್ತಾರೆ. ಅವು ಪಶ್ಚಿಮ ದೇಶದ್ದಾಗಿವೆ ಎಂಬ ಕಾರಣಕ್ಕಲ್ಲ. ಅವು ಶೋಷಣೆಯ ಮೂಲ ಎಂಬ ಕಾರಣಕ್ಕಾಗಿ. ತಮಗೋಸ್ಕರ ತಯಾರಿಸಿಕೊಂಡ ಉಪಕರಣಗಳು ಸುಸಂಸ್ಕೃವಾಗಿಯೇ ಇದ್ದವು. ಅನೇಕ ಸಾಮ್ಯವಾದಿ ಚಿಂತಕರು ಗಾಂಧೀಜಿಯವರ ಖಾದಿ ಆಂದೋಲನದ ಟೀಕೆ ಮಾಡಿದ್ದಾರೆ. ಅವರ ಪ್ರಕಾರ ರೈತನಿಗೆ ಸಿಗುವ ಬಿಡುವಿನ ಸಮಯ ಅವನಿಗೆ ಅಗತ್ಯವಾಗಿದೆ. ಏಕೆಂದರೆ ಅವನು ಎಂಟು ತಿಂಗಳು ಒಂದೇ ಸಮನೆ ಸೊಂಟ ಮುರಿದು ಕೊಂಡು ಶ್ರಮ ಮಾಡುತ್ತಾನೆ. ಆದರೆ ಗಾಂಧೀಜಿ ಪ್ರಕಾರ ರೈತ ಬಿಡುವಿನ ಸಮಯದಲ್ಲಿ ಚರಕಾ ನಡೆಸಲು ಸಾಧ್ಯವಿದೆ. ಏಕೆಂದರೆ ಚರಕದಲ್ಲಿ ಮಾನಸಿಕ ಶಾಂತಿ ಕೂಡ ಸಿಗುತ್ತದೆ. ಮತ್ತು ತನ್ನ ಸಮಯದ ಉಪಯೋಗ ಮಾಡಿಕೊಳ್ಳಬಲ್ಲ. ಈ ಬಿಡುವಿನ ಸಮಯದ ಉಪಯೋಗ ರಾಷ್ಟ್ರಕ್ಕಾಗಿ ಇರಬೇಕು. ಔದ್ಯೋಗಿಕರಣ ಮತ್ತು ಪಶ್ಚಿಮದ ಭೌತಿಕ ಸಭ್ಯತೆ ಬಗ್ಗೆ ಗಾಂಧೀಜಿಯವರ ದೃಷ್ಟಿಯನ್ನು ಆಧುನಿಕ ಜನರು ಸ್ವೀಕರಿಸುವುದಿಲ್ಲ. ಅಲಹಾಬಾದ್‌ನ 'ಲೀಡರ್' ಎಂಬ ಪತ್ರಿಕೆ ಹೀಗೆ ಬರೆಯಿತು: "ಗಾಂಧೀಜಿಯವರ ಖಾದಿಯಾಗಲಿ ಗಿರಣಿಯ ನೂಲಿನಿಂದ ತಯಾರಾದ ಬಟ್ಟೆಯ

ಸ್ಥಾನದಲ್ಲಿ ಕೈ ಮಗ್ಗದ ಬಟ್ಟೆಯನ್ನು ಸ್ಥಾಪಿಸುವುದು ಅಭಿವೃದ್ಧಿಯ ತತ್ವವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವುದು".

ಚರಕಾದ ಬಗ್ಗೆ ಗಾಂಧೀಜಿಯವರ ದೃಷ್ಟಿಕೋನ ಮತ್ತು ಅವರ ಸ್ವದೇಶಿ ವಿಚಾರಗಳ ಕಾರಣದಿಂದಾಗಿ ಪಾಶ್ಚಾತ್ಯರೆಂದು ಕರೆದುಕೊಳ್ಳುವ ಜನರು ಅವುಗಳನ್ನು ವಿಜ್ಞಾನ ವಿರೋಧಿಯೆಂದು ತಿಳಿಯುತ್ತಾರೆ. ಆದರೆ ಗಾಂಧೀಜಿಯಂತೂ ಖಾದಿಯ ತಂತ್ರದ ಇಡೀ ಬೆಳವಣಿಗೆಯನ್ನು ವೈಜ್ಞಾನಿಕ ಪದ್ಧತಿಯಿಂದಲೇ ಮಾಡಿದ್ದಾರೆ. ಈ ವೈಜ್ಞಾನಿಕ ಪದ್ಧತಿ ಪಾಶ್ಚಾತ್ಯ ವಿಜ್ಞಾನ ನ್ಯೂಟನ್ ಮತ್ತು ಡಾರ್ವಿನ್ನರ ವಿಜ್ಞಾನದಿಂದ ಪೂರ್ಣವಾಗಿ ಭಿನ್ನ. ಹತ್ತಿ ಉತ್ಪಾದನೆಯಿಂದ ಹಿಡಿದು ಬಟ್ಟೆ ತಯಾರಿಸುವವರೆಗೆ ಇಡೀ ಪ್ರಕ್ರಿಯೆ ಪೂರ್ಣ ರೀತಿಯಲ್ಲಿ ವೈಜ್ಞಾನಿಕವಾಗಿದೆ. ಗಾಂಧೀಜಿಯವರ ಪ್ರಕಾರ ಖಾದಿಬಟ್ಟೆ ಧರಿಸುವುದರಿಂದ ಮಾತ್ರ ಎಲ್ಲವೂ ಆಗುವುದಿಲ್ಲ, ಬದಲಿಗೆ ಅದರೊಂದಿಗೆ ನಮ್ಮ ಆಚಾರ, ವಿಚಾರಗಳಲ್ಲಿ ಕೂಡ ವೈಜ್ಞಾನಿಕತೆಯನ್ನು ತರಬೇಕಾಗುವುದು. ಖಾದಿಯ ವಿಜ್ಞಾನವೇನೂ ಪ್ರಯೋಗ ಶಾಲೆಯ ವಿಜ್ಞಾನವಲ್ಲ. ಬದಲಿಗೆ ಅದು ಪ್ರಾಯೋಗಿಕ ವಿಜ್ಞಾನ ಮತ್ತು ಸಮಾಜದಲ್ಲಿ ಸಮರಸತೆ ತರುವ ವಿಜ್ಞಾನವಾಗಿದೆ. ಈ ಸಮರಸತೆ ತರುವ ವಿಜ್ಞಾನದಲ್ಲಿ ಕೇವಲ ವೈಜ್ಞಾನಿಕ ಮತ್ತು ವಿದ್ಯಾವಂತ ಜನರು ಮಾತ್ರ ಭಾಗಿಯಾಗುವುದಲ್ಲದೇ ಅನಕ್ಷರಸ್ಥ ಜನರು ಕೂಡ ಇದರಲ್ಲಿ ತಮ್ಮ ಪಾತ್ರ ನಿಭಾಯಸಬಲ್ಲರು. ಆದ್ದರಿಂದ ಖಾದಿಯ ವಿಜ್ಞಾನ ಬೇರೆ ವಿಜ್ಞಾನದ ಹೋಲಿಕೆಯಲ್ಲಿ ಅಧಿಕ ಪ್ರಯೋಗಗಾಮಿ ಮತ್ತು ತೆರೆದ ಮನಸ್ಸಿನದ್ದಾಗಿದೆ. ಖಾದಿಯ ವಿಜ್ಞಾನ ಪರಂಪರಾಗತವೂ ಆಗಿದೆ. ಆದ್ದರಿಂದ ಇದು ತಲೆಮಾರುಗಳ ಅಂತರವನ್ನು ಕೂಡ ಕಡಿಮೆ ಮಾಡುತ್ತದೆ. ಖಾದಿ ವಿಜ್ಞಾನ ಆಧುನಿಕ ವಿಜ್ಞಾನದಂತೆ ಮಾಲಿನ್ಯವನ್ನು ಉಂಟು ಮಾಡುವುದಿಲ್ಲ ಮತ್ತು ಪರಿಸರಕ್ಕೂ ಕೂಡ ಯಾವುದೇ ಹಾನಿ ಉಂಟುಮಾಡುವುದಿಲ್ಲ.

ಸರ್ವೋದಯ ದಿನಚರಿ / ಡೈರಿ :-

ಪ್ರತಿವರ್ಷದಂತೆ ಸರ್ವಸೇವಾ ಸಂಘವು ಸರ್ವೋದಯ ದಿನಚರಿಯನ್ನು ೨೦೧೨ನೇ ಸಾಲಿಗೆ ಪ್ರಕಟಪಡಿಸಲಿದೆ. ಈ ಡೈರಿಯು ಡೆಮಿ ಅಳತೆಯದ್ದಾಗಿರುತ್ತದೆ. ಹಬ್ಬ ಹಾಗೂ ಸ್ಮರಣೀಯ ದಿವಸಗಳ ಪಟ್ಟಿ, ಸರ್ವಧರ್ಮೀಯ ಪ್ರಾರ್ಥನೆ, ಗಾಂಧೀ ಜೀವನ ವೃತ್ತಾಂತ ಮತ್ತು ಹನ್ನೊಂದು ವ್ರತಗಳ ಪರಿಚಯ, ಎಸ್.ಟಿ.ಡಿ. ಸಂಖ್ಯೆಗಳು, ಭಾರತದಲ್ಲಿಯ ವಿವಿಧ ಸರ್ವೋದಯ ಆಶ್ರಮಗಳ ವಿಳಾಸಗಳು ಮತ್ತು ಎಲ್ಲ ಸರ್ವೋದಯ ಮಂಡಳಿಗಳ ಅಧ್ಯಕ್ಷರ ಹೆಸರುಗಳು ಇತ್ಯಾದಿ ಇರುತ್ತವೆ. ಹೀಗೆ ದಿನಚರಿ ಸರ್ವೋದಯ ಕಾರ್ಯಕರ್ತರಿಗೆ ಮತ್ತು ಇತರರಿಗೆ ಅಗತ್ಯವಾದ ಸಂಗಾತಿಯಾಗಿದೆ. ಇದರ ಬೆಲೆ ಕೇವಲ ನೂರು ರುಪಾಯಿಗಳು. ಇದು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿದೆ. ಈ ದಿನಚರಿಯನ್ನು ಖರೀದಿಸಲು ಇಷ್ಟಪಡುವವರು ತಮಗೆ ಬೇಕಾದ ದಿನಚರಿಗಳ ಸಂಖ್ಯೆ ಮತ್ತು ಭಾಷೆಯನ್ನು ತಿಳಿಸಿ ಕೂಡಲೇ **ಕರ್ನಾಟಕ ಸರ್ವೋದಯ ಮಂಡಲ, 'ವಲ್ಲಭ ನಿಕೇತನ', ಕುಮಾರಪಾರ್ಕ್ ಪೂರ್ವ, ಬೆಂಗಳೂರು – ೫೬೦೦೦೧.** ಈ ವಿಳಾಸಕ್ಕೆ ಪತ್ರ ಬರೆಯ ಬೇಕಾಗಿ ವಿನಂತಿ.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಸಿ.ವಿ.ತಿರುಮಲರಾವ್, ಶ್ರೀಮತಿ ಪ್ರೇಮಲೀಲಾ,
ಪ್ರೊ॥ ಜಿ.ವೆಂಕಟಸುಬ್ಬಯ್ಯ, – ಬೆಂಗಳೂರು
ಶ್ರೀ ಗುರುರಾಜ ಹಬ್ಬು – ಬಾಗಲಕೋಟೆ
ಶ್ರೀ ಕೆ.ಪುಟ್ಟಸ್ವಾಮಿ – ಮದ್ದೂರು
ಡಾ॥ ಸಿ.ಆರ್.ಮಂಜುನಾಥ್ – ಮೇಲುಕೋಟೆ
ಶ್ರೀ ಕೆ.ಸುಬ್ಬರಾವ್ – ಶಿವಮೊಗ್ಗ
ಶ್ರೀ ಭೀಮಸಿಂಗ್ ಗೌಗಿ – ತುಮಕೂರು
ಶ್ರೀ ಟಿ.ಜಿ.ಸತ್ಯನಾರಾಯಣ – ತಗಡೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಉದಯ ಸಂಡೂರು – ಬೆಂಗಳೂರು
ಪ್ರೊ॥ ಎಂ.ಜ್ಞಾನಂ – ಮೈಸೂರು
ಶ್ರೀ ಬಿ.ಸಿ.ಶಿವಾನಂದ, ಶ್ರೀ ಜಿ.ವಿ.ನಾಗರಾಜು – ಮಂಡ್ಯ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA

Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.